ಸೋಮವಾರ, ಜುಲೈ 10, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪವಿತ್ರ ಜಲ

ಪ್ರಯಾಗ್‌ರಾಜ್‌ನಲ್ಲಿ ಭಾನುವಾರ ಶ್ರಾವಣ ಮಾಸದ ವಿಶೇಷ ಪೂಜೆಗೆ ಪವಿತ್ರ ಗಂಗಾ ಜಲವನ್ನು ಭಕ್ತರು ಕೊಂಡೊಯ್ದರು




ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ವರೂರಿನ ಗುಣಧರ ನಂದಿ ಮಹಾರಾಜ ಎಚ್ಚರಿಕೆ • ಆಮರಣ ಉಪವಾಸ ಸತ್ಯಾಗ್ರಹ ತಾತ್ಕಾಲಿಕವಾಗಿ ವಾಪಸ್

ಮುನಿಗಳ ರಕ್ಷಣೆ: ಸರ್ಕಾರಕ್ಕೆ ಸಂಜೆ ಗಡುವು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಗೃಹ ಸಚಿವ ಜಿ. ಪರಮೇಶ್ವರ ಅವರು ಸೋಮವಾರ ಕ್ಷೇತ್ರಕ್ಕೆ ಭೇಟಿ ನೀಡುವುದಾಗಿ ಭರವಸೆ ಕೊಟ್ಟ ಹಿನ್ನೆಲೆಯಲ್ಲಿ ಆಮರಣ ಉಪವಾಸ ನಿರ್ಧಾರವನ್ನು ತಾತ್ಕಾಲಿಕವಾಗಿ ಕೈಬಿಟ್ಟಿದ್ದೇನೆ. ಸಂಜೆ 5.30ರ ಒಳಗೆ ಸರ್ಕಾರ ಮುನಿಗಳ ರಕ್ಷಣೆ ಕುರಿತು ಲಿಖಿತವಾಗಿ ಹೇಳಿಕೆ ನೀಡಬೇಕು. ಇಲ್ಲದಿದ್ದರೆ ಉಪವಾಸ ಮುಂದುವರಿಸಿ, ದೇಹ ತ್ಯಾಗಕ್ಕೂ ಸಿದ್ಧನಿದ್ದೇನೆ' ಎಂದು ವರೂರಿನ ಗುಣಧರ ನಂದಿ ಮಹಾರಾಜರು ಎಚ್ಚರಿಕೆ ನೀಡಿದರು.



ಗುಣಧರ ನಂದಿ ಮಹಾರಾಜ

ಚಿಕ್ಕೋಡಿ ತಾಲ್ಲೂಕಿನ ಹಿರೇಕೋಡಿಯ ನಂದಿಪರ್ವತ ಆಶ್ರಮದ ಮುನಿ ಕಾಮಕುಮಾರ ನಂದಿ ಮಹಾರಾಜರ ಹತ್ಯೆ ಖಂಡಿಸಿ, ಜೈನ ಮುನಿಗಳ ರಕ್ಷಣೆಗಾಗಿ ಆಮರಣ ಉಪವಾಸ ಕೈಗೊಂಡಿದ್ದ ಅವರು ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದರು.

'ಮುನಿಗಳಿಗೆ ವಿದ್ಯುತ್ ಶಾಕ್ ನೀಡಿ, ದೇಹವನ್ನು ತುಂಡು–ತುಂಡಾಗಿ ಕತ್ತರಿಸಿ ಬೋರ್‌ವೆಲ್‌ನಲ್ಲಿ ಹಾಕಲಾಗಿದೆ. ಇದೊಂದು ಅಮಾನುಷ ಹತ್ಯೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ವಿರುದ್ಧ ಅಸಮಾಧಾನ: 'ಮುನಿಗಳ ನಾಪತ್ತೆ ಪ್ರಕರಣ ದಾಖಲಾಗಿ ಮೂರು ದಿನಗಳಾದರೂ, ಸರ್ಕಾರ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಮುಖ್ಯಮಂತ್ರಿ ಸಹ ಸ್ಪಂದಿಸಿರಲಿಲ್ಲ. ಅಲ್ಪಸಂಖ್ಯಾತ ಸಮುದಾಯದವರ ಮತಗಳು ಕಡಿಮೆ ಇರುತ್ತವೆ ಎಂದು ನಿರ್ಲಕ್ಷ್ಯ ಮಾಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮುದಾಯದವರಿಗೆ ಹೀಗೆ ಆಗಿದ್ದರೆ ಸುಮ್ಮನಿರುತ್ತಿದ್ದರೇ?' ಎಂದು ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ವರೂರಿನ ಆಶ್ರಮಕ್ಕೆ ಭೇಟಿ ನೀಡಿದ ಕೇಂದ್ರ ಗಣಿ ಮತ್ತು ಕಲ್ಲಿದ್ದಲು ಖಾತೆ ಸಚಿವ ಪ್ರಲ್ಹಾದ ಜೋಶಿ ಅವರ ಮೂಲಕ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಜೈನ ಮುನಿಗಳಿಗೆ, ಬಸದಿಗಳಿಗೆ ರಕ್ಷಣೆ ಒದಗಿಸುವಂತೆ ಮನವಿ ಪತ್ರ ಸಲ್ಲಿಸಿದರು.





ಚಿಕ್ಕೋಡಿ ತಾಲ್ಲೂಕಿನ ಹಿರೇಕೋಡಿ ಗ್ರಾಮದ ನಂದಿ ಪರ್ವತ ಆಶ್ರಮದ ಬಳಿ ಮುನಿ ಕಾಮಕುಮಾರ ನಂದಿ ಮಹಾರಾಜರ ಚಿತೆಗೆ ನಾಂದಣಿಯ ಜಿನಸೇನ ಭಟ್ಟಾರಕ ಸ್ವಾಮೀಜಿ, ವರೂರಿನ ಧರ್ಮಸೇನ ಭಟ್ಟಾರಕ ಸ್ವಾಮೀಜಿ, ಕೊಲ್ಹಾಪುರದ ಲಕ್ಷ್ಮೀಸೇನ ಭಟ್ಟಾರಕ ಸ್ವಾಮೀಜಿ ಅಂತಿಮ ನಮನ ಸಲ್ಲಿಸಿದರು (ಎಡಚಿತ್ರ). 'ಜೈನ ಸ್ವಾಮೀಜಿಯ ಕೊಲೆ ಮಾಡಿದವರನ್ನು ಗಲ್ಲುಶಿಕ್ಷೆಗೆ ಗುರಿಪಡಿಸಬೇಕು' ಎಂದು ಒತ್ತಾಯಿಸಿ ಬೆಳಗಾವಿ ತಾಲ್ಲೂಕಿನ ಹಾಲಗಾದ ಸುವರ್ಣ ವಿಧಾನಸೌಧ ಮುಂಭಾಗದಲ್ಲಿ ಜೈನ ಸಮುದಾಯದವರು ಮುನಿ ಬಾಲಾಚಾರ್ಯ ಸಿದ್ಧಸೇನ ಮಹಾರಾಜರ ನೇತೃತ್ವದಲ್ಲಿ ಭಾನುವಾರ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು

ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ

ಬೆಳಗಾವಿ: 'ಮುನಿ ಕಾಮಕುಮಾರ ನಂದಿ ಮಹಾರಾಜರನ್ನು ಕೊಲೆ ಮಾಡಿದ ಆರೋಪಿಗಳಿಗೆ ಗಲ್ಲುಶಿಕ್ಷೆ ನೀಡಬೇಕು' ಎಂದು ಆಗ್ರಹಿಸಿ ಜೈನ ಸಮುದಾಯದವರು ಬೆಳಗಾವಿಯ ಸುವರ್ಣ ವಿಧಾನಸೌಧ ಮುಂಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಮುನಿ ಬಾಲಾಚಾರ್ಯ ಸಿದ್ಧಸೇನ ಮಹಾರಾಜ, ಅವರು 'ಇದು ಯಾವುದೇ ಧರ್ಮ, ಜಾತಿ, ಪಕ್ಷ ಅಥವಾ ಸರ್ಕಾರದ ವಿರುದ್ಧ ಪ್ರತಿಭಟನೆಯಲ್ಲ. ರಾಜ್ಯದಲ್ಲಿ ಜೈನ ಮುನಿಗಳ ಹೆಸರಿನಲ್ಲಿ ಯಾವುದೇ ಆಸ್ತಿ, ಬ್ಯಾಂಕ್ ಖಾತೆಗಳಿಲ್ಲ. ಅವರಿಗೆ ಸರ್ಕಾರ ರಕ್ಷಣೆ ಕೊಡಬೇಕು. ನಮ್ಮದಷ್ಟೇ ಅಲ್ಲ; ಎಲ್ಲ ಧರ್ಮಗಳ ರಕ್ಷಣೆಯೂ ಆಗಬೇಕು. ಮುನಿಗಳ ಕೊಲೆ ಪ್ರಕರಣದಲ್ಲಿ ಭಾಗಿಯಾದವರಿಗೆ ಕಠಿಣ ಶಿಕ್ಷೆ ಕೊಡಬೇಕು' ಎಂದು ಆಗ್ರಹಿಸಿದರು.

ಶಾಸಕ ಅಭಯ ಪಾಟೀಲ, ಮಾಜಿ ಶಾಸಕ ಸಂಜಯ ಪಾಟೀಲ, ಹಾಗೂ ಜೈನ ಸಮಾಜದ ಮುಖಂಡರರು ಇದ್ದರು.

ಮೌನ ಪ್ರತಿಭಟನೆ ಇಂದು: ಜೈನಮುನಿಗಳ ಹತ್ಯೆ ಖಂಡಿಸಿ ಜೈನ ಸಮಾಜವು ಸೋಮವಾರ ಬೆಳಿಗ್ಗೆ 10 ಗಂಟೆಗೆ ಪಟ್ಟಣದಲ್ಲಿ ಮೌನ ಪ್ರತಿಭಟನೆ ನಡೆಸಲು ನಿರ್ಧರಿಸಿದೆ.

ಕಾಮಕುಮಾರ ನಂದಿ ಮಹಾರಾಜರ ಅಂತ್ಯಕ್ರಿಯೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ಬರ್ಬರವಾಗಿ ಹತ್ಯೆಗೀಡಾದ ಹಿರೇಕೋಡಿಯ ನಂದಿಪರ್ವತ ಆಶ್ರಮದ ಮುನಿ ಕಾಮಕುಮಾರ ನಂದಿ ಮಹಾರಾಜರ ಅಂತ್ಯಕ್ರಿಯೆ ಅವರ ಆಶ್ರಮದ ಬಳಿ ಭಾನುವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಸಕಲ ವಿಧಿ–ವಿಧಾನಗಳೊಂದಿಗೆ ನೆರವೇರಿತು.

ನಾಂದಣಿಯ ಜಿನಸೇನ ಭಟ್ಟಾರಕ ಸ್ವಾಮೀಜಿ, ವರೂರಿನ ಧರ್ಮಸೇನ ಭಟ್ಟಾರಕ ಸ್ವಾಮೀಜಿ, ಕೊಲ್ಹಾಪುರದ ಲಕ್ಷ್ಮೀಸೇನ ಭಟ್ಟಾರಕ ಪಟ್ಟಾಚಾರ್ಯ ಸ್ವಾಮೀಜಿ ಅಂತ್ಯಕ್ರಿಯೆಯ ನೇತೃತ್ವ ವಹಿಸಿದ್ದರು.

ಬೆಳಿಗ್ಗೆಯಿಂದಲೇ ಜೈನಮುನಿ ಅವರ ಅಂತಿಮ ದರ್ಶನಕ್ಕಾಗಿ ಭಕ್ತರು ಆಶ್ರಮದತ್ತ ಧಾವಿಸಿದ್ದರು. ಬೆಳಗಾವಿಯ ಜಿಲ್ಲಾಸ್ಪತ್ರೆಯಲ್ಲಿ ಸ್ವಾಮೀಜಿ ಪಾರ್ಥಿವ ಶರೀರದ ಮರಣೋತ್ತರ ಪರೀಕ್ಷೆ ನಡೆಸಿ, ಮಧ್ಯಾಹ್ನ 12 ಗಂಟೆಗೆ ಹಿರೇಕೋಡಿಗೆ ತರಲಾಯಿತು. ಆಶ್ರಮದ ಪಕ್ಕದಲ್ಲಿ ಅಂತ್ಯಕ್ರಿಯೆಗೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಅಂತ್ಯಕ್ರಿಯೆಗಾಗಿ ಭಕ್ತರು ಹಾಲು, ತುಪ್ಪ, ಕೊಬ್ಬರಿ, ಉತ್ತುತ್ತಿ, ಕರ್ಪೂರ, ಶ್ರೀಗಂಧ ಕಟ್ಟಿಗೆಗಳನ್ನು ತಂದಿದ್ದರು.

ಆಚಾರ್ಯರ ಪೂರ್ವಾಶ್ರಮದ ದೊಡ್ಡಪ್ಪನ ಮಗ ಡಾ.ಬಾಬು ಭೀಮಪ್ಪ ಉಗಾರೆ ಧಾರ್ಮಿಕ ವಿಧಿ–ವಿಧಾನಗಳನ್ನು ನೆರವೇರಿಸಿ, ಚಿತೆಗೆ ಅಗ್ನಿಸ್ಪರ್ಶ ಮಾಡಿದರು. ವಿಧಿವಿಧಾನ ಪೂರೈಸುವ ತನಕವೂ ಭಕ್ತರು 'ಣಮೋಕಾರ' ಮಂತ್ರವನ್ನು ಪಠಿಸಿದರು.

ಶಾಸಕರಾದ ಲಕ್ಷ್ಮಣ ಸವದಿ, ಗಣೇಶ ಹುಕ್ಕೇರಿ, ಡಿ.ಎಂ. ಐಹೊಳೆ ಸೇರಿದಂತೆ ಹಲವರು ಸ್ವಾಮೀಜಿ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

ಜೈನ ಮುನಿ ಕಾಮಕುಮಾರ ನಂದಿ ಹತ್ಯೆಯನ್ನು ಖಂಡಿಸಿ ಸೋಮವಾರ ವಿಧಾನ ಸಭೆಯಲ್ಲಿ ಹೋರಾಟ ನಡೆಸಲಾಗುವುದು
ಬಸವರಾಜ ಬೊಮ್ಮಾಯಿ
ಬಿಜೆಪಿ ಶಾಸಕ

ಹಂತಕರ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳಲಿದೆ. ಯಾರೂ ಪ್ರಚೋದನೆಗೆ ಒಳಗಾಗಬಾರದು ಮತ್ತು ಪ್ರಚೋದನೆ ನೀಡಬಾರದು
ಡಿ.ಕೆ. ಶಿವಕುಮಾರ್
ಉಪ ಮುಖ್ಯಮಂತ್ರಿ

ಹತ್ಯೆಯ ತನಿಖೆ ನಡೆಸಿ, ಕೊಲೆಗಡುಕರನ್ನು ಕಠಿಣ ಶಿಕ್ಷೆಗೆ ಒಳಪಡಿಸಬೇಕು. ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು
ನಳಿನ್ ಕುಮಾರ್ ಕಟೀಲ್
ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಸುದ್ದಿ 2 ನಿಮಿಷ

ಜೈನ ಮುನಿ ಕೊಲೆ: ಭಟ್ಟಾರಕ ಸ್ವಾಮೀಜಿ ಖಂಡನೆ

ಶ್ರವಣಬೆಳಗೊಳ (ಹಾಸನ ಜಿಲ್ಲೆ): 'ಬೆಳಗಾವಿ ಜಿಲ್ಲೆಯ ಹಿರೇಕೋಡಿಯ ನಂದಿಪರ್ವತ ಜೈನ ಕ್ಷೇತ್ರದ ಕಾಮಕುಮಾರ ನಂದಿ ಮಹಾರಾಜರನ್ನು ಕೊಲೆ ಮಾಡಿರುವುದು ಖಂಡನೀಯ. ಈ ಹೇಯ ಕೃತ್ಯ ಎಸಗಿದವರಿಗೆ ಕಠಿಣ ಶಿಕ್ಷೆ ನೀಡಬೇಕು' ಎಂದು ಶ್ರವಣಬೆಳಗೊಳ ಜೈನ ಮಠದ ಪೀಠಾಧ್ಯಕ್ಷ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಆಗ್ರಹಿಸಿದ್ದಾರೆ.



ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಸ್ವಾಮೀಜಿ, 'ಇದು ಜೈನ ಸಮಾಜಕ್ಕೆ ಆಘಾತ ಉಂಟು ಮಾಡಿದೆ. ಅಹಿಂಸೆ, ತ್ಯಾಗದ ಪ್ರತಿಪಾದಕರು ಹಾಗೂ ಶಾಂತಿ ಪ್ರಿಯರಾದ ಜೈನ ಮುನಿಗಳ ಮೇಲೆ ಇಂತಹ ಕೃತ್ಯಗಳು ಮರುಕಳಿಸದಂತೆ ರಕ್ಷಣೆ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

'ಜೈನ ಬಸದಿಗಳು, ಮಠಗಳು, ಮುನಿಗಳು, ಸಾಧು-ಸಂತರು, ಮಾತಾಜಿಯವರು ವಾಸ್ತವ್ಯವಿರುವ ಆಶ್ರಮ ಹಾಗೂ ಅವರ ವಿಹಾರ ಸಂದರ್ಭದಲ್ಲಿ ಸೂಕ್ತ ಮುನ್ನೆಚ್ಚರಿಕೆ ಮತ್ತು ಭದ್ರತಾ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು' ಎಂದು ಅವರು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಸರ್ಕಾರದಿಂದ ಆರೋಪಿಗಳ ರಕ್ಷಣೆಗೆ ಯತ್ನ: ಪ್ರಲ್ಹಾದ ಜೋಶಿ

ಹುಬ್ಬಳ್ಳಿ: ಆರೋಪಿಗಳನ್ನು ರಕ್ಷಿಸಲು ರಾಜ್ಯ ಸರ್ಕಾರ ಯತ್ನಿಸುತ್ತಿದ್ದು, ತುಷ್ಟೀಕರಣ ರಾಜಕಾರಣ ಮಾಡುತ್ತಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು.

ಭಾನುವಾರ ವರೂರಿನ ತೀರ್ಥಕ್ಷೇತ್ರದ ಮುನಿ ಗುಣಧರ ನಂದಿ ಮಹಾರಾಜ ಅವರನ್ನು ಭೇಟಿ ಮಾಡಿ, ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

'ಕಾಮಕುಮಾರ ನಂದಿ ಮುನಿಗಳು ನಾಪತ್ತೆಯಾಗಿ ಮೂರು ದಿನವಾದರೂ ಸರ್ಕಾರ, ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಬೆಳಗಾವಿಯ ಶಾಸಕರು ಪ್ರತಿಭಟನೆಗೆ ಮುಂದಾದಾಗ ಎಚ್ಚೆತ್ತುಕೊಂಡು, ಅವರ ಪತ್ತೆಗೆ ಮುಂದಾಯಿತು. ಅವರ ಮೃತದೇಹ ಪತ್ತೆಯಾದ ನಂತರ ಆರೋಪಿಗಳ ರಕ್ಷಣೆಗೆ ಮುಂದಾಗಿ, ಮುನಿಗಳು ಬಡ್ಡಿ ವ್ಯವಹಾರ ನಡೆಸುತ್ತಿದ್ದರು ಎನ್ನುವ ಹೇಳಿಕೆ ಪಡೆಯುವ ಯತ್ನ ನಡೆಸುತ್ತಿದೆ. ಹಣಕಾಸಿನ ವ್ಯವಹಾರ ಇಟ್ಟುಕೊಂಡಿದ್ದರು ಎಂದು ಅಪಪ್ರಚಾರ ಮಾಡಲು ಮುಂದಾಗುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಈ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಿದರೆ ಸತ್ಯ ಹೊರಬೀಳಲಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಗಮನಕ್ಕೂ ತರುತ್ತೇನೆ. ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ನೀಡಬೇಕಾದ ಸಹಕಾರ ಮತ್ತು ಮಾರ್ಗದರ್ಶನ ನೀಡಲಾಗುವುದು' ಎಂದು ಜೋಶಿ ತಿಳಿಸಿದರು.

ಗ್ರಾ.ಪಂಚಾಯಿತಿ ಸದಸ್ಯರ ಪ್ರಕರಣ

ಅನರ್ಹತೆಗೆ ನೋಟಿಸ್ ಅಗತ್ಯವಿಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಸ್ತಿ ವಿವರಗಳನ್ನು ಸಲ್ಲಿಸದ ಗ್ರಾಮ ಪಂಚಾಯಿತಿ ಸದಸ್ಯರನ್ನು ಅವರ ಸ್ಥಾನದಿಂದ ಅನರ್ಹಗೊಳಿಸಲು ಷೋಕಾಸ್ ನೋಟಿಸ್ ನೀಡುವ ಅಗತ್ಯ ಇಲ್ಲ' ಎಂದು ಹೈಕೋರ್ಟ್ ಆದೇಶಿಸಿದೆ.

ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಮೋಘಾ (ಕೆ) ಗ್ರಾಮ ಪಂಚಾಯಿತಿ ಸದಸ್ಯೆ ಲಲಿತಾ ಬಾಯಿ ಕೋಂ ಮಲ್ಕಣ್ಣ ಪಾಟೀಲ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಕಲಬುರಗಿ ಪೀಠದಲ್ಲಿದ್ದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ.

'ಅರ್ಜಿದಾರರು ಆಸ್ತಿ ವಿವರ ಸಲ್ಲಿಸುವುದು ಸಾಂವಿಧಾನಿಕ ಕರ್ತವ್ಯ. ಈ ಪ್ರಕರಣದಲ್ಲಿ ಆ ಕರ್ತವ್ಯ ನಿಭಾಯಿಸಿಲ್ಲ. ಆದಾಗ್ಯೂ, ಚುನಾವಣಾ ಆಯೋಗ ಅನರ್ಹತೆ ಆದೇಶವನ್ನು ನಿಗದಿತ ಅವಧಿ ಮುಗಿದ ನಂತರ ಅಂದರೆ, 10 ತಿಂಗಳ ಬಳಿಕ ಹೊರಡಿಸಿದೆ. ಈ ಕ್ರಮದಲ್ಲಿ ಲೋಪವಿಲ್ಲ. ಒಂದು ವೇಳೆ ಸದಸ್ಯರು ನಿಯಮ ಪಾಲಿಸಿ ಅದರಲ್ಲಿ ಲೋಪವಾಗಿದ್ದರೆ ಷೋಕಾಸ್ ನೋಟಿಸ್ ಕುರಿತಂತೆ ತಕರಾರು ಎತ್ತಬಹುದಿತ್ತು' ಎಂದಿದೆ.

'ಒಂದು ವೇಳೆ ತಡವಾಗಿ ಆಸ್ತಿ ವಿವರ ಸಲ್ಲಿಸಿ ಅದು ಸ್ವೀಕೃತವಾಗಿರದಿದ್ದರೆ ಅಥವಾ ಸಲ್ಲಿಸಿದ ವಿವರಗಳು ಸುಳ್ಳಾಗಿದ್ದರೆ ಅಂತಹ ಸಂದರ್ಭದಲ್ಲಿ ಷೋಕಾಸ್ ನೋಟಿಸ್ ನೀಡಬೇಕಾದ ಪರಿಸ್ಥಿತಿ ಇರುತ್ತಿತ್ತು. ಆದರೆ, ಈ ಪ್ರಕರಣದಲ್ಲಿ ಅಂತಹ ಪರಿಸ್ಥಿತಿ ಉದ್ಭವಿಸಿಲ್ಲ' ಎಂದು ಸ್ಪಷ್ಟಪಡಿಸಿದೆ.

ನಿಯಮ ಹೇಳುವುದೇನು?: ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ- 1993 ರ ಕಲಂ 43ಬಿ (1) ಅನುಸಾರ ಗ್ರಾಮ ಪಂಚಾಯಿತಿ ಸದಸ್ಯರು ಚುನಾಯಿತರಾದ ದಿನಾಂಕ ಅಥವಾ ಅಧಿಕಾರ ವಹಿಸಿಕೊಂಡ ಮೂರು ತಿಂಗಳಲ್ಲಿ ರಾಜ್ಯ ಚುನಾವಣಾ ಆಯೋಗ ನಿಗದಿ ಪಡಿಸಿರುವ ನಮೂನೆಯಲ್ಲಿ ಸಂಬಂಧಿಸಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮೂಲಕ ಆಸ್ತಿ ವಿವರಗಳನ್ನು ಸಲ್ಲಿಸಬೇಕು.



ಕಲಬುರಗಿಯಲ್ಲಿ ಭಾನುವಾರ ನಡೆದ ಕೇಂದ್ರ ಸರ್ಕಾರದ ಒಬಿಸಿ ಮೀಸಲಾತಿ ಪಟ್ಟಿಗೆ ವೀರಶೈವ–ಲಿಂಗಾಯತ ಉಪಪಂಗಡಗಳ ಸೇರ್ಪಡೆಯ ಹಕ್ಕೊತ್ತಾಯ ಸಭೆಯಲ್ಲಿ ವಿವಿಧ ಮಠಾಧೀಶರು ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಕೇಂದ್ರ ಒಬಿಸಿ ಪಟ್ಟಿಗೆ ಸೇರಿಸಲು ಮಠಾಧೀಶರ ಆಗ್ರಹ

ಪ್ರಜಾವಾಣಿ ವಾರ್ತೆ

ಕಲಬುರಗಿ: ವೀರಶೈವ–ಲಿಂಗಾಯತ ಉಪ ಪಂಗಡಗಳನ್ನು ಕೇಂದ್ರ ಸರ್ಕಾರದ ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಮೀಸಲಾತಿ ಪಟ್ಟಿ ಸೇರ್ಪಡೆಗೆ ಶಿಫಾರಸು ಮಾಡುವಂತೆ ರಾಜ್ಯ ಸರ್ಕಾರದ ಮೇಲೆ ಒತ್ತಡ ತರುವುದಾಗಿ ಸಮುದಾಯದ ಜನಪ್ರತಿನಿಧಿಗಳು ಹಾಗೂ 'ದಶಕಗಳ ಬೇಡಿಕೆಗೆ ತಾರ್ಕಿಕ ಅಂತ್ಯ ಸಿಗುವ ತನಕ ಹೋರಾಟ ನಿಲ್ಲದು' ಎಂಬ ಅಭಿಪ್ರಾಯ ಮಠಾಧೀಶರಿಂದ ವ್ಯಕ್ತವಾಯಿತು.

ಭಾನುವಾರ ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಘಟಕ ಮತ್ತು ವೀರಶೈವ ಲಿಂಗಾಯತ ಮಠಾಧೀಶರ ಸಂಯುಕ್ತಾಶ್ರಯದ ನಡೆದ ಒಬಿಸಿ ಮೀಸಲಾತಿ ಪಟ್ಟಿ ಸೇರ್ಪಡೆಯ ಹಕ್ಕೊತ್ತಾಯ ಸಭೆಯಲ್ಲಿ ಸಚಿವರು, ಮಠಾಧೀಶರು ಮಾತನಾಡಿದರು.

'ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಸೇರಿ ಸಚಿವ ಸಂಪುಟದ ಎಲ್ಲರಿಗೂ ಈ ಬಗ್ಗೆ ಮನವರಿಕೆ ಮಾಡಿ ನ್ಯಾಯ ಕೊಡಿಸಲಾಗುವುದು. ಕೇಂದ್ರ ಸರ್ಕಾರಕ್ಕೆ ಶಿಫಾರಸು ಸಲ್ಲಿಸುವಂತೆ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು' ಎಂದು ಸಚಿವರಾದ ಈಶ್ವರ ಖಂಡ್ರೆ, ಡಾ.ಶರಣಪ್ರಕಾಶ ಪಾಟೀಲ ಮತ್ತು ಶರಣಬಸಪ್ಪ ದರ್ಶನಾಪುರ ಹೇಳಿದರು. ಇದಕ್ಕೆ ಸಮುದಾಯದ ಶಾಸಕರು ತಮ್ಮ ಭಾಷಣದಲ್ಲಿ ಬೆಂಬಲ ಸೂಚಿಸಿದರು.

'ರಾಜ್ಯ ಸರ್ಕಾರ ಶೀಘ್ರವೇ ಶಿಫಾರಸು ಮಾಡಲಿ. ನಾನು ಕೇಂದ್ರ ಸರ್ಕಾರದ ಮಟ್ಟದಲ್ಲಿ ಸಮುದಾಯಕ್ಕೆ ಒಳಿತಾಗುವ ಕೆಲಸ ಮಾಡುತ್ತೇನೆ' ಎಂದು ಕೇಂದ್ರ ಸಚಿವ ಭಗವಂತ ಖೂಬಾ ಭರವಸೆ ಕೊಟ್ಟರು. ಕಾಶಿ, ಶ್ರೀಶೈಲ ಜಗದ್ಗುರುಗಳ ಪರವಾಗಿ ಉಜ್ಜಯಿನಿ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರು ಮಾತನಾಡಿ, 'ಭಿನ್ನ ಆಚರಣೆ, ಸಂಪ್ರದಾಯದಿಂದ ಸಮುದಾಯ ಛಿದ್ರವಾಗಿದೆ. ಒಬಿಸಿ ಹೋರಾಟದ ಮೂಲಕ ಅದನ್ನು ಒಗ್ಗೂಡಿಸಿ ದಶಕಗಳ ಬೇಡಿಕೆ ದೊರಕಿಸಿಕೊಡಲು ಮತ್ತು ಸಮುದಾಯದ ಋಣ ತೀರಿಸಲು ಹೋರಾಟಕ್ಕೆ ಇಳಿದಿದ್ದೇವೆ. ತಾರ್ಕಿಕ ಅಂತ್ಯ ಕಾಣುವವರೆಗೂ ಹೋರಾಟ ನಿಲ್ಲದು' ಎಂದರು.

ಕೊಡಗಿನಲ್ಲಿ ಕ್ಷೀಣಗೊಂಡ ವರ್ಷಧಾರೆ • ಧರೆಗುರುಳಿದ ಮರ ಮತ್ತು ವಿದ್ಯುತ್ ಕಂಬಗಳು

ಉತ್ತರ– ದಕ್ಷಿಣ ಕನ್ನಡದಲ್ಲಿ ಮಳೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಭಾನುವಾರವೂ ಮಳೆ ಮುಂದುವರಿದಿದ್ದು, ಕೊಡಗು ಜಿಲ್ಲೆಯಲ್ಲಿ ಪ್ರಮಾಣ ತಗ್ಗಿದೆ. ಮಳೆ ಸಂಬಂಧಿತ ಅವಘಡಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಉತ್ತರ ಕನ್ನಡ ಜಿಲ್ಲೆ ಕುಮಟಾ, ಹೊನ್ನಾವರ ಭಾಗದಲ್ಲಿ ನಿರಂತರ ಮಳೆ ಆಗುತ್ತಿದೆ. ಕಾರವಾರ, ಭಟ್ಕಳ, ಯಲ್ಲಾಪುರ, ಶಿರಸಿ, ದಾಂಡೇಲಿ ಭಾಗದಲ್ಲಿ ಸಾಧಾರಣ ಮಳೆ ಸುರಿದಿದೆ.

ಕೊಡಗು ಜಿಲ್ಲೆಯಲ್ಲಿ ಭಾನುವಾರ ಮಳೆ ಸಂಪೂರ್ಣ ತಗ್ಗಿದೆ. ಮಡಿಕೇರಿಯಲ್ಲಿ ಆಗಾಗ ಮಳೆಯಾಗಿದೆ. ಬಿರುಗಾಳಿಯಿಂದಾಗಿ ವಿವಿಧೆಡೆ 12 ವಿದ್ಯುತ್ ಕಂಬಗಳು ಹಾಗೂ 5 ಮರಗಳು ಧರೆಗುರುಳಿವೆ. ಮಳೆ ಕಡಿಮೆಯಾದ್ದರಿಂದ ಕೃಷಿ ಚಟುವಟಿಕೆಗಳು ಬಿರುಸುಗೊಂಡಿವೆ.

ಬಂಟ್ವಾಳ ತಾಲ್ಲೂಕಿನ ಪುಣಚ ಗ್ರಾಮದ ಪರಿಯಾಲ್ತಡ್ಕದಲ್ಲಿ ಶನಿವಾರ ರಾತ್ರಿ ಮಳೆ ಬರುತ್ತಿದ್ದ ವೇಳೆ, ಕಾಲುಸಂಕ ದಾಟುವಾಗ ಆಯತಪ್ಪಿ ಹಳ್ಳಕ್ಕೆ ಬಿದ್ದು ಪರಿಯಾಲ್ತಡ್ಕದ ಕೇಶವ ನಾಯ್ಕ (51) ಮೃತಪಟ್ಟಿದ್ದಾರೆ. ಭಾನುವಾರ ಅವರ ಮೃತದೇಹ ಪತ್ತೆಯಾಗಿದೆ.

ಸುಳ್ಯ ತಾಲ್ಲೂಕಿನ ಆಲೆಟ್ಟಿ ಗ್ರಾಮದ ಹೊನ್ನೇಡಿಯಲ್ಲಿ ಕಾಲುಸಂಕ ದಾಟುವಾಗ ಹಳ್ಳಕ್ಕೆ ಬಿದ್ದು ಗುರುವಾರ ಸಂಜೆ ನೀರಿನಲ್ಲಿ ಕೊಚ್ಚಿಹೋಗಿದ್ದ ನಾರಾಯಣ ಗೌಡ ಅವರ ಮೃತದೇಹ ಭಾನುವಾರ ಪತ್ತೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾನುವಾರ ಮಳೆಯ ಅಬ್ಬರ ಕಡಿಮೆಯಾಗಿದೆ. ಭಾನುವಾರ ಬೆಳಿಗ್ಗೆ 8.30ರವರೆಗೆ 24 ಗಂಟೆಗಳಲ್ಲಿ ಸುಳ್ಯ ತಾಲ್ಲೂಕಿನ ಅಜ್ಜಾವರದಲ್ಲಿ ರಾಜ್ಯದಲ್ಲೇ ಗರಿಷ್ಠ (12.55 ಸೆಂ.ಮೀ.) ಮಳೆಯಾಗಿದೆ.

ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನ ಕಣಂಜಾರು, ಬೈಂದೂರು ತಾಲ್ಲೂಕಿನ ಕಂಬದಕೋಣೆ, ಯಳಜಿತ್, ಪಡುವರಿ, ಕಾಪು ತಾಲ್ಲೂಕಿನ ತೆಂಕ, ಎಲ್ಲೂರು, ನಡ್ಸಾಲು, ಕುಂದಾಪುರ ತಾಲ್ಲೂಕಿನ ಹೊಸಾಡು, ಕೊಡ್ತಡಿ, ಉಡುಪಿ ತಾಲ್ಲೂಕಿನ ಅಲೆವೂರಿನಲ್ಲಿ ಕೆಲವು ಮನೆಗಳಿಗೆ ಭಾಗಶಃ ಹಾನಿಯಾಗಿದೆ.

ಕರಾವಳಿ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್'

ರಾಜ್ಯದ ಕರಾವಳಿ ಭಾಗದ ಜಿಲ್ಲೆಗಳಲ್ಲಿ ಉತ್ತಮ ಮಳೆ ಮುಂದುವರಿಯುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಜುಲೈ 10 ರಿಂದ 12 ರ ತನಕ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಹಾಗೂ ಜುಲೈ 13ರಂದು ಕರಾವಳಿ ಭಾಗದ ಜಿಲ್ಲೆಗಳೂ ಸೇರಿದಂತೆ ಮಲೆನಾಡು ಭಾಗದ ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	85.50	13,010	374
ಹಾರಂಗಿ	2,859	2,837.55	1,495	50
ಕಬಿನಿ	2,284	2,267.29	10,184	800
ಹೇಮಾವತಿ	2,922	2891.95	5,125	200
ಲಿಂಗನಮಕ್ಕಿ	1,819	1,750.90	16,091	396
ಸೂಪಾ (ಮೀ)	564	527.00	9,422.64	-
ಮಾಣಿ	595	572.66	3,092	-
ತುಂಗಭದ್ರಾ	1,633	1,576.72	275	252
ಮಲಪ್ರಭಾ	2,079.50	2,043.26	00	194
ಘಟಪ್ರಭಾ	2,175	2,079.60	3,007	85
ಭದ್ರಾ	186	140.3	4,769	162
ಆಲಮಟ್ಟಿ (ಮೀ)	519.60	507.32	00	578
ನಾರಾಯಣಪುರ (ಮೀ)	492.25	486.87	144	50
ತುಂಗಾ	588.24	588.17	11,955	10,774

* ನೆಲಮಟ್ಟದಿಂದ

ಹೆದ್ದಾರಿಗೆ ಬಂಡೆ ಉರುಳುವ ಭೀತಿ



ಸಕಲೇಶಪುರ ಸಮೀಪದ ಆನೇಮಹಲ್ ಬಳಿ ಬಂಡೆಗಳು, ಮಣ್ಣು ಹೆದ್ದಾರಿ ಮೇಲೆ ಕುಸಿಯುವ ಹಂತದಲ್ಲಿದೆ

• ಜಾನೇಕೆರೆ ಆರ್. ಪರಮೇಶ್

ಸಕಲೇಶಪುರ: ಆನೇಮಹಲ್ ಬಳಿ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ ಬದಿ ತಡೆಗೋಡೆ ನಿರ್ಮಿಸದೇ ಇರುವುದರಿಂದ, ಬಂಡೆಗಳು ರಸ್ತೆಗೆ ಉರುಳುವ ಅಪಾಯ ಎದುರಾಗಿದೆ.

5 ದಿನಗಳಿಂದ ನಿರಂತರ ಮಳೆಯಾಗುತ್ತಿದ್ದು, ನೀರಿನೊಂದಿಗೆ ಮಣ್ಣು ಕುಸಿಯುತ್ತಿದೆ. ಸಾಧಾರಣ ಬಂಡೆಗಳು ಹೆದ್ದಾರಿ ಬದಿಗೆ ಉರುಳಿವೆ. ಭಾರೀ ಬಂಡೆಯೊಂದು ಯಾವುದೇ ಕ್ಷಣದಲ್ಲೂ ಬೀಳುವಂತಿದೆ.

ಈ ಸ್ಥಳದಲ್ಲಿ 100 ಅಡಿಗೂ ಎತ್ತರದ ದಿಬ್ಬವನ್ನು ನೇರಕ್ಕೆ ಕತ್ತರಿಸಿದ್ದು, ತಡೆಗೋಡೆ ನಿರ್ಮಿಸಿಲ್ಲ. ಹೊರವರ್ತುಲ ರಸ್ತೆಯಿಂದ ಆನೇಮಹಲ್ ಪೆಟ್ರೋಲ್ ಬಂಕ್‌ವರೆಗೂ, ತೋಟದಗದ್ದೆ ತಿರುವಿನ ಉದ್ದಕ್ಕೂ ತಡೆಗೋಡೆ ನಿರ್ಮಿಸದೆ ಹೆದ್ದಾರಿ ವಿಸ್ತರಣೆ ಮಾಡಲಾಗಿದೆ. ತೋಟದ ಗದ್ದೆ ಎಸ್ಟೇಟ್‌ನ ಕಾರ್ಮಿಕರ ವಸತಿಗೃಹಗಳು, ಕಾಫಿ ಸಂಸ್ಕರಣಾ ಘಟಕ ಸಹ ಭೂ ಕುಸಿತದ ಅಪಾಯದಲ್ಲಿವೆ.

ದಿಬ್ಬವನ್ನು ನೇರವಾಗಿ ಕತ್ತರಿಸಿರುವ ಪರಿಣಾಮ 2017 ರಿಂದಲೂ ಪ್ರತಿ ವರ್ಷದ ಮಳೆಗಾಲದಲ್ಲಿ ದೋಣಿಗಾಲ್‌ನಿಂದ ಮಾರನಹಳ್ಳಿವರೆಗೆ ಅಲ್ಲಲ್ಲಿ ಭೂ ಕುಸಿತವಾಗುತ್ತಲೇ ಇದೆ.

'ಹೆದ್ದಾರಿ ಪ್ರಾಧಿಕಾರ ಮತ್ತು ರಾಜಕಮಲ್ ಬಿಲ್ಡರ್ಸ್‌ನ ಅವೈಜ್ಞಾನಿಕ ಕಾಮಗಾರಿಯೇ ಈ ಅಪಾಯದ ಪರಿಸ್ಥಿತಿಗೆ ಕಾರಣ' ಎಂಬುದು ಜನರ ದೂರು.

ತಡೆಗೋಡೆ ನಿರ್ಮಿಸದೇ ದೋಣಿಗಾಲ್‌ನಲ್ಲಿ ಸುರಿದಿದ್ದ ಸಾವಿರಾರು ಟಿಪ್ಪರ್ ಮಣ್ಣು, ಮಳೆ ನೀರಿನಲ್ಲಿ ಕೊಚ್ಚಿ ಹೋಗಿದೆ.

ಆನೇಮಹಲ್ ತೋಟದಗದ್ದೆ ಬಳಿ ಚತುಷ್ಪಥ ಕಾಮಗಾರಿ ಪ್ರಗತಿಯಲ್ಲಿದೆ. ಕಾಮಗಾರಿ ಪೂರ್ಣಗೊಳ್ಳುವ ಮೊದಲೇ ಮಳೆ ಶುರುವಾಗಿದೆ.
ಶೇಖರ್, ಸೈಟ್ ಎಂಜಿನಿಯರ್ ರಾಜ್ ಕಮಲ್ ಬಿಲ್ಡರ್ಸ್

ಚತುಷ್ಪಥ ಕಾಮಗಾರಿ ಸ್ಥಳದಲ್ಲಿ ಭೂ ಕುಸಿತವಾಗದಂತೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ
ಅನ್‌ಮೋಲ್ ಜೈನ್,
ಉಪ ವಿಭಾಗಾಧಿಕಾರಿ

ಮಾಜಿ ಶಾಸಕ ನಿಂಬಣ್ಣವರ ನಿಧನ

ಧಾರವಾಡ: ಜಿಲ್ಲೆಯ ಕಲಘಟಗಿ ಕ್ಷೇತ್ರದ ಮಾಜಿ ಶಾಸಕ ಚನ್ನಪ್ಪ ಮಲ್ಲಪ್ಪ ನಿಂಬಣ್ಣವರ (76) ಬೆಂಗಳೂರಿನ ಬನ್ನೇರುಘಟ್ಟರಸ್ತೆಯ ಅಪೋಲೊ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು.



ಅವರು ಹೃದಯಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದರು. ಅವರಿಗೆ ಪುತ್ರ, ಪುತ್ರಿ ಇದ್ದಾರೆ.

2008ರ ವಿಧಾನಸಭಾ ಚುನಾವಣೆಗೆ ಬಿಜೆಪಿಯಿಂದ, 2013ರಲ್ಲಿ ಕೆಜೆಪಿಯಿಂದ ಸ್ಪರ್ಧಿಸಿ ಅವರು ಸೋತಿದ್ದರು. 2018ರಲ್ಲಿ ಬಿಜೆಪಿಯಿಂದ ಗೆಲುವು ಸಾಧಿಸಿದ್ದರು. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಅಧ್ಯಕ್ಷರಾಗಿ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಅಂತ್ಯಕ್ರಿಯೆ ಕಲಘಟಗಿಯಲ್ಲಿ ಸೋಮವಾರ ಮಧ್ಯಾಹ್ನ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಿ20:ಲಂಬಾಣಿ ಕಸೂತಿ ಕಲೆ- ಹಂಪಿಯಲ್ಲಿ ಗಿನ್ನೆಸ್ ದಾಖಲೆ ಸಿದ್ಧತೆ

450 ಕಲಾವಿದರಿಂದ 1,300 ಕಸೂತಿಗಳ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಹಂಪಿಯಲ್ಲಿ ಸೋಮವಾರ ಅಧಿಕೃತವಾಗಿ ಆರಂಭವಾಗಲಿರುವ ಸಿಡಬ್ಲ್ಯುಜಿ ಸಭೆಯಲ್ಲಿ ಸಂಡೂರು ಕಲಾಕೇಂದ್ರದ 450ಕ್ಕೂ ಅಧಿಕ ಲಂಬಾಣಿ ಮಹಿಳೆಯರು ಸಿದ್ಧಪಡಿಸಿರುವ 1,300 ವೈವಿಧ್ಯಮಯ ಕಸೂತಿಗಳ ಪ್ರದರ್ಶನ ನಡೆಯಲಿದೆ. ಇದು ಗಿನ್ನೆಸ್ ದಾಖಲೆಗೂ ಸೇರ್ಪಡೆಗೊಳ್ಳಲಿದೆ ಎಂದು ಕೇಂದ್ರ ಸಂಸ್ಕೃತಿ ಸಚಿವಾಲಯದ ಕಾರ್ಯದರ್ಶಿ ಗೋವಿಂದ ಮೋಹನ್ ತಿಳಿಸಿದರು.

ಜಿ20 ಸಾಂಸ್ಕೃತಿಕ ಕಾರ್ಯಕಾರಿ ಗುಂಪು (ಸಿಡಬ್ಲ್ಯುಜಿ) ನಾಲ್ಕು ಕಾರ್ಯಸೂಚಿಯನ್ನು ಇಟ್ಟುಕೊಂಡಿದ್ದು, ಸಂಸ್ಕೃತಿಯನ್ನು ಜಾಗತಿಕ ಉದ್ದಿಮೆಯಾಗಿ ಬಿಂಬಿಸಬೇಕು ಎಂಬ ಕಾರ್ಯಸೂಚಿ ಹಂಪಿ ಸಭೆಯ ಮುಖ್ಯ ವಿಷಯವಾಗಿದೆ. ಅದರಂತೆ ಲಂಬಾಣಿ ಕಸೂತಿ ಕಲೆಯನ್ನು ಪ್ರಮುಖವಾಗಿ ಬಿಂಬಿಸಲು ನಿರ್ಧರಿಸಲಾಗಿದೆ ಎಂದು ಭಾನುವಾರ ತೋರಣಗಲ್‌ನ ಜಿಂದಾಲ್ ಆವರಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಿಡಬ್ಲ್ಯುಜಿ ಸಭೆಯಲ್ಲಿ ಎಲ್ಲಾ ಜಿ20 ದೇಶಗಳು, ಒಂಬತ್ತು ಆಹ್ವಾನಿತ ದೇಶಗಳು ಹಾಗೂ ಏಳು ಅಂತರರಾಷ್ಟ್ರೀಯ ಸಂಘಟನೆಗಳ 50ರಷ್ಟು ಪ್ರತಿನಿಧಿಗಳು ಪಾಲ್ಗೊಂಡಿದ್ದಾರೆ. ಬೆಳಿಗ್ಗೆ ಅಧಿಕೃತವಾಗಿ ಸಭೆಗೆ ಚಾಲನೆ ಸಿಗಲಿದ್ದು, ಸಂಜೆ ಹಂಪಿಯ ಎದುರು ಆಯೋಜಿಸಿರುವ ಲಂಬಾಣಿ ಕಸೂತಿಗಳ ಪ್ರದರ್ಶನವನ್ನು ಗಣ್ಯರು ವೀಕ್ಷಿಸಲಿದ್ದಾರೆ. ಈ ಮೂಲಕ ಕರ್ನಾಟಕದ ವಿಶಿಷ್ಟ ಲಂಬಾಣಿ ಕಸೂತಿಯನ್ನು ಜಗತ್ತಿಗೆ ಪರಿಚಯಿಸಿ, ಅದನ್ನು ವಾಣಿಜ್ಯೀಕರಣಗೊಳಿಸುವ ಉದ್ದೇಶ ಇದೆ ಎಂದು ಅವರು ವಿವರಿಸಿದರು.

ಈ ಮೊದಲು ನಡೆದ ಎರಡು ಸಿಡಬ್ಲ್ಯುಜಿ ಸಭೆಗಳಲ್ಲಿ ಸಹ ಇಂತಹುದೇ ಪ್ರಯತ್ನ ಮಾಡಲಾಗಿತ್ತು. ಕರ್ನಾಟಕದ ಈ ವಿಶಿಷ್ಟ ಕಲೆಗೆ ಜಾಗತಿಕ ಮನ್ನಣೆ ಸಿಗುವ ಮೂಲಕ ಲಂಬಾಣಿ ಕಸೂತಿ ಜಗತ್ತಿಗೆ ಪರಿಚಯವಾಗಲಿದೆ. ಈ ಮೂಲಕ ಲಂಬಾಣಿ ಮಹಿಳೆಯರ ಜೀವನ ಮಟ್ಟ ಸುಧಾರಿಸುವ ಆಶಯ ಇಟ್ಟುಕೊಳ್ಳಲಾಗಿದೆ' ಎಂದು ಸಂಸ್ಕೃತಿ ಸಚಿವಾಲಯದ ಜಂಟಿ ಕಾರ್ಯದರ್ಶಿ ಲಿಲ್ಲಿ ಪಾಂಡೆ ಅವರು ಹೇಳಿದರು.



ಹಂಪಿಯ 'ಎದುರು ಬಸವಣ್ಣ' ಮಂಟಪದ ಸಮೀಪ ಗಿನ್ನೆಸ್ ದಾಖಲೆ ಮಾಡಲು ಸಜ್ಜಾಗುತ್ತಿರುವ ಲಂಬಾಣಿ ಕಸೂತಿ ಕಲೆಗಳ ಪ್ರದರ್ಶನಕ್ಕೆ ಭಾನುವಾರ ಸಿದ್ಧತೆ ನಡೆಸಲಾಯಿತು –ಪ್ರಜಾವಾಣಿ ಚಿತ್ರ/ಲವ

6 ತಿಂಗಳಲ್ಲಿ 150 ಪ್ರಾಚೀನ ವಸ್ತುಗಳು ಅಮೆರಿಕದಿಂದ ಭಾರತಕ್ಕೆ

'ಜಿ20 ರಾಷ್ಟ್ರಗಳ ಸಿಡಬ್ಲ್ಯುಜಿಯ ಕಾರ್ಯಸೂಚಿಯಲ್ಲಿ ಸದಸ್ಯ ರಾಷ್ಟ್ರಗಳ ಸಾಂಸ್ಕೃತಿಕ ಅಸ್ಮಿತೆಯನ್ನು ರಕ್ಷಿಸಿ, ಪುನರ್ ಸ್ಥಾಪಿಸುವ ಅಂಶ ಪ್ರಧಾನವಾಗಿದೆ. 1970ರ ಯುನೆಸ್ಕೊ ಒಪ್ಪಂದದಂತೆ ಎಲ್ಲಾ ರಾಷ್ಟ್ರಗಳು ಪರಸ್ಪರ ಸಹಕಾರದಿಂದ, ವಸಾಹತು ಸಮಯ ಅಥವಾ ಇನ್ನಿತರ ಮಾರ್ಗಗಳಿಂದ ಪಡೆಯಲಾದ ಸಾಂಸ್ಕೃತಿಕ ಮಹತ್ವ ಇರುವ ಕಲಾಕೃತಿಗಳನ್ನು ಹಿಂದಿರುಗಿಸಬೇಕಾಗುತ್ತದೆ. ಭಾರತ ಸಹ ಇದಕ್ಕೆ ಬದ್ಧವಾಗಿದೆ. ಈಗಾಗಲೇ ಭಾರತವು ಅಮೆರಿಕದೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಅದರಂತೆ ಮುಂದಿನ ಆರು ತಿಂಗಳಲ್ಲಿ ಭಾರತವು ಅಮೆರಿಕದಿಂದ 150ರಷ್ಟು ಪ್ರಾಚೀನ ವಸ್ತುಗಳನ್ನು ವಾಪಸ್ ತರಿಸಿಕೊಳ್ಳಲಿದೆ' ಎಂದರು ಗೋವಿಂದ ಮೋಹನ್..

ಸೋಮವಾರ, ಜುಲೈ 10, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 190 | ಪುಟ 12

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
'ಟೊಫೆಲ್'- ಪ್ರವೇಶ ಪರೀಕ್ಷೆ ಕುರಿತ ವಿವರ ಇಲ್ಲಿದೆ

ಆಳ-ಅಗಲ
ವೈಯಕ್ತಿಕ ಕಾನೂನುಗಳ ಗತಿ ಏನು?

ರಷ್ಯಾ ತೈಲ: ತಗ್ಗಿದ ರಿಯಾಯಿತಿ 8

21ರಂದು ಭಾರತಕ್ಕೆ ಶ್ರೀಲಂಕಾ ಅಧ್ಯಕ್ಷ 8

ತಮಿಳುನಾಡಿಗೆ ರಾಜ್ಯಪಾಲ ರವಿಯೇ ಬೆದರಿಕೆ: ಸ್ಟಾಲಿನ್ ಪತ್ರ 5

ಯಾತ್ರೆ ಮತ್ತೆ ಆರಂಭ 5



ಮುಸ್ಲಿಂ ಮೀಸಲಾತಿ: 'ಸುಪ್ರೀಂ'ಗೆ ಲಿಖಿತ ಮಾಹಿತಿ – ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ

ಶಿಫಾರಸಿಲ್ಲದೇ ಮೀಸಲು ರದ್ದು

• ರಾಜೇಶ್ ರೈ ಚಟ್ಲ

ಬೆಂಗಳೂರು: ಮುಸ್ಲಿಂ ಸಮುದಾಯದವರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿದ್ದ ಶೇ 4ರಷ್ಟು ಮೀಸಲಾತಿಯನ್ನು ಯಾವುದೇ ವರದಿ ಅಥವಾ ಶಿಫಾರಸಿಲ್ಲದೇ ಹಿಂದಿನ ಬಿಜೆಪಿ ಸರ್ಕಾರ ರದ್ದು ಮಾಡಿರುವುದು ಬಹಿರಂಗವಾಗಿದೆ.

ಹಿಂದುಳಿದ ವರ್ಗಗಳ ಕೋಟಾದಲ್ಲಿ ಮುಸ್ಲಿಮರಿಗೆ 'ಪ್ರವರ್ಗ 2ಬಿ' ಅಡಿ ಶೇ 4ರಷ್ಟು ಮೀಸಲಾತಿಯನ್ನು ಕರ್ನಾಟಕದಲ್ಲಿ ಬಹಳ ವರ್ಷಗಳ ಹಿಂದೆಯೇ ನೀಡಲಾಗಿತ್ತು. ಬಸವರಾಜ ಬೊಮ್ಮಾಯಿ ನೇತೃತ್ವದ ಈ ಹಿಂದಿನ ಸರ್ಕಾರ, ಚುನಾವಣೆ ಘೋಷಣೆಯಾಗುವ ಕೆಲ ದಿನಗಳ ಮೊದಲು (ಮಾರ್ಚ್ 27) ಈ ಮೀಸಲಾತಿಯನ್ನು ರದ್ದುಪಡಿಸಿತ್ತು.

ಈ ಶೇ 4ರಷ್ಟು ಮೀಸಲಾತಿಯನ್ನು, ಮೀಸಲು ಪ್ರಮಾಣ ಹೆಚ್ಚಳ ಮಾಡುವಂತೆ ಬೇಡಿಕೆ ಮಂಡಿಸಿದ್ದ ಒಕ್ಕಲಿಗರು ಮತ್ತು ಲಿಂಗಾಯತರಿಗೆ ಶೇ 2ರಂತೆ ಮರು ಹಂಚಿಕೆ ಮಾಡಿತ್ತು. ಮೀಸಲಾತಿ ರದ್ದತಿ ಮತ್ತು ಮರು ಹಂಚಿಕೆ ಕುರಿತು ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡಿದ್ದ ನಿರ್ಣಯವನ್ನು ಬೊಮ್ಮಾಯಿ ಅವರೇ ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದ್ದರು. 'ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ತನ್ನ ಮಧ್ಯಂತರ ವರದಿಯಲ್ಲಿ ಶಿಫಾರಸು ಮಾಡಿದೆ' ಎಂದು ಹೇಳಿದ್ದರು.

ಕರ್ನಾಟಕ ಸರ್ಕಾರದ ಮಾರ್ಚ್ 27ರ ಆದೇಶವನ್ನು ಪ್ರಶ್ನಿಸಿ ಎಲ್. ಗುಲಾಮ್ ರಸೂಲ್ ಮತ್ತು ಇತರರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದು, ಪ್ರಕರಣ ಇದೇ 24ರಂದು ವಿಚಾರಣೆಗೆ ಬರಲಿದೆ. ಪ್ರಕರಣದಲ್ಲಿ ಪ್ರತಿವಾದಿಯಾಗಿರುವ ರಾಜ್ಯ ಹಿಂದುಳಿದ ವರ್ಗಗಳ ಆಯೋಗ, ಮುಸ್ಲಿಂ ಮೀಸಲಾತಿ ರದ್ದತಿ ವಿಚಾರಕ್ಕೆ ಸಂಬಂಧಿಸಿದಂತೆ ತಾನು ಯಾವುದೇ ಶಿಫಾರಸು ಮಾಡಿಲ್ಲ ಎಂಬ ವಿಚಾರವನ್ನು ಸುಪ್ರೀಂ ಕೋರ್ಟ್‌ಗೆ ಲಿಖಿತವಾಗಿ ತಿಳಿಸಲು ನಿರ್ಧರಿಸಿದೆ.

'ಮುಸ್ಲಿಮರನ್ನು ಒಬಿಸಿ (ಇತರ ಹಿಂದುಳಿದ ಜಾತಿ) ಪಟ್ಟಿಯಿಂದ ಕೈಬಿಟ್ಟಿರುವುದು ಕಾನೂನುಬಾಹಿರ ಮತ್ತು ಆರ್ಥಿಕವಾಗಿ ದುರ್ಬಲ ವರ್ಗದ ಪಟ್ಟಿಗೆ ಸೇರಿಸಿರುವುದು ಕೂಡ ಕಾನೂನಿಗೆ ವಿರುದ್ಧ' ಎಂದು ಅರ್ಜಿದಾರರು ಸುಪ್ರೀಂ ಕೋರ್ಟ್‌ನಲ್ಲಿ ಪ್ರತಿಪಾದಿಸಿದ್ದಾರೆ. ವಿಚಾರಣೆ ನಡೆಸಿದ್ದ ಕೋರ್ಟ್, 'ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಂತಿಮ ವರದಿಗೆ ಕಾಯದೆ ಮಧ್ಯಂತರ ವರದಿಯ ಆಧಾರದಲ್ಲಿ ಮೀಸಲಾತಿ ಕೋಟಾವನ್ನು ಹಿಂಪಡೆಯುವ ಅಗತ್ಯ ಏನಿತ್ತು' ಎಂದು ಸರ್ಕಾರವನ್ನು ಪ್ರಶ್ನಿಸಿತ್ತು. ನಂತರ, 'ಮಾರ್ಚ್ 27ರ ಆದೇಶದ ಮೇಲೆ ಸದ್ಯ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ' ಎಂದು ಕರ್ನಾಟಕ ಸರ್ಕಾರ ಭರವಸೆ ನೀಡಿತ್ತು.

'ಪ್ರಜಾವಾಣಿ' ಜೊತೆ ಮಾತನಾಡಿದ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ, 'ಮುಸ್ಲಿಂ ಮೀಸಲಾತಿ ರದ್ದುಪಡಿಸುವ ಮೊದಲು ಈ ಹಿಂದಿನ ರಾಜ್ಯ ಸರ್ಕಾರ (ಬಿಜೆಪಿ) ನಮ್ಮ (ಆಯೋಗ) ಅಭಿಪ್ರಾಯ ಕೇಳಿಲ್ಲ. ಮೀಸಲಾತಿ ರದ್ದುಪಡಿಸಲು ನಾವು ಹೇಳಿಯೂ ಇಲ್ಲ. ಈ ಬಗ್ಗೆ ಸರ್ಕಾರ ನಮ್ಮಿಂದ ಯಾವುದೇ ಸಲಹೆಯನ್ನೂ ಪಡೆದಿಲ್ಲ. ಅದು ಸರ್ಕಾರದ್ದೇ ತೀರ್ಮಾನ' ಎಂದರು.

5ನೇ ಪುಟ ನೋಡಿ

'ಮೀಸಲಾತಿ ಮರು ವರ್ಗೀಕರಣ ಆಗಬೇಕಿದೆ'

'ಪ್ರತಿ 10 ವರ್ಷಗಳಿಗೊಮ್ಮೆ ಮೀಸಲಾತಿಯ ಮರು ವರ್ಗೀಕರಣ ಆಗಬೇಕಿದೆ. ಆದರೆ, 20 ವರ್ಷ ಕಳೆದರೂ ಜಾತಿಗಳ ಮರು ವರ್ಗೀಕರಣ ಆಗಿಲ್ಲ. ಹೀಗಾಗಿ, ಮೀಸಲಾತಿಯ ಮರು ವರ್ಗೀಕರಣ ಆಗಬೇಕೆಂದು ವರದಿಯಲ್ಲಿ ಸರ್ಕಾರಕ್ಕೆ ನಾವು ಸಲಹೆ ನೀಡಿದ್ದೇವೆ.

ಹೀಗೆ ಮರು ವರ್ಗೀಕರಣ ಆದಾಗ ಹಿಂದುಳಿದ ವರ್ಗದಲ್ಲಿರುವ ಬಲಾಢ್ಯ ಜಾತಿಗಳು ಮೀಸಲಾತಿ ಪಟ್ಟಿಯಿಂದ ಹೊರ ಹೋಗುತ್ತವೆ. ಸದ್ಯ ಇರುವ ಜಾತಿಗಳ ವರ್ಗೀಕರಣ 2011ರ ಜನಗಣತಿ ಆಧರಿಸಿದ್ದು. ಎಚ್. ಕಾಂತರಾಜ ನೇತೃತ್ವದ ಆಯೋಗ 2015ರಲ್ಲಿ ರಾಜ್ಯದಲ್ಲಿ ನಡೆಸಿದ್ದ 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ'ಯ ವರದಿಯ ಆಧಾರದಲ್ಲಿ ಮೀಸಲಾತಿಯ ಮರು ವಿಂಗಡಣೆ ಮಾಡಬಹುದು. ಮೀಸಲಾತಿ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಮುಂದುವರಿದ ಜಾತಿಗಳನ್ನು ಕೈಬಿಟ್ಟು, ಯಾರು ಇನ್ನೂ ಹಿಂದುಳಿದಿದ್ದಾರೆ ಅಂಥ ಸಮುದಾಯಗಳನ್ನು ಮೀಸಲಾತಿ ವ್ಯಾಪ್ತಿಗೆ ತರುವ ಕೆಲಸ ಆಗಬೇಕಿದೆ' ಎಂದು ಜಯಪ್ರಕಾಶ್ ಹೆಗ್ಡೆ ಪ್ರತಿಪಾದಿಸಿದರು.

ಸ್ಪಷ್ಟ ನಿರ್ಧಾರ ತೆಗೆದುಕೊಳ್ಳದ ಸರ್ಕಾರ

ಮುಸ್ಲಿಮರ ಶೇ 4ರಷ್ಟು ಮೀಸಲಾತಿ ರದ್ದು ಪ್ರಕರಣದ ವಿಚಾರಣೆಯನ್ನು ಮೇ 9ರಂದು ನಡೆಸಿದ್ದ ಸುಪ್ರೀಂ ಕೋರ್ಟ್ ತನ್ನ ಆದೇಶದಲ್ಲಿ, '2023 ಮಾರ್ಚ್ 27ರ ಆದೇಶವನ್ನು ಮುಂದಿನ ವಿಚಾರಣೆಯ ದಿನಾಂಕದವರೆಗೆ ಕಾರ್ಯಗತಗೊಳಿಸಲಾಗುವುದಿಲ್ಲ. ಅಲ್ಲದೆ, ಮೀಸಲಾತಿಗೆ ಸಂಬಂಧಿಸಿದ 2002 ಮಾರ್ಚ್ 30ರ ಅಧಿಸೂಚನೆಯನ್ನೇ ಮುಂದುವರಿಸಲಾಗುವುದು' ಎಂದು ರಾಜ್ಯ ಸರ್ಕಾರದ ಪರ ಸಾಲಿಟರ್ ಜನರಲ್ ತುಷಾರ್ ಮೆಹ್ತಾ ನೀಡಿದ್ದ ವಾಗ್ದಾನವನ್ನು ಉಲ್ಲೇಖಿಸಿದೆ. ಈ ರೀತಿ ಆದೇಶ ಇದ್ದರೂ ವೃತ್ತಿಪರ ಕೋರ್ಸ್‌ಗಳ ಸೀಟ್ ಮ್ಯಾಟ್ರಿಕ್ಸ್ ಮತ್ತು ವಿವಿಧ ಹುದ್ದೆಗಳಿಗೆ ನೇಮಕಾತಿಗೆ ಹಳೆ ಮೀಸಲಾತಿ ಮುಂದುವರಿಸುವ ಕುರಿತು ರಾಜ್ಯ ಸರ್ಕಾರ ಯಾವುದೇ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳದಿರುವುದು ಗೊಂದಲಕ್ಕೆ ಕಾರಣವಾಗಿದೆ.



ಮುಸ್ಲಿಂ ಸಮುದಾಯದ ಮೀಸಲಾತಿ ರದ್ದುಪಡಿಸುವ ಮೊದಲು ಈ ಹಿಂದಿನ ರಾಜ್ಯ ಸರ್ಕಾರ ಆಯೋಗದಿಂದ ಯಾವುದೇ ಅಭಿಪ್ರಾಯ ಕೇಳಿರಲಿಲ್ಲ

ಕೆ. ಜಯಪ್ರಕಾಶ್ ಹೆಗ್ಡೆ
ಅಧ್ಯಕ್ಷ, ಹಿಂದುಳಿದ ವರ್ಗಗಳ ಆಯೋಗ

ಮಹಾರಾಷ್ಟ್ರ: ಸ್ಪೀಕರ್ ಮೇಲೆ ಎಲ್ಲರ ಕಣ್ಣು

ಮುಂಬೈ (ಪಿಟಿಐ): ಪಕ್ಷಾಂತರ ನಿಷೇಧ ಕಾಯ್ದೆಯಡಿ ಶಾಸಕರ ಸದಸ್ಯತ್ವದ ಅನರ್ಹತೆ ಅರ್ಜಿಗೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಸಚಿವಾಲಯವು ಶಿವಸೇನಾದ ಶಿಂದೆ ಮತ್ತು ಉದ್ಧವ್ ಬಣದ ಸದಸ್ಯರಿಗೆ ನೋಟಿಸ್ ಜಾರಿಗೊಳಿಸಿರುವ ಬೆನ್ನಲ್ಲೇ ವಿಧಾನಸಭಾ ಸ್ಪೀಕರ್ ನಡೆಯ ಮೇಲೆ ಎಲ್ಲರ ಕುತೂಹಲದ ಕಣ್ಣು ನೆಟ್ಟಿದೆ. 5

ಹಲವೆಡೆ ಭೂಕುಸಿತ, ಪ್ರವಾಹ • 20 ಮಂದಿ ಸಾವು

'ಉತ್ತರ' ಮಳೆಗೆ ತತ್ತರ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿ, ಹರಿಯಾಣ, ಪಂಜಾಬ್, ರಾಜಸ್ಥಾನ, ಉತ್ತರ ಪ್ರದೇಶ, ಕೇಂದ್ರಾಡಳಿತ ಪ್ರದೇಶಗಳಾದ ಜಮ್ಮು-ಕಾಶ್ಮೀರ ಮತ್ತು ಲಡಾಖ್ ಸೇರಿದಂತೆ ಉತ್ತರ ಭಾರತದ ಹಲವೆಡೆ ಭಾನುವಾರ ಭಾರಿ ಮಳೆಯಾಗಿದೆ.

ಉತ್ತರಾಖಂಡ, ಹಿಮಾಚಲ ಪ್ರದೇಶದಲ್ಲಿಯೂ ಧಾರಾಕಾರ ಮಳೆಯಾಗಿದ್ದು, ಹಲವೆಡೆ ಭೂಕುಸಿತವೂ ಉಂಟಾಗಿದೆ. ಜನಜೀವನ ಅಸ್ತವ್ಯಸ್ತಗೊಂಡಿದೆ. ರಸ್ತೆಗಳು ಹಾಳಾಗಿದ್ದು, ಹಳಿಗಳ ಮೇಲೆ ಬಂಡೆಗಳು ಬಿದ್ದಿವೆ. ವಾಹನ-ರೈಲುಗಳ ಸಂಚಾರ ವ್ಯತ್ಯಯವಾಗಿದೆ. ರಕ್ಷಣಾ ಕಾರ್ಯ ಭರದಿಂದ ನಡೆಯುತ್ತಿದೆ.

ಮಳೆ ಸಂಬಂಧಿತ ಅವಘಡಗಳಲ್ಲಿ ಮೂವರು ಬಾಲಕಿಯರು ಸೇರಿದಂತೆ 20 ಮಂದಿ ಮೃತಪಟ್ಟಿದ್ದಾರೆ. ಮೂವರು ನಾಪತ್ತೆಯಾಗಿದ್ದರೆ, ಇಬ್ಬರಿಗೆ ಗಾಯಗಳಾಗಿವೆ. ದೆಹಲಿಯ ಶ್ರೀನಿವಾಸ ಪುರಿಯಲ್ಲಿ ಸರ್ಕಾರಿ ಶಾಲೆಯ ಒಂದು ಭಾಗದ ಗೋಡೆ ಕುಸಿದಿದೆ.



ಗುರುಗ್ರಾಮದ ಸುಭಾಷ್ ಚೌಕದಲ್ಲಿ ಭಾರಿ ಮಳೆಯಿಂದಾಗಿ ಕಾರು ಭಾಗಶಃ ಮುಳುಗಿದ್ದು, ವ್ಯಕ್ತಿಯೊಬ್ಬರು ಕಾರಿನ ಮೇಲೆ ಏರಿ ಕುಳಿತಿದ್ದರು –ಪಿಟಿಐ ಚಿತ್ರ

ಭಾನುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ ಹಿಂದಿನ 24 ಗಂಟೆಗಳಲ್ಲಿ ದೆಹಲಿಯಲ್ಲಿ 15.3 ಸೆಂ.ಮೀ.ನಷ್ಟು ಮಳೆ ಬಿದ್ದಿದೆ. 1982ರ ಜುಲೈ ನಂತರ ಒಂದು ದಿನದಲ್ಲಿ ಬಿದ್ದ ಗರಿಷ್ಠ ಪ್ರಮಾಣದ ಮಳೆ ಇದಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತಿಳಿಸಿದೆ.

ದೇಶದಾದ್ಯಂತ ಜುಲೈ ತಿಂಗಳ ಮೊದಲ ಎಂಟು ದಿನಗಳಲ್ಲಿ ಒಟ್ಟು 24.32 ಸೆಂ.ಮೀ.ನಷ್ಟು ಮಳೆ ಬಿದ್ದಿದೆ. ವಾಡಿಕೆ ಮಳೆಗಿಂತ ಶೇ 2ರಷ್ಟು ಹೆಚ್ಚು ಮಳೆ ಬಿದ್ದಂತಾಗಿದ್ದು, ಈವರೆಗಿನ ಮಳೆ ಕೊರತೆಯನ್ನು ನೀಗಿಸಿದಂತಾಗಿದೆ ಎಂದು ಐಎಂಡಿ ಹೇಳಿದೆ.

ಇನ್ನಷ್ಟು ಸುದ್ದಿಗಳು 05

ಒಳ ಪುಟ



ಪಶ್ಚಿಮ ಬಂಗಾಳ ಹಿಂಸಾಚಾರ: ಮೃತರ ಸಂಖ್ಯೆ 15ಕ್ಕೆ ಏರಿಕೆ 5

ಚಿನಕುರಳಿ

ಪ್ರಕಾಶ್ ಶೆಟ್ಟಿ



ಅನ್ನ ಭಾಗ್ಯ: ನೇರ ನಗದು ವರ್ಗಾವಣೆಗೆ ಇಂದು ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನ್ನ ಭಾಗ್ಯ' ಯೋಜನೆಯಡಿ ಹೆಚ್ಚುವರಿಯಾಗಿ ತಲಾ 5 ಕೆ.ಜಿ. ಅಕ್ಕಿ ವಿತರಿಸುವ ಬದಲಿಗೆ ಪ್ರತಿ ಕೆ.ಜಿ.ಗೆ ₹34ರಂತೆ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರ ಹಣ ವರ್ಗಾವಣೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಚಾಲನೆ ನೀಡುವರು.

ಅಧಿಕಾರಕ್ಕೆ ಬಂದರೆ, ಬಿಪಿಎಲ್ ಕುಟುಂಬಗಳ ಎಲ್ಲ ಸದಸ್ಯರಿಗೆ ತಲಾ 10 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ವಿತರಿಸುವುದಾಗಿ ಕಾಂಗ್ರೆಸ್ 'ಗ್ಯಾರಂಟಿ' ಘೋಷಿಸಿತ್ತು. ಐದು ಕೆ.ಜಿ. ಅಕ್ಕಿಯನ್ನು ಕೇಂದ್ರ ಸರ್ಕಾರ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ವಿತರಿಸುತ್ತಿದೆ. ಉಳಿದ ಐದು ಕೆ.ಜಿ. ಅಕ್ಕಿಯನ್ನು ರಾಜ್ಯ ಸರ್ಕಾರ ವಿತರಿಸಬೇಕಿದೆ. ಅಗತ್ಯ ಪ್ರಮಾಣದ ಅಕ್ಕಿ ಲಭ್ಯವಾಗದ ಕಾರಣ ಫಲಾನುಭವಿಗಳ ಖಾತೆಗೆ ತಾತ್ಕಾಲಿಕವಾಗಿ ಹಣ ವರ್ಗಾಯಿಸಲು ನಿರ್ಧರಿಸಲಾಗಿದೆ. ಜುಲೈ ತಿಂಗಳಿನಿಂದಲೇ ಪ್ರತಿ ಫಲಾನುಭವಿಗೆ ₹170ರಂತೆ ಕುಟುಂಬದ ಯಜಮಾನ/ಯಜಮಾನಿಯ ಖಾತೆಗೆ ನಗದು ವರ್ಗಾವಣೆ ಮಾಡಲಾಗುತ್ತದೆ.

ಗಲಭೆ ಪ್ರದೇಶದಲ್ಲಿ ಒಟಿಟಿ ಮಾತ್ರ ನಿಷೇಧ ಸೂಕ್ತ: ಟ್ರಾಯ್

'ಒಟಿಟಿ' ಸೇವೆಗಳಿಗೆ ಪರವಾನಗಿ?

ನವದೆಹಲಿ (ಪಿಟಿಐ): ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ಒಟಿಟಿ ಕಂಪನಿಗಳನ್ನು ಪರವಾನಗಿ ವ್ಯಾಪ್ತಿಯೊಳಗೆ ತರುವ ಸಾಧ್ಯತೆ ಕುರಿತು ಸಮಾಲೋಚನಾ ಪತ್ರವೊಂದರಲ್ಲಿ ಆಲೋಚನೆ ಹಂಚಿಕೊಂಡಿದೆ.

ಸ್ಮಾರ್ಟ್‌ಫೋನ್‌ಗಳಲ್ಲಿ ಕರೆ ಮಾಡಲು, ಸಂದೇಶ ಕಳುಹಿಸಲು ಬಳಸುವ ಒಟಿಟಿ ವೇದಿಕೆಗಳನ್ನು ನಿಯಂತ್ರಣ ವ್ಯವಸ್ಥೆಯ ಚೌಕಟ್ಟಿನೊಳಗೆ ತರುವುದರಿಂದ ಅವುಗಳಿಗೆ ಪ್ರವೇಶ ಶುಲ್ಕ ವಿಧಿಸಲು, ಅವುಗಳ ವರಮಾನವನ್ನು ದೂರಸಂಪರ್ಕ ಕಂಪನಿಗಳೊಂದಿಗೆ ಹಂಚಿಕೊಳ್ಳಲು, ಒಟಿಟಿ ಮೂಲಕ ಆಗುವ ಕರೆಗಳನ್ನು ಕಾನೂನು ಚೌಕಟ್ಟಿನೊಳಗೆ ತರಲು, ಕರೆಗಳ ಕುರಿತ ಮಾಹಿತಿ ಒದಗಿಸುವಂತೆ ಮಾಡಲು ಸಾಧ್ಯವಾಗುತ್ತದೆ.

ಟ್ರಾಯ್ ಈಚೆಗಷ್ಟೇ ಬಿಡುಗಡೆ ಮಾಡಿರುವ 'ರೆಗ್ಯುಲೇಟರಿ ಮೆಕಾನಿಸಂ



ಫಾರ್ ಓವರ್-ದಿ-ಟಾಪ್ (ಒಟಿಟಿ) ಕಮ್ಯುನಿಕೇಷನ್ ಸರ್ವಿಸಸ್ ಆ್ಯಂಡ್ ಸೆಲೆಕ್ಟಿವ್ ಬ್ಯಾನಿಂಗ್ ಆಫ್ ಒಟಿಟಿ ಸರ್ವಿಸಸ್' ಎನ್ನುವ ಸಲಹಾ ಪತ್ರದಲ್ಲಿ ಈ ಅಂಶಗಳನ್ನು ಉಲ್ಲೇಖಿಸಿದೆ.

ವಾಟ್ಸ್‌ಆ್ಯಪ್, ಗೂಗಲ್ ಮೀಟ್, ಫೇಸ್‌ಟೈಮ್ ಮುಂತಾದ ಇಂಟರ್‌ನೆಟ್ ಆಧಾರಿತ ಸಂದೇಶ ರವಾನೆ ಹಾಗೂ ಕರೆ ಸೇವೆ ಒದಗಿಸುವ ಆ್ಯಪ್‌ಗಳನ್ನು ನಿಯಂತ್ರಿಸುವ ಅಗತ್ಯದ ಕುರಿತು ಟ್ರಾಯ್ ಸಲಹಾ ಪತ್ರದಲ್ಲಿ ವಿವರಿಸಿದೆ.

ಸದ್ಯ ಒಟಿಟಿಗಳು ಯಾವುದೇ ಪರವಾನಗಿ ಇಲ್ಲದೇ ದೇಶದಲ್ಲಿ ಕಾರ್ಯಾಚರಣೆ ನಡೆಸಬಹುದು. ಆದರೆ, ನಿರ್ದಿಷ್ಟ ಪ್ರದೇಶದಲ್ಲಿ ಗಲಭೆ/ಪ್ರಕ್ಷುಬ್ಧ ವಾತಾವರಣ ಸೃಷ್ಟಿಯಾದಾಗ ಇಂಟರ್‌ನೆಟ್ ಸಂಪರ್ಕ ಸಂಪೂರ್ಣವಾಗಿ ಸ್ಥಗಿತಗೊಳಿಸುವುದರಿಂದ ಆಗುವ ಪರಿಣಾಮವನ್ನು ತಗ್ಗಿಸಲು ಕರೆ ಮತ್ತು ಮೆಸೇಜ್ ಮಾಡುವ ಅಪ್ಲಿಕೇಷನ್ (ಆ್ಯಪ್) ಸೇವೆಗಳ ಮೇಲೆ ಮಾತ್ರ ನಿಷೇಧ ಹೇರುವ ಸಾಧ್ಯತೆಯ ಕುರಿತು ಪರಿಶೀಲಿಸುವಂತೆ ಸಂಹವನ ಮತ್ತು ಐ.ಟಿ. ಕುರಿತ ಸಂಸದೀಯ ಸಮಿತಿಯು ಶಿಫಾರಸು ಮಾಡಿದೆ.

ದೂರಸಂಪರ್ಕ ಅಥವಾ ಇಂಟರ್‌ನೆಟ್ ಸಂಪರ್ಕ ಸ್ಥಗಿತಗೊಳಿಸುವುದರಿಂದ ದೇಶದ ಆರ್ಥಿಕತೆಯ ಮೇಲೆ ಗಮನಾರ್ಹ ಪರಿಣಾಮ ಉಂಟಾಗಲಿದೆ. ಅಗತ್ಯ ಸೇವೆಗಳಿಗೂ ಅಡ್ಡಿಯಾಗುತ್ತದೆ ಎನ್ನುವ ಅಂಶವನ್ನು ಅಧ್ಯಯನಗಳಿಂದ ತಿಳಿದುಕೊಂಡಿರುವುದಾಗಿ ಟ್ರಾಯ್ ಹೇಳಿದೆ. ಅಂತರ್ಜಾಲವನ್ನು ಸ್ಥಗಿತಗೊಳಿಸುವ ಬದಲಿಗೆ ಕೆಲವು ಒಟಿಟಿ ಆ್ಯಪ್‌ಗಳು ಮತ್ತು ಜಾಲತಾಣಗಳ ಮೇಲೆ ನಿಷೇಧ ಹೇರುವುದು ಹೆಚ್ಚು ಸೂಕ್ತವಾಗಲಿದೆ ಎಂದು ಟ್ರಾಯ್ ಅಭಿಪ್ರಾಯಪಟ್ಟಿದೆ.

ಮೊಬೈಲ್ ಕಂಪನಿ ವರಮಾನ ಇಳಿಕೆ

ವಾಟ್ಸ್‌ಆ್ಯಪ್‌ನಂತಹ ಅಂತರ್ಜಾಲ ಆಧಾರಿತ ಕರೆ ಮತ್ತು ಸಂದೇಶ ರವಾನೆ ಆ್ಯಪ್‌ಗಳ ಬಳಕೆ ಹೆಚ್ಚಳದಿಂದ ದೂರಸಂಪರ್ಕ ಸೇವೆ ಒದಗಿಸುವ ಕಂಪನಿಗಳಿಗೆ ವಾಯ್ಸ್ ಕಾಲ್, ಎಸ್‌ಎಂಎಸ್‌ನಿಂದ ಬರುವ ವರಮಾನದಲ್ಲಿ ಕ್ರಮವಾಗಿ ಶೇ 80 ಮತ್ತು ಶೇ 94ರಷ್ಟು ಕುಸಿತ ಆಗಿದೆ ಎಂದು ಟ್ರಾಯ್ ಮಾಹಿತಿ ನೀಡಿದೆ. 2013ರ ಜೂನ್ ತ್ರೈಮಾಸಿಕದಿಂದ 2022ರ ಡಿಸೆಂಬರ್ ತ್ರೈಮಾಸಿಕದಲ್ಲಿ ಡೇಟಾ ಬಳಕೆಯಿಂದಾಗಿ ಪ್ರತಿ ಗ್ರಾಹಕನಿಂದ ಪಡೆಯುವ ಆದಾಯ 10 ಪಟ್ಟು ಬೆಳೆದಿದೆ ಎಂದು ಅದು ತಿಳಿಸಿದೆ.

ಜೆರಾಕ್ಸ್ ಅಂಗಡಿ ಮಾಲೀಕನ ಮೊಬೈಲ್ ಸಿಮ್‌ಕಾರ್ಡ್ ಬ್ಲಾಕ್ ಮಾಡಿಸಿದ್ದ ಸೈಬರ್ ವಂಚಕರು

ನಕಲಿ ಸಿಮ್ ಬಳಸಿ ₹2 ಲಕ್ಷ ಡ್ರಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆರಾಕ್ಸ್ ಅಂಗಡಿಯೊಂದರ ಮಾಲೀಕರ ಸಿಮ್ ಕಾರ್ಡ್ ಸ್ಥಗಿತ (ಬ್ಲಾಕ್) ಮಾಡಿಸಿದ್ದ ಸೈಬರ್ ವಂಚಕರು, ನಕಲಿ ದಾಖಲೆಗಳ ಮೂಲಕ ವಹಿವಾಟು ನಡೆಸಿ ಬ್ಯಾಂಕ್ ಖಾತೆಯಲ್ಲಿದ್ದ ₹ 2 ಲಕ್ಷ ಡ್ರಾ ಮಾಡಿಕೊಂಡಿದ್ದಾರೆ.

ಹಣ ಕಳೆದುಕೊಂಡಿರುವ ಮಾಲೀಕ ಶಿವಕುಮಾರ್ ಅವರು ಸೋಲದೇವನಹಳ್ಳಿ ಠಾಣೆಗೆ ದೂರು ನೀಡಿದ್ದಾರೆ.

'ಚಿಕ್ಕಸಂದ್ರದ ನಿವಾಸಿ ಶಿವಕುಮಾರ್, ಜೆರಾಕ್ಸ್ ಅಂಗಡಿ ಇಟ್ಟುಕೊಂಡಿದ್ದಾರೆ. ಇತ್ತೀಚೆಗೆ ಅವರ ಮೊಬೈಲ್ ನೆಟ್‌ವರ್ಕ್ ಏಕಾಏಕಿ ಬಂದ್ ಆಗಿತ್ತು. ಈ ಬಗ್ಗೆ ಮೊಬೈಲ್ ಸೇವಾ ಕಂಪನಿ ಸಹಾಯವಾಣಿಗೆ ಕರೆ ಮಾಡಿ ವಿಚಾರಿಸಿದ್ದರು. ಹಳೇ ಸಿಮ್‌ಕಾರ್ಡ್ ಬ್ಲಾಕ್ ಆಗಿದ್ದು, ಹೊಸ ಸಿಮ್‌ಕಾರ್ಡ್ ಖರೀದಿಸುವಂತೆ ಪ್ರತಿನಿಧಿ ಸಲಹೆ ನೀಡಿದ್ದರು' ಎಂದು ಪೊಲೀಸರು ಹೇಳಿದರು.

'ಹೊಸ ಸಿಮ್ ಕಾರ್ಡ್ ಖರೀದಿಸಿದ್ದ ಉದ್ಯಮಿ, ಮೊಬೈಲ್‌ಗೆ ಹಾಕಿದ್ದರು. ಬ್ಯಾಂಕ್ ಖಾತೆಯಿಂದ ಹಂತ ಹಂತವಾಗಿ ₹ 2 ಲಕ್ಷ ಹಣ ಡ್ರಾ ಆದ ಬಗ್ಗೆ ಸಂದೇಶ ಬಂದಿತ್ತು.

ಅಪರಾಧ ಸುದ್ದಿ

ಈ ಬಗ್ಗೆ ಶಿವಕುಮಾರ್, ಬ್ಯಾಂಕ್‌ನಲ್ಲಿ ವಿಚಾರಿಸಿದ್ದರು. ಅಪರಿಚಿತರು ಮೊಬೈಲ್ ಸಂಖ್ಯೆ ಬಳಸಿ ಹಣ ವರ್ಗಾವಣೆ ಮಾಡಿಕೊಂಡಿರುವುದು ಗೊತ್ತಾಗಿತ್ತು. ಬಳಿಕವೇ ಠಾಣೆಗೆ ಬಂದು ದೂರು ನೀಡಿದ್ದಾರೆ' ಎಂದು ತಿಳಿಸಿದರು.

ವ್ಯವಸ್ಥಿತ ಕೃತ್ಯ: 'ಚಾಲ್ತಿಯಲ್ಲಿರುವ ಮೊಬೈಲ್ ಸಿಮ್‌ಕಾರ್ಡ್ ಬ್ಲಾಕ್ ಮಾಡಿಸುವ ಸೈಬರ್ ವಂಚಕರು, ನಕಲಿ ದಾಖಲೆ ಬಳಸಿ ಹೊಸ ಸಿಮ್‌ಕಾರ್ಡ್‌ಗಳನ್ನು ಖರೀದಿಸಿ ವಂಚನೆ ಮಾಡುವುದನ್ನು ವೃತ್ತಿ ಮಾಡಿಕೊಂಡಿದ್ದಾರೆ. ಇದೊಂದು ವ್ಯವಸ್ಥಿತ ಸಂಚು. ಹೊರ ರಾಜ್ಯದಲ್ಲಿರುವ ಆರೋಪಿಗಳು ಕೃತ್ಯ ಎಸಗುತ್ತಿದ್ದಾರೆ' ಎಂದು ಪೊಲೀಸರು ಹೇಳಿದರು.

'ಶಿವಕುಮಾರ್ ಅವರ ಸಿಮ್ ಕಾರ್ಡ್ ಬಂದ್ ಮಾಡಿಸಿದ್ದ ಆರೋಪಿಗಳು, ನಕಲಿ ದಾಖಲೆ ನೀಡಿ ಹೊಸ ಸಿಮ್‌ಕಾರ್ಡ್ ಖರೀದಿಸಿದ್ದಾರೆ. ಬ್ಯಾಂಕ್‌ಗೆ ಸಂಬಂಧಪಟ್ಟ ದಾಖಲೆಗಳನ್ನೂ ನಕಲಿ ಮಾಡಿ, ಮೊಬೈಲ್ ಸಂಖ್ಯೆಗೆ ಬಂದ ಒಟಿಪಿ (ಒನ್ ಟೈಂ ಪಾಸ್‌ವರ್ಡ್) ಬಳಸಿ ಹಣ ವರ್ಗಾವಣೆ ಮಾಡಿಸಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಇಂಥ ಜಾಲದ ಬಗ್ಗೆ ಜನರು ಎಚ್ಚರಿಕೆ ವಹಿಸಬೇಕು' ಎಂದು ಪೊಲೀಸರು ತಿಳಿಸಿದರು.

ಮೊಬೈಲ್ ನೆಟ್‌ವರ್ಕ್ ಬಂದಾದರೆ ಹೀಗೆ ಮಾಡಿ...

- ಒಮ್ಮಿಂದೊಮ್ಮೆಲೇ ಮೊಬೈಲ್ ನೆಟ್‌ವರ್ಕ್ ಬಂದ್ (ಬ್ಲಾಕ್) ಆದರೆ, ಡೆಬಿಟ್ ಹಾಗೂ ಕ್ರೆಡಿಟ್ ಕಾರ್ಡ್‌ಗಳನ್ನು ಮೊದಲಿಗೆ ಬ್ಲಾಕ್ ಮಾಡಿಸಿ. ಅದಕ್ಕಾಗಿ ಆಯಾ ಬ್ಯಾಂಕ್‌ಗಳ ಸಹಾಯವಾಣಿಗಳಿಗೆ ಕರೆ ಮಾಡಿ.
- ಬ್ಲಾಕ್ ಆದ ನಂತರ ಬರುವ ಕರೆಗಳು ಹಾಗೂ ಸಂದೇಶಗಳಿಗೆ ಪ್ರತಿಕ್ರಿಯಿಸಬೇಡಿ
- ಹತ್ತಿರದ ಮೊಬೈಲ್ ಸೇವಾ ಕಂಪನಿ ಮಳಿಗೆಗೆ ಭೇಟಿ ನೀಡಿ. ಬ್ಲಾಕ್ ಆಗಿದ್ದಕ್ಕೆ ಕಾರಣವೇನು ಎಂಬುದನ್ನು ವಿಚಾರಿಸಿ
- ನಿಮ್ಮ ಹೆಸರಿನಲ್ಲಿ ಬೇರೊಬ್ಬರು ಸಿಮ್ ಕಾರ್ಡ್ ಖರೀದಿಸಿದ್ದರೆ, ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ದೂರು ನೀಡಿ

ಆಕ್ಟಿವೇಷನ್ ನೆಪದಲ್ಲೂ ವಂಚನೆ

'ಬ್ಲಾಕ್ ಆದ ಸಿಮ್‌ಕಾರ್ಡ್ ಬದಲಿಸಿ, ಹೊಸ ಸಿಮ್‌ಕಾರ್ಡ್ ಖರೀದಿಸಿ ಬಳಕೆ ಮಾಡುತ್ತಿರುವ ಸಂದರ್ಭದಲ್ಲೂ ವಂಚಕರು ಕರೆ ಮಾಡುತ್ತಾರೆ. ಆಕ್ಟಿವೇಷನ್ ಪ್ರಕ್ರಿಯೆ ಪೂರ್ಣಗೊಳಿಸಬೇಕೆಂದು ಹೇಳಿ, ಬಳಕೆದಾರರಿಂದ ಒಟಿಪಿ ಪಡೆದು ಬ್ಯಾಂಕ್ ಖಾತೆಯಲ್ಲಿದ್ದ ಹಣ ಡ್ರಾ ಮಾಡಿಕೊಳ್ಳುತ್ತಾರೆ. ಈ ಬಗ್ಗೆಯೂ ಪ್ರಕರಣಗಳು ದಾಖಲಾಗುತ್ತಿವೆ' ಎಂದು ಪೊಲೀಸರು ಹೇಳಿದರು.

ಚಿಂದಿ ಆಯುವ ವಿಚಾರಕ್ಕೆ ಗಲಾಟೆ: ಕೊಲೆಯಲ್ಲಿ ಅಂತ್ಯ

ಬೆಂಗಳೂರು: ಮಲ್ಲೇಶ್ವರ ಠಾಣೆ ವ್ಯಾಪ್ತಿಯಲ್ಲಿ ವ್ಯಕ್ತಿಯೊಬ್ಬರನ್ನು ದೊಣ್ಣೆಯಿಂದ ಹೊಡೆದು ಕೊಲೆ ಮಾಡಲಾಗಿದ್ದು, ಪರಿಚಯಸ್ಥನೇ ಕೃತ್ಯ ಎಸಗಿ ಪರಾರಿಯಾಗಿದ್ದಾನೆ.

'ಕೊಲೆಯಾದ ವ್ಯಕ್ತಿ, ಚಿಂದಿ ಆಯುವ ಕೆಲಸ ಮಾಡುತ್ತಿದ್ದರು. 35 ವರ್ಷದಿಂದ 40 ವರ್ಷ ವಯಸ್ಸಾಗಿರಬಹುದೆಂದು ಅಂದಾಜಿಸಲಾಗಿದೆ. ಗುರುತು ಪತ್ತೆಗಾಗಿ ವಿವಿಧ ಠಾಣೆಗಳಿಗೆ ಫೋಟೊ ರವಾನಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮೃತ ವ್ಯಕ್ತಿ ಹಾಗೂ ಆರೋಪಿ, ಪರಿಚಯಸ್ಥರು. ಇಬ್ಬರೂ ಒಟ್ಟಿಗೆ ಚಿಂದಿ ಆಯುತ್ತಿದ್ದರು. ಶನಿವಾರ ಸಂಜೆ 7 ಗಂಟೆ ಸುಮಾರಿಗೆ ಚಿಂದಿ ಆಯುವ ವಿಚಾರಕ್ಕಾಗಿ ಇಬ್ಬರ ನಡುವೆ ಜಗಳ ಶುರುವಾಗಿತ್ತು. ಇಬ್ಬರೂ ಪರಸ್ಪರ ಕೈ ಕೈ ಮಿಲಾಯಿಸಿದ್ದರು. ದೊಣ್ಣೆಯಿಂದ ಆರೋಪಿ, ವ್ಯಕ್ತಿಯ ತಲೆಗೆ ಹೊಡೆದಿದ್ದ. ತೀವ್ರ ರಕ್ತಸ್ರಾವದಿಂದಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಜಗಳ ಬಿಡಿಸಲು ಹೋಗಿದ್ದ ಆಟೊ ಚಾಲಕನಿಗೂ ಆರೋಪಿ ಜೀವ ಬೆದರಿಕೆಯೊಡ್ಡಿರುವುದು ಗೊತ್ತಾಗಿದೆ. ಚಾಲಕನಿಂದ ದೂರು ಪಡೆದು ಕೊಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಡ್ರಗ್ಸ್: ತಾಂಜಾನಿಯಾ ಮಹಿಳೆ ಸೆರೆ

ಬೆಂಗಳೂರು: ಕೊತ್ತನೂರು ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ತಾಂಜಾನಿಯಾದ ಮಹಿಳೆಯೊಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

'ಮಹಿಳೆ, ಪರಿಚಯಸ್ಥ ಗ್ರಾಹಕರಿಗೆ ಡ್ರಗ್ಸ್ ಮಾರುತ್ತಿದ್ದರು. ಕಾರ್ಯಾಚರಣೆ ನಡೆಸಿ ಬಂಧಿಸಲಾಗಿದೆ. 105 ಗ್ರಾಂ ಎಂಡಿಎಂಎ ಹಾಗೂ 2 ಕೆ.ಜಿ 200 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ. ತಮ್ಮದೇ ದೇಶದ ಪೆಡ್ಲರ್‌ಗಳ ಜೊತೆ ಒಡನಾಟ ಹೊಂದಿದ್ದ ಆರೋಪಿ ಅವರಿಂದ ಡ್ರಗ್ಸ್ ಖರೀದಿಸಿ ತಂದು ಮಾರುತ್ತಿದ್ದರು. ಇವರ ಹಿನ್ನೆಲೆ ಹಾಗೂ ವೀಸಾ ಅವಧಿ ಬಗ್ಗೆ ತಿಳಿಯಲು ತನಿಖೆ ಮುಂದುವರಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಸಂಚಾರ ದಟ್ಟಣೆ: 'ಒಂದು ವಾಕ್ಯದಲ್ಲಿ ಉತ್ತರಿಸಿ ಕಾಫಿ ಸವಿಯಿರಿ'

ಬೆಂಗಳೂರು: ನಗರದಲ್ಲಿ ಉಂಟಾಗುತ್ತಿರುವ ಸಂಚಾರ ದಟ್ಟಣೆಗೆ ಕಾರಣವೇನು? ಅದಕ್ಕೆ ಪರಿಹಾರವೇನು? ಎಂಬುದನ್ನು ತಿಳಿದುಕೊಳ್ಳಲು ಸಾರ್ವಜನಿಕರ ಮೊರೆ ಹೋಗಿರುವ ಪೊಲೀಸರು, 'ಒಂದು ವಾಕ್ಯದಲ್ಲಿ ಉತ್ತರಿಸಿ, ಠಾಣೆಗೆ ಬಂದು ಕಾಫಿ ಸವಿಯಿರಿ' ಎಂದು ಸಾಮಾಜಿಕ ಮಾಧ್ಯಮದಲ್ಲಿ ಅಭಿಯಾನ ಆರಂಭಿಸಿದ್ದಾರೆ.

ದಿನದಿಂದ ದಿನಕ್ಕೆ ಸಂಚಾರ ದಟ್ಟಣೆ ಹೆಚ್ಚಾಗುತ್ತಿದ್ದು, ಕೆಲ ರಸ್ತೆಗಳಲ್ಲಿ ವಾಹನಗಳು ಸಾಲುಗಟ್ಟಿ ನಿಲ್ಲುವಂತಾಗಿವೆ. ಹಲವು ಕ್ರಮ ಕೈಗೊಂಡರೂ ಸಮಸ್ಯೆಗೆ ಶಾಶ್ವತ ಪರಿಹಾರ ಲಭಿಸುತ್ತಿಲ್ಲ. ಇದೇ ಕಾರಣಕ್ಕೆ ಟ್ವೀಟ್ ಮಾಡಿರುವ ಯಶವಂತಪುರ ಸಂಚಾರ ಠಾಣೆ ಪೊಲೀಸರು, ಸಾರ್ವಜನಿಕರಿಂದ ಉತ್ತರ ಬಯಸಿದ್ದಾರೆ.

'ಮೇಷ್ಟ್ರ: ಸಂಚಾರ ದಟ್ಟಣೆಗಳು ಉಂಟಾಗಲು ಕಾರಣಗಳೇನು ಮತ್ತು ಅವುಗಳನ್ನು ಹೇಗೆ ನಿವಾರಿಸಬಹುದು ? (ಒಂದೇ ವಾಕ್ಯದಲ್ಲಿ ಉತ್ತರಿಸಿ). ಬುದ್ದಿವಂತ ವಿದ್ಯಾರ್ಥಿಗಳು ಈ ಕೂಡಲೇ ಉತ್ತರಿಸಬಹುದು. (ಪ್ರತಿಯೊಬ್ಬರೂ ಸಹ ವಿದ್ಯಾರ್ಥಿಗಳೇ ಅಂಬೋದು ಸತ್ಯ ಅಲ್ವಾ). ಅತ್ಯುತ್ತಮ ಉತ್ತರದ ಮಾಲೀಕರಿಗೆ ನಮ್ಮೊಟ್ಟಿಗೆ ಠಾಣೆಯಲ್ಲಿ ಕಾಫಿ ಕುಡಿಯುವ ಅವಕಾಶ ಉಂಟು' ಎಂದು ಪೊಲೀಸರು ಟ್ವೀಟ್‌ನಲ್ಲಿ ಬರೆದಿದ್ದಾರೆ.

ಟ್ವೀಟ್‌ಗೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಹಲವು ಕಾರಣ ಹಾಗೂ ಪರಿಹಾರ ಸೂಚಿಸಿದ್ದಾರೆ. ಟ್ವೀಟ್ ಸಹ ಎಲ್ಲೆಡೆ ಹರಿದಾಡುತ್ತಿದೆ.

ಹಣ ಸಂಪಾದನೆಗೆ ಯೋಗ ದುರ್ಬಳಕೆ: ಗೊರುಚ ಬೇಸರ



ಬೆಂಗಳೂರು: 'ಯೋಗಕ್ಕೆ ಹಕ್ಕುಸ್ವಾಮ್ಯ ಇಲ್ಲವೆಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ ಬಳಿಕ ಹಲವರು ಯೋಗವನ್ನು ಸುಲಭವಾಗಿ ಹಣ ಸಂಪಾದಿಸುವ ಮಾರ್ಗವಾಗಿ ಬಳಸಿಕೊಳ್ಳುತ್ತಿದ್ದಾರೆ' ಎಂದು ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಬೇಸರ ವ್ಯಕ್ತಪಡಿಸಿದರು.

ಯೋಗರತ್ನ ಆತ್ಮಪ್ರೇಮ್ ಡಾ. ಧನ್ವಂತರಿ ಎಸ್. ಒಡೆಯರ್ ಸ್ನೇಹ ಬಳಗ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಸಂಯಮ ಯೋಗ ಮಹಾವಿದ್ಯಾಲಯದ 20ನೇ ವಾರ್ಷಿಕೋತ್ಸವ ಹಾಗೂ ಧನ್ವಂತರಿ ಎಸ್. ಒಡೆಯರ್ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

'ಯೋಗದ ಮಹತ್ವದ ಜೊತೆಗೆ ಅದರ ದುರುಪಯೋಗದ ಬಗ್ಗೆಯೂ ಜಾಗೃತಿ ಮೂಡಿಸಬೇಕು. ಯೋಗದ ಬಗ್ಗೆ ಸೂಕ್ತ ಸಂಶೋಧನೆ, ಅನುಭವ ಇಲ್ಲದಿದ್ದವರೂ ಪುಸ್ತಕಗಳನ್ನು ಬರೆಯುತ್ತಿದ್ದಾರೆ. ಈ ಬೆಳವಣಿಗೆಗಳಿಂದ ಯೋಗ ಕಲುಷಿತಗೊಳ್ಳದಂತೆ ನೋಡಿಕೊಳ್ಳಬೇಕು. ದೇಹ ಮತ್ತು ಮನಸ್ಸಿನಲ್ಲಿ ಸಾಮರಸ್ಯ ತರುವುದೇ ಯೋಗ' ಎಂದು ಹೇಳಿದರು.

ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನದ ಕುಲಪತಿ ಎಚ್.ಆರ್. ನಾಗೇಂದ್ರ, 'ಇಂದು ವಿಶ್ವದೆಲ್ಲೆಡೆ ಯೋಗ ಪಸರಿಸಿದೆ. ಯೋಗದ ಪ್ರಯೋಜನಗಳ ಬಗ್ಗೆ ಜನರಲ್ಲಿ ಅರಿವು ಮೂಡುತ್ತಿದೆ. ಮಾನಸಿಕ ಒತ್ತಡ, ದೈಹಿಕ ಅನಾರೋಗ್ಯಕ್ಕೆ ಪರಿಹಾರವಾಗಿ ಯೋಗ ಅನುಸರಿಸಲಾಗುತ್ತಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ಎಚ್.ಆರ್.ನಾಗೇಂದ್ರ ಅವರನ್ನು ಸನ್ಮಾನಿಸಲಾಯಿತು. ಶಾಸಕ ಸುರೇಶ ಕುಮಾರ್, ಧನ್ವಂತರಿ ಎಸ್. ಒಡೆಯರ್, ತುಮಕೂರಿನ ತಪೋವನದ ಹಿರೇಮಠದ ಅಧ್ಯಕ್ಷ ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ವಿ ನಾಗರಾಜಮೂರ್ತಿ ಹಾಗೂ ಟಿ. ಸುಮತಾರಾಣಿ ಇದ್ದರು.

ಪೊಲೀಸರ ಸೋಗಿನಲ್ಲಿ ದರೋಡೆ

ರಾಮನಗರ: ಪೊಲೀಸರ ಸೋಗಿನಲ್ಲಿ ಕಾರೊಂದನ್ನು ತಡೆದ ನಾಲ್ವರ ಗುಂಪು, ಚಾಲಕನ ಮೇಲೆ ಹಲ್ಲೆ ನಡೆಸಿ 30 ಗ್ರಾಂ ಚಿನ್ನದ ಸರವನ್ನು ದೋಚಿರುವ ಘಟನೆ ನಗರದ ಹೊರವಲಯದ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ಕನ್ನಮಂಗಲ ಬ್ರಿಡ್ಜ್ ಬಳಿ ನಡೆದಿದೆ.

ಬೆಂಗಳೂರಿನ ಐಟಿಸಿ ಕಂಪನಿಯಲ್ಲಿ ಮಾನವ ಸಂಪನ್ಮೂಲ ಅಧಿಕಾರಿಯಾಗಿ ಕೆಲಸ ಮಾಡುತ್ತಿರುವ ವಿಶ್ವೇಶ್ವರಯ್ಯ ಲೇಔಟ್‌ನ ಧನುಷ್ ದರೋಡೆಗೆ ಒಳಗಾದವರು.

ಮೈಸೂರಿನಲ್ಲಿ ತೀರಿಕೊಂಡಿದ್ದ ಸಂಬಂಧಿಕರೊಬ್ಬರ ಅಂತ್ಯಕ್ರಿಯೆಯಲ್ಲಿ ಜುಲೈ 7ರಂದು ಧನುಷ್ ಪಾಲ್ಗೊಂಡು, ಹೆದ್ದಾರಿಯಲ್ಲಿ ರಾತ್ರಿ 8ರ ಸುಮಾರಿಗೆ ವಾಪಸ್ ಬರುತ್ತಿದ್ದರು. ಕನ್ನಮಂಗಲ ಬ್ರಿಡ್ಜ್ ಬಳಿ ಅವರ ಕಾರನ್ನು ಎರಡು ಬೈಕ್‌ಗಳಲ್ಲಿ ನಾಲ್ವರು ಅಪರಿಚಿತರು ಹಿಂಬಾಲಿಸಿಕೊಂಡು ಬಂದು ತಡೆದಿದ್ದಾರೆ.

'ನಾವು ಪೊಲೀಸರು ಎಲ್ಲಿಂದ ಬರುತ್ತಿದ್ದೀರಿ?' ಎಂದು ಧನುಷ್ ಅವರಿಗೆ ಪ್ರಶ್ನೆ ಕೇಳಿದ ಅಪರಿಚಿತರು, ಕಾರಿನ ಗಾಜು ಒಡೆಯಲು ಮುಂದಾಗಿದ್ದಾರೆ. ಆಗ,ಕಾರಿನಿಂದ ಕೆಳಗಿಳಿದ ಧನುಷ್ ಅವರ ಮುಖಕ್ಕೆ ಒಬ್ಬ ಗುದ್ದಿದ್ದಾನೆ.

ಮತ್ತೊಬ್ಬ ಚಾಕು ತೋರಿಸಿ, ಕತ್ತಿನಲ್ಲಿದ್ದ ₹1.50ಲಕ್ಷ ಮೌಲ್ಯದ ಚಿನ್ನದ ಸರ ಕಿತ್ತುಕೊಂಡಿದ್ದಾನೆ. ಮತ್ತೆ ಅವರ ಮೇಲೆ ಹಲ್ಲೆ ನಡೆಸಿ ಬೈಕ್‌ನಲ್ಲಿ ಪರಾರಿಯಾಗಿದ್ದಾರೆ ಎಂದು ರಾಮನಗರ ಗ್ರಾಮಾಂತರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಮೆಕ್‌ಡೊನಾಲ್ಡ್ ಮಳಿಗೆಗೆ ಬೆಂಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರ ನಾಲ್ಕನೇ ಹಂತದಲ್ಲಿರುವ ಮೆಕ್ ಡೊನಾಲ್ಡ್ ಮಳಿಗೆಯಲ್ಲಿ ಭಾನುವಾರ ಬೆಂಕಿ ಅವಘಡ ಸಂಭವಿಸಿದ್ದು, ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ನಂದಿಸಿದ್ದಾರೆ.

'ಶ್ರಾವಣಿ ಕಟ್ಟಡದಲ್ಲಿರುವ ಮೆಕ್‌ಡೊನಾಲ್ಡ್ ಮಳಿಗೆ ಅಡುಗೆ ಕೊಠಡಿಯಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ದಟ್ಟ ಹೊಗೆ ಆವರಿಸಿತ್ತು. ಇದೇ ಕಟ್ಟಡದಲ್ಲಿ 'ಆಕಾಶ್ ಬೈಜೂಸ್' ತರಬೇತಿ ಸಂಸ್ಥೆಯಿದ್ದು, ತರಗತಿ ಕೊಠಡಿಗಳಲ್ಲೂ ಹೊಗೆ ಹಬ್ಬಿತ್ತು. ಆಗ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು, ಹೊರಗೆ ಬಂದಿದ್ದರು' ಎಂದು ಅಗ್ನಿಶಾಮಕ ಸಿಬ್ಬಂದಿ ಹೇಳಿದರು.

'ಎರಡು ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಲಾಗಿದೆ. ಪೀಠೋಪಕರಣ ಸುಟ್ಟಿವೆ. ಉಳಿದಂತೆ, ಜೀವ ಹಾನಿ ಆಗಿಲ್ಲ. ಎಲ್ಲರೂ ಸುರಕ್ಷಿತವಾಗಿ ಹೊರಗೆ ಬಂದಿದ್ದಾರೆ. ವಿದ್ಯುತ್ ಶಾರ್ಟ್ ಸರ್ಕೀಟ್‌ನಿಂದ ಅವಘಡ ಸಂಭವಿಸಿರುವ ಅನುಮಾನವಿದೆ' ಎಂದರು.

ಅಪಘಾತ: ಹಿಂಬದಿ ಸವಾರ ಸಾವು

ಬೆಂಗಳೂರು: ಬನಶಂಕರಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಅಪಘಾತ ಸಂಭವಿಸಿದ್ದು, ಬೈಕ್ ಹಿಂಬದಿ ಸವಾರ ರಾಮ್‌ಕುಮಾರ್ (29) ಮೃತಪಟ್ಟಿದ್ದಾರೆ.

'ಕತ್ರಿಗುಪ್ಪೆ ನಿವಾಸಿ ರಾಮ್‌ಕುಮಾರ್, ಕಂಪನಿಯೊಂದರ ಉದ್ಯೋಗಿ. ಸ್ನೇಹಿತ ಯಶವಂತ್ ಜೊತೆ ಶನಿವಾರ ರಾತ್ರಿ ಕಾಫಿ ಕುಡಿಯಲು ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ತಿಳಿಸಿದರು.

'ಸ್ನೇಹಿತರು ಕತ್ರಿಗುಪ್ಪೆಯಲ್ಲಿ ಭೇಟಿಯಾಗಿದ್ದರು. ಕಾಫಿ ಕುಡಿಯಲು ಅಂಗಡಿಗೆ ಇಬ್ಬರು ಬೈಕ್ ನಲ್ಲಿ ಹೊರಟಿದ್ದರು. ಯಶವಂತ್, ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಬೈಕ್ ಚಲಾಯಿಸಿದ್ದರು.'

'ಹೊರವರ್ತುಲ ರಸ್ತೆಯಲ್ಲಿರುವ ರಾಣಿ ಚನ್ನಮ್ಮ ಮೇಲ್ಸೇತುವೆ ಬಳಿಯ ಡೌನ್ ರ್‍ಯಾಂಪ್‌ನ ತಡೆಗೋಡೆಗೆ ಬೈಕ್ ಡಿಕ್ಕಿ ಹೊಡೆದಿತ್ತು. ಇಬ್ಬರೂ ಉರುಳಿ ಬಿದ್ದಿದ್ದರು. ತೀವ್ರ ಗಾಯಗೊಂಡು ರಾಮ್‌ಕುಮಾರ್ ಮೃತಪಟ್ಟಿದ್ದಾರೆ. ಯಶವಂತ್ ಅವರಿಗೂ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬೈಕ್ ಜಪ್ತಿ ಮಾಡಿ ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

'ಕಥೆ ಹುಟ್ಟುವ ಪರಿಯೇ ವಿಭಿನ್ನ'

ಪ್ರಜಾವಾಣಿ ವಾರ್ತೆ



ನಗರದಲ್ಲಿ ಭಾನುವಾರ 'ಸಾವಣ್ಣ ಪ್ರಕಾಶನ' ಆಯೋಜಿಸಿದ್ದ ಸಮಾಂಭದಲ್ಲಿ ನಟ ಡಾಲಿ ಧನಂಜಯ (ಎಡದಿಂದ ನಾಲ್ಕನೆಯವರು) ನಾಲ್ಕು ಕೃತಿಗಳನ್ನು ಬಿಡುಗಡೆ ಮಾಡಿದರು. (ಎಡದಿಂದ) ಪ್ರಕಾಶಕ ಜಮೀಲ್ ಸಾವಣ್ಣ, ಜಗದೀಶ ಶರ್ಮಾ ಸಂಪ, ರಾಜ್ ಬಿ. ಶೆಟ್ಟಿ, ಜೋಗಿ, ಗೋಪಾಲಕೃಷ್ಣ ಕುಂಟಿನಿ ಇದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: 'ಕಥೆಗೆ ಯಾವುದೇ ಪರಿಧಿಯೂ ಇರುವುದಿಲ್ಲ. ಕಥೆಗಳು ಹುಟ್ಟುವ ಪರಿಯೇ ವಿಭಿನ್ನ' ಎಂದು ಲೇಖಕ ಗೋಪಾಲಕೃಷ್ಣ ಕುಂಟಿನಿ ಹೇಳಿದರು.

ನಗರದಲ್ಲಿ ಭಾನುವಾರ ಸಾವಣ್ಣ ಪ್ರಕಾಶನ ಹಾಗೂ ಕಥೆಕೂಟ ಆಯೋಜಿಸಿದ್ದ ಲೇಖಕ ಜೋಗಿ ಅವರ ಎರಡು ಕೃತಿಗಳಾದ 'ಚಿಯರ್ಸ್' ಹಾಗೂ 'ಅಶ್ವತ್ಥಾಮನ್', ಗೋಪಾಲಕೃಷ್ಣ ಕುಂಟಿನಿ ಮತ್ತು ಜೋಗಿ ಅವರ 'ಒಲವು ತುಂಬುವುದಿಲ್ಲ', ಜಗದೀಶಶರ್ಮಾ ಸಂಪ ಅವರ 'ದಶಕಂಠ ರಾವಣ' ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು.

'ಕಥೆಗಳು ಪ್ರತಿಯೊಬ್ಬರಲ್ಲೂ ಅಡಗಿರುತ್ತವೆ. ಅವುಗಳು ಸೂಕ್ತ ಕಾಲದಲ್ಲಿ ಹೊರಬರುತ್ತವೆ. ಶಾಲಾ ಶಿಕ್ಷಕರು, ಪಕ್ಕದ ಮನೆ ಗೆಳೆಯ– ಗೆಳತಿ, ವ್ಯಾಪಾರಸ್ಥರು... – ಹೀಗೆ ಯಾರಲ್ಲಿ ಬೇಕಾದರು ಕಥೆಗಳು ಹುಟ್ಟಬಹುದು' ಎಂದರು.

ಜೋಗಿ ಮಾತನಾಡಿ, 'ನಮ್ಮ ದಾರಿ ಬದಲಾವಣೆಯಾದಾಗ ಹೊಸ ಕಥೆಗಳು ಸೃಷ್ಟಿಯಾಗುತ್ತವೆ. ಇದರಿಂದ ಹೊಸ ವ್ಯಕ್ತಿಗಳ ಭೇಟಿಗೂ ಸಾಧ್ಯವಾಗಲಿದೆ. ಕಚೇರಿಗೆ ನಿತ್ಯ ಒಂದೇ ದಾರಿಯಲ್ಲಿ ತೆರಳಬಾರದು. ಸಾಧ್ಯವಾದಷ್ಟು ಮಟ್ಟಿಗೆ ದಾರಿ ಬದಲಾವಣೆ ಮಾಡಿಕೊಳ್ಳಬೇಕೆಂದು ಹಿರಿಯರು ಹೇಳುತ್ತಿದ್ದರು' ಎಂದರು.

ಇವಿಎಂ ಪತ್ತೆ: ಎ.ಸಿ ನೇತೃತ್ವದಲ್ಲಿ ತನಿಖೆ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ತಾಲ್ಲೂಕಿನ ಮೋಪರಹಳ್ಳಿಯಲ್ಲಿ ನಿರ್ಮಿತಿ ಕೇಂದ್ರದ ಸಹಾಯಕ ಎಂಜಿನಿಯರ್ ಶಿವಕುಮಾರ್ ಮನೆಯಲ್ಲಿ ಶನಿವಾರ ಪತ್ತೆಯಾಗಿರುವ ಏಳು ಇವಿಎಂ ಕಂಟ್ರೋಲ್ ಯುನಿಟ್ ಕುರಿತ ತನಿಖೆಗೆ ತಾಲ್ಲೂಕಿನ ಉಪ ವಿಭಾಗಾಧಿಕಾರಿ ಶ್ರೀನಿವಾಸ್ ಅವರನ್ನು ನೇಮಿಸಲಾಗಿದೆ.

ಈ ಕುರಿತು ಜಿಲ್ಲಾಧಿಕಾರಿ ಡಾ.ಎನ್. ಶಿವಶಂಕರ್ ಅವರು ಭಾನುವಾರ ಚುನಾವಣಾ ವಿಭಾಗದ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಈ ತೀರ್ಮಾನ ಪ್ರಕಟಿಸಿದ್ದಾರೆ.

ಶಿವಕುಮಾರ್ ಅವರ ಮನೆಯಿಂದ ವಶಕ್ಕೆ ಪಡೆದಿರುವ ಯಂತ್ರಗಳನ್ನು ತಾಲ್ಲೂಕು ಖಜಾನೆಯಲ್ಲಿ ಇಡಲಾಗಿದೆ. 2018ರ ರಾಜ್ಯ ವಿಧಾನ ಚುನಾವಣೆಯಲ್ಲಿ ತಾಂತ್ರಿಕ ದೋಷದ ಕಾರಣ ಬಳಸಲಾಗದ ಇವಿಎಂ ಕಂಟ್ರೋಲ್ ಯುನಿಟ್‌ಗಳನ್ನು ಇಷ್ಟು ದಿನ ಏಕೆ ಮನೆಯಲ್ಲಿ ಇಟ್ಟುಕೊಳ್ಳಲಾಗಿತ್ತು ಎಂಬ ಬಗ್ಗೆ ಉಪವಿಭಾಗಾಧಿಕಾರಿ ವಿವಿಧ ಮೂಲಗಳಿಂದ ಮಾಹಿತಿ ಸಂಗ್ರಹ ಮಾಡಲು ಪ್ರಾರಂಭಿಸಿದ್ದಾರೆ ಎಂದು ತಿಳಿದುಬಂದಿದೆ.

ಸುಧಾ ಓದಿರಿ

ನಗರದಲ್ಲಿ ಇಂದು

ಲೋಡಿಂಗ್ ಕಾರ್ಮಿಕರ ದಶಮಾನೋತ್ಸವ ಹಾಗೂ ಶ್ರಮಿಕರ ಹಕ್ಕೊತ್ತಾಯ ಸಮಾವೇಶ: ಅತಿಥಿಗಳು: ಸಿದ್ದರಾಮಯ್ಯ, ಕೆ.ಎಚ್. ಮುನಿಯಪ್ಪ, ಸಂತೋಷ್ ಲಾಡ್, ಅಧ್ಯಕ್ಷತೆ: ವರದರಾಜೇಂದ್ರ, ಆಯೋಜನೆ: ಕರ್ನಾಟಕ ಶ್ರಮಿಕ ಶಕ್ತಿ, ಗುತ್ತಿಗೆ ಅಸಂಘಟಿತ ಮತ್ತು ಅಭದ್ರ ಕಾರ್ಮಿಕರ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್ಸ್, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 11

ಬೆಂಗಳೂರು ನಗರ ವಿಶ್ವವಿದ್ಯಾಲಯದ 2ನೇ ಘಟಿಕೋತ್ಸವ: ಅಧ್ಯಕ್ಷತೆ: ಥಾವರಚಂದ್ ಗೆಹಲೋತ್, ಅತಿಥಿ: ಡಾ.ಸಿ.ಎನ್. ಮಂಜುನಾಥ್, ಉಪಸ್ಥಿತಿ: ಡಾ.ಎಂ.ಸಿ. ಸುಧಾಕರ್, ಲಿಂಗರಾಜ ಗಾಂಧಿ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಳಿಗ್ಗೆ 11ರಿಂದ

'ಸಂಕಥನ' ರಾಷ್ಟ್ರೀಯ ಮಟ್ಟದ ಬಹುಶಿಸ್ತಿಯ ಸಂಶೋಧನಾ ಆಧಾರಿತ ಉಪನ್ಯಾಸ ಸರಣಿ: ಉದ್ಘಾಟನೆ: ಎಸ್.ಜಿ. ಸಿದ್ಧರಾಮಯ್ಯ, ಅತಿಥಿ: ಎಂ.ಎಸ್. ಆಶಾದೇವಿ, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಳಿಗ್ಗೆ 11

ಭರತನಾಟ್ಯ ಪ್ರದರ್ಶನ: ಅತಿಥಿಗಳು: ಸಂಧ್ಯಾ ಶರ್ಮಾ, ಪೂರ್ಣಿಮಾ ರಜನಿ, ರೇವತಿ ಕಾಮತ್, ಆಯೋಜನೆ: ರಚನಾ ಡಾನ್ಸ್ ಅಕಾಡೆಮಿ, ಸ್ಥಳ: ಸೇವಾ ಸದನ ಸಭಾಂಗಣ, ಮಲ್ಲೇಶ್ವರ, ಸಂಜೆ 5

ಪ್ರವಚನ ವಾಹಿನಿ: 'ಭಗವಂತ ಮತ್ತು ಭಕ್ತನ ಅವಿನಾಭಾವ ಸಂಬಂಧ' ಕುರಿತ ಉಪನ್ಯಾಸ: ವೀಣಾ ನಾಗರಾಜ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ನಿಧನ ವಾರ್ತೆ

ಚಂದ್ರಶೇಖರ್ ಹಿರೇಮಠ

ಬೆಂಗಳೂರು: 'ವಿಜಯ ಕರ್ನಾಟಕ' ದಿನಪತ್ರಿಕೆಯ ಮಾಹಿತಿ ತಂತ್ರಜ್ಞಾನ (ಐಟಿ) ವಿಭಾಗದ ವ್ಯವಸ್ಥಾಪಕ ಚಂದ್ರಶೇಖರ್ ಹಿರೇಮಠ (46) ಅವರು ಭಾನುವಾರ ಬೆಳಿಗ್ಗೆ ನಿಧನರಾದರು.

ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ದೊಡ್ಡ ಅಬ್ಬಿಗೆರೆ ಗ್ರಾಮದ ಚಂದ್ರಶೇಖರ್ ಅವರಿಗೆ ಪತ್ನಿ, ಮೂರು ವರ್ಷದ ಪುತ್ರ, ಪುತ್ರಿ, (ಅವಳಿ ಮಕ್ಕಳು) ಇದ್ದಾರೆ.

ಸೋಮವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ದೊಡ್ಡ ಅಬ್ಬಿಗೆರೆಯಲ್ಲಿನ ಅವರ ತೋಟದಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ. ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ **9606038256** ಮಾಡಬಹುದು.



ಎಚ್‌ಬಿ.ಆರ್ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿ ಹಾಕಿರುವ ಕಟ್ಟಡ ತ್ಯಾಜ್ಯ.

ಕಟ್ಟಡ ತ್ಯಾಜ್ಯ ತೆರವಿಗೆ ಆಗ್ರಹ

ಎಚ್.ಬಿ.ಆರ್ ಲೇಔಟ್‌ನ ಕಾಸ್ಮೊಪಾಲಿಟನ್ ಕ್ಲಬ್ ಎದುರಿನ 80 ಅಡಿ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಕಟ್ಟಡ ತ್ಯಾಜ್ಯ ಹಾಕಲಾಗಿದೆ. ಟೆಂಡರ್ ಶ್ಯೂರ್ ಯೋಜನೆ ಅಡಿ ನಿರ್ಮಿಸಲಾದ ರಸ್ತೆ ಮತ್ತು ಪಾದಚಾರಿ ಮಾರ್ಗದಲ್ಲಿ ಕಸ ಹಾಕಲಾಗುತ್ತಿದೆ. ಹಿರಿಯ ನಾಗರಿಕರು, ಮಹಿಳೆಯರು ಮತ್ತು ಮಕ್ಕಳು ಮುಖ್ಯರಸ್ತೆಯ ವಾಹನ ಸಂಚಾರದ ನಡುವೆ ಹಾದು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಸ್ಥಳೀಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಬಿಬಿಎಂಪಿಯು ಕೂಡಲೇ ತ್ಯಾಜ್ಯ ತೆರವುಗೊಳಿಸಿ ಸಮಸ್ಯೆ ಪರಿಹರಿಸಬೇಕು.

ಆಕಾಶ್, ಸ್ಥಳೀಯ ನಿವಾಸಿ

'ರಸ್ತೆ ದುರಸ್ತಿಗೊಳಿಸಿ, ಅವಘಡ ತಪ್ಪಿಸಿ'



ಕಬ್ಬನ್‌ಪೇಟೆ ಮುಖ್ಯರಸ್ತೆಯು ಗುಂಡಿಗಳಿಂದ ಕೂಡಿದ್ದು, ವಾಹನಗಳ ಸಂಚಾರಕ್ಕೆ ಸಂಚಕಾರ ಬಂದಿದೆ. ನಿತ್ಯ ಅಪಘಾತಗಳು ಸಂಭವಿಸುತ್ತಿವೆ. ಜೊತೆಗೆ ವಾಹನ ದಟ್ಟಣೆಯು ಸಂಚಾರ ಪೊಲೀಸರಿಗೆ ಸವಾಲಾಗಿ ಪರಿಣಮಿಸಿದೆ. ಈ ರಸ್ತೆಯು ಡಾಂಬರು ಕಂಡು ವರ್ಷಗಳೇ ಉರುಳಿವೆ. ಚುನಾವಣೆ ವೇಳೆ ರಸ್ತೆ ದುರಸ್ತಿ ಭರವಸೆ ನೀಡಿದ್ದ ಜನಪ್ರತಿನಿಧಿಗಳು ಇಂದು ನಾಪತ್ತೆಯಾಗಿದ್ದಾರೆ. ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ.

ಶಿವಪ್ರಸಾದ್, ಸ್ಥಳೀಯ ನಿವಾಸಿ

ಕಬ್ಬನ್‌ಪೇಟೆ ಮುಖ್ಯರಸ್ತೆಯಲ್ಲಿ ಗುಂಡಿ ಬಿದ್ದು ಮಳೆ ನೀರು ನಿಂತಿರುವುದು.

'ಪಾದಚಾರಿ ಮಾರ್ಗ ದುರಸ್ತಿಗೊಳಿಸಿ'

ರಾಜರಾಜೇಶ್ವರಿನಗರದ ಕಾನ್ಕಾರ್ಡ್ ಬಡಾವಣೆಯ 9ನೇ ಕ್ರಾಸ್‌ನ ಪಾದಚಾರಿ ಮಾರ್ಗದ ಚರಂಡಿಗೆ ಅಳವಡಿಸಿದ್ದ ಚಪ್ಪಡಿ ಕಲ್ಲುಗಳ ಕಿತ್ತು ಹೋಗಿವೆ. ಇದರಿಂದ, ಪಾದಚಾರಿಗಳ ಓಡಾಟಕ್ಕೆ ಸಮಸ್ಯೆಯಾಗಿದೆ. ರಾತ್ರಿ ವೇಳೆ ಈ ರಸ್ತೆಯಲ್ಲಿ ಸಂಚರಿಸಿದರೆ ಆಯತಪ್ಪಿ ಮೋರಿ ಪಾಲಾಗುವ ಅಪಾಯವಿದೆ. ಸಂಬಂಧಪಟ್ಟ ಅಧಿಕಾರಿಗಳು ಪಾದಚಾರಿ ಮಾರ್ಗಕ್ಕೆ ಮತ್ತೇ ಚಪ್ಪಡಿ ಕಲ್ಲುಗಳನ್ನು ಅಳವಡಿಸುವ ಮೂಲಕ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ಶಾಂತಾರಾಮ ಜಿ.ಕೆ., ಕಾನ್ಕಾರ್ಡ್ ಬಡಾವಣೆಯ ನಿವಾಸಿ



ರಾಜರಾಜೇಶ್ವರಿನಗರದ ಕಾನ್ಕಾರ್ಡ್ ಬಡಾವಣೆಯ ಪಾದಚಾರಿ ಮಾರ್ಗದ ದುಃಸ್ಥಿತಿ.

ಕೆಂಪಾಪುರ: ಮ್ಯಾನ್‌ಹೋಲ್ ಮುಚ್ಚಲು ಒತ್ತಾಯ

ವಿಜಯನಗರ ವಿಧಾನಸಭಾ ಕ್ಷೇತ್ರದ ಕೆಂಪಾಪುರ ಅಗ್ರಹಾರ ವಾರ್ಡ್ ನಂಬರ್ 122ರ 8ನೇ ಅಡ್ಡರಸ್ತೆಯ ಗಂಗಾ ಲೂಮ್ಸ್ ಸಮೀಪದ ರಸ್ತೆಯಲ್ಲಿ ಮ್ಯಾನ್‌ಹೋಲ್ ಬಾಯ್ತೆರೆದಿದೆ. ಬಿಡಬ್ಲ್ಯೂಎಸ್ಎಸ್‌ಬಿ ಸಿಬ್ಬಂದಿ ಇದನ್ನು ಮುಚ್ಚುವ ಕೆಲಸ ಮಾಡಿಲ್ಲ. ಇದರಿಂದ ಅಪಘಾತಗಳು ಸಂಭವಿಸುತ್ತಿದ್ದು, ವಾಹನ ಸವಾರರ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದರೂ ಸಮಸ್ಯೆಗೆ ಮುಕ್ತಿ ಸಿಗುತ್ತಿಲ್ಲ. ಅನಾಹುತ ಸಂಭವಿಸುವ ಮುನ್ನ ಈ ಮ್ಯಾನ್‌ಹೋಲ್ ಮುಚ್ಚಬೇಕು.

ಉಮಾಶಂಕರ ಬಾಬು ಎಂ., ಕೆಂಪಾಪುರ ಅಗ್ರಹಾರದ ನಿವಾಸಿ



ಕೆಂಪಾಪುರ ಮುಖ್ಯರಸ್ತೆಯಲ್ಲಿ ಮ್ಯಾನ್‌ಹೋಲ್ ತೆರೆದುಕೊಂಡಿರುವುದು.

ಶಿವಾಜಿನಗರದ ಘೋಷಾ ಆಸ್ಪತ್ರೆಯಲ್ಲಿ ಎದೆಹಾಲು ಬ್ಯಾಂಕ್ ನಿರ್ಮಾಣ

ಎದೆಹಾಲು ವಂಚಿತ ಮಕ್ಕಳಿಗೆ 'ಸಂಜೀವಿನಿ'

• ವರುಣ ಹೆಗಡೆ



ಶಿವಾಜಿನಗರದಲ್ಲಿರುವ ಸರ್ಕಾರಿ ಎಚ್‌ಎಸ್‌ಐ.ಎಸ್‌ ಘೋಷಾ ಆಸ್ಪತ್ರೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಅಗತ್ಯ ಪ್ರಮಾಣದಲ್ಲಿ ಎದೆಹಾಲು ಸಿಗದ ಹಾಗೂ ಎದೆಹಾಲು ವಂಚಿತ ಮಕ್ಕಳಿಗಾಗಿ ಶಿವಾಜಿನಗರದ ಸರ್ಕಾರಿ ಎಚ್‌.ಎಸ್‌.ಐ.ಎಸ್‌. ಘೋಷಾ ಆಸ್ಪತ್ರೆಯಲ್ಲಿ 'ಸಂಜೀವಿನಿ' ಎದೆಹಾಲು ಬ್ಯಾಂಕ್ ನಿರ್ಮಿಸಲಾಗಿದೆ. ಸರ್ಕಾರಿ ವ್ಯವಸ್ಥೆಯಡಿ ಸ್ಥಾಪಿತವಾದ ರಾಜ್ಯದ ಎರಡನೇ ಎದೆಹಾಲು ಬ್ಯಾಂಕ್ ಇದಾಗಿದೆ.

ಈ ಆಸ್ಪತ್ರೆಯು ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ (ಎಸ್‌ಎಬಿವಿಎಂ-ಸಿಆರ್‌ಐ) ಕಾರ್ಯನಿರ್ವಹಿಸುತ್ತಿದೆ. ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ವಾಣಿವಿಲಾಸ ಆಸ್ಪತ್ರೆಯಲ್ಲಿ ಕಳೆದ ವರ್ಷ 'ಅಮೃತಧಾರೆ' ಎದೆಹಾಲು ಬ್ಯಾಂಕ್‌ಗೆ ಚಾಲನೆ ನೀಡಲಾಗಿತ್ತು. ಇದು ಸರ್ಕಾರಿ ವ್ಯವಸ್ಥೆಯಡಿ ನಿರ್ಮಾಣವಾದ ರಾಜ್ಯದ ಪ್ರಥಮ ಎದೆಹಾಲು ಬ್ಯಾಂಕ್ ಎಂಬ ಹಿರಿಮೆಗೆ ಭಾಜನವಾಗಿತ್ತು. ಈ ಬ್ಯಾಂಕಿಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ.

ರೋಟರಿ ಡಿಸ್ಟ್ರಿಕ್ಟ್ 3190 ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿ ಘೋಷಾ ಆಸ್ಪತ್ರೆಯಲ್ಲಿ ಎದೆಹಾಲು ಬ್ಯಾಂಕ್ ನಿರ್ಮಿಸಿದೆ. ಈ ಬ್ಯಾಂಕ್ ನಿರ್ಮಾಣಕ್ಕೆ ₹ 24 ಲಕ್ಷ ವೆಚ್ಚ ಮಾಡಲಾಗಿದೆ. ಇದರ ನಿರ್ವಹಣೆಗಾಗಿ ಆಸ್ಪತ್ರೆ ಸಿಬ್ಬಂದಿಗೆ ವಾಣಿವಿಲಾಸ ಆಸ್ಪತ್ರೆಯಲ್ಲಿ ತರಬೇತಿ ನೀಡಲಾಗಿದೆ.

'6 ತಿಂಗಳು ಶೇಖರಣೆ ಸಾಧ್ಯ'

'ಬ್ಯಾಂಕ್‌ನಲ್ಲಿ ಸಂಗ್ರಹಿಸಿದ ಹಾಲನ್ನು ಪ್ಯಾಶ್ಚರೀಕರಿಸಿದ ಬಳಿಕ ಪ್ಯಾಕ್ ಮಾಡಿ, 120 ಡಿಗ್ರಿ ಸೆಲ್ಸಿಯಸ್‌ನಲ್ಲಿ ಸಂರಕ್ಷಿಸಿ ಇಡಲಾಗುತ್ತದೆ. ಮಗುವಿಗೆ ಕುಡಿಸುವಾಗ ಅದನ್ನು ಸಾಮಾನ್ಯ ಉಷ್ಣಾಂಶಕ್ಕೆ ತರಲಾಗುತ್ತದೆ. ಇದನ್ನು ಆರು ತಿಂಗಳವರೆಗೂ ಶೇಖರಿಸಿಡಲು ಸಾಧ್ಯ. ಖಾಸಗಿ ಎದೆಹಾಲು ಬ್ಯಾಂಕ್‌ಗಳಲ್ಲಿ 150 ಮಿ.ಲೀ. ಹಾಲಿಗೆ ₹6,500ರಿಂದ ₹8,000 ಪಾವತಿಸಬೇಕಾಗುತ್ತದೆ. ಇಲ್ಲಿ ಎದೆಹಾಲು ಅಗತ್ಯವಿರುವ ಮಕ್ಕಳಿಗೆ ಉಚಿತವಾಗಿ ಒದಗಿಸಲಾಗುತ್ತಿದೆ' ಎಂದು ಘೋಷಾ ಆಸ್ಪತ್ರೆಯ ವೈದ್ಯರು ತಿಳಿಸಿದರು.

ಇದೇ ಸೋಮವಾರದಿಂದ ಸೇವೆ ಪ್ರಾರಂಭಿಸಲು ಆಸ್ಪತ್ರೆ ಸಿದ್ಧತೆ ಮಾಡಿಕೊಂಡಿದೆ.

ದಾನಿಗಳಿಂದ ಸಂಗ್ರಹ: ಘೋಷಾ ಆಸ್ಪತ್ರೆಯು 120 ಹಾಸಿಗೆ ಹೊಂದಿದ್ದು, ಇದು ತಾಯಿ-ಮಕ್ಕಳ ಆಸ್ಪತ್ರೆಯಾಗಿದೆ. ಆಸ್ಪತ್ರೆಯಲ್ಲಿ ಹೆರಿಗೆ ಆದವರು ಹಾಗೂ ಸ್ವ ಇಚ್ಛೆಯಿಂದ ಹೊರಗಿನಿಂದ ಬರುವ ತಾಯಂದಿರಿಂದ ಹೆಚ್ಚುವರಿ ಎದೆ ಹಾಲನ್ನು ಬ್ಯಾಂಕ್‌ನಲ್ಲಿ ಸಂಗ್ರಹಿಸಲಾಗುತ್ತದೆ. ವೈದ್ಯರ ಶಿಫಾರಸು ಹೊಂದಿರುವ ಶಿಶುಗಳಿಗೆ ಮಾತ್ರ ಈ ಎದೆಹಾಲನ್ನು ಅಗತ್ಯ ಪ್ರಮಾಣದಲ್ಲಿ ಒದಗಿಸಲಾಗುತ್ತದೆ.

> **ಎದೆಹಾಲು ಬ್ಯಾಂಕ್ ಕಾರ್ಯನಿರ್ವಹಣೆಗೆ ಪೂರ್ಣ ಪ್ರಮಾಣದಲ್ಲಿ ಸಜ್ಜಾಗಿದೆ. ಎದೆಹಾಲು ಸಂಗ್ರಹ ಹಾಗೂ ವಿತರಣೆ ಬಗ್ಗೆ ಸಿಬ್ಬಂದಿ ತರಬೇತಿ ಪಡೆದಿದ್ದಾರೆ.**
> **ಡಾ. ಮನೋಜ್ ಕುಮಾರ್ ಎಚ್‌.ವಿ.,** ಎಸ್‌ಎಬಿವಿಎಂಸಿಆರ್‌ಐ ಡೀನ್

'ನವಜಾತ ತೀವ್ರ ನಿಗಾ ಘಟಕದಲ್ಲಿ (ಎನ್‌ಐಸಿಯು) ಇರುವ ಎದೆಹಾಲಿನಿಂದ ವಂಚಿತರಾಗಿರುವ ಶಿಶುಗಳಿಗೆ ಈ ಬ್ಯಾಂಕ್‌ನಿಂದ ಎದೆಹಾಲು ಪೂರೈಸಲಾಗುತ್ತದೆ. ಎದೆಹಾಲನ್ನು ಪಡೆಯುವಾಗ ಅಗತ್ಯ ಪರೀಕ್ಷೆ ಮಾಡಲಾಗುತ್ತದೆ. ಆರೋಗ್ಯವಂತ ತಾಯಿಯಿಂದ ಮಾತ್ರ ಎದೆಹಾಲನ್ನು ಪಡೆಯಲಾಗುತ್ತದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಘೋಷಾ ಆಸ್ಪತ್ರೆಯ ವೈದ್ಯರೊಬ್ಬರು ತಿಳಿಸಿದರು.

ಯಾರಿಗೆಲ್ಲ ಹಾಲು ಪೂರೈಕೆ?

ಅವಧಿ ಪೂರ್ವ ಜನಿಸಿದ ಶಿಶುಗಳು, ಅಸ್ವಸ್ಥ ಶಿಶುಗಳು, ಅನಾಥ ಶಿಶುಗಳು, ಮೃತಪಟ್ಟ ತಾಯಂದಿರ ಶಿಶುಗಳು, ರೋಗಗ್ರಸ್ತ ಬಾಣಂತಿಯರ ಶಿಶುಗಳು ಹಾಗೂ ಎದೆಹಾಲು ಉತ್ಪಾದನೆ ಆಗದಿರುವ ತಾಯಂದಿರ ಶಿಶುಗಳಿಗೆ ಈ ಕೇಂದ್ರದಿಂದ ಎದೆಹಾಲನ್ನು ನೀಡಲಾಗುತ್ತದೆ.

ರಾಜ್ಯಮಟ್ಟದ ವಿಚಾರಗೋಷ್ಠಿಯಲ್ಲಿ ಇಂದೂಧರ ಹೊನ್ನಾಪುರ ಅಭಿಮತ

'ಶಾಶ್ವತ ಅಲೆಮಾರಿ ಆಯೋಗ ಸ್ಥಾಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದುಳಿದ ವರ್ಗ, ಪರಿಶಿಷ್ಟ ಪಂಗಡ ಮತ್ತು ಜಾತಿಗಳಲ್ಲಿ ಹಂಚಿ ಹೋಗಿರುವ ಅಲೆಮಾರಿ ಸಮುದಾಯಗಳು ಅಸ್ಪೃಶ್ಯರಷ್ಟೇ ಅಲ್ಲ, ಅಗೋಚರರೂ ಆಗಿದ್ದಾರೆ. ಎಲ್ಲರ ತಿರಸ್ಕಾರಕ್ಕೆ ಒಳಗಾಗಿದ್ದಾರೆ. ಅಲೆಮಾರಿಗಳ ಅಭಿವೃದ್ಧಿಗಾಗಿ ಶಾಶ್ವತ ಅಲೆಮಾರಿ ಆಯೋಗ ಸ್ಥಾಪಿಸಬೇಕು' ಎಂದು ಪತ್ರಕರ್ತ ಇಂದೂಧರ ಹೊನ್ನಾಪುರ ಆಗ್ರಹಿಸಿದರು.

'ದಮನಿತ ಅಲೆಮಾರಿಗಳ ಸವಾಲುಗಳು ಮತ್ತು ಪರಿಹಾರ' ಕುರಿತು ನಡೆದ ರಾಜ್ಯಮಟ್ಟದ ಚಿಂತನಾ ಮಂಥನ ವಿಚಾರಗೋಷ್ಠಿಯಲ್ಲಿ ಅವರು ದಿಕ್ಸೂಚಿ ಭಾಷಣ ಮಾಡಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡ ಎಂದು ಎರಡು ವರ್ಗಗಳಿವೆ. ಅಲೆಮಾರಿಗಳ ಅಭಿವೃದ್ಧಿಗಾಗಿ ಮೂರನೇ ವರ್ಗ ಮಾಡಬೇಕು. ರಾಜಕೀಯ ಮೀಸಲಾತಿ ಸಹಿತ ಎಲ್ಲ ಸೌಲಭ್ಯ ಒದಗಿಸಬೇಕು ಎಂದು ಹೇಳಿದರು.

ದಲಿತ ಚಳವಳಿಗಳು ಅಸ್ಪೃಶ್ಯ ಸಮುದಾಯಗಳಲ್ಲಿ ಅರಿವು ಮೂಡಿಸಿವೆ. ಆದರೆ, ತಬ್ಬಲಿ ಸಮುದಾಯಗಳಾದ ಅಲೆಮಾರಿಗಳಲ್ಲಿ ಇನ್ನೂ ಅರಿವು ಮೂಡಿಸಲು ಸಾಧ್ಯವಾಗಿಲ್ಲ. ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಯಲ್ಲಿ ಯಾವ ಅಲೆಮಾರಿ ಸಮುದಾಯಗಳಿವೆ ಎಂಬುದು ಅಲೆಮಾರಿಗಳಿಗೆ ಗೊತ್ತಿಲ್ಲ. ಭಿಕ್ಷೆ ಬೇಡಿದ್ದು ಸಾಕು. ಇನ್ನಾದರೂ ಹಕ್ಕುಗಳನ್ನು ಕೇಳಿ, ಸೌಲಭ್ಯ ಪಡೆದು ಮುಂದಕ್ಕೆ ಬರಬೇಕು ಎಂದು ತಿಳಿಸಿದರು.

ಸ್ವಾತಂತ್ರ್ಯ ಬಂದ ಬಳಿಕ 1950ರಲ್ಲಿ ಪರಿಶಿಷ್ಟ ಜಾತಿಯ ಪಟ್ಟಿ ಮಾಡಿದಾಗ ಆದಿದ್ರಾವಿಡ, ಆದಿಕರ್ನಾಟಕ, ಕೊರಚ, ಕೊರಮ, ಲಂಬಾಣಿ, ಭೋವಿ ಇಷ್ಟೇ ಜಾತಿಗಳಿದ್ದವು. ಆದಿದ್ರಾವಿಡ, ಆದಿಕರ್ನಾಟಕ ಎಂಬುದೆಲ್ಲ ಒಂದೊಂದು ಜಾತಿ ಅಲ್ಲ. ಹಲವು ಜಾತಿಗಳು ಸೇರಿವೆ. ತಮ್ಮ ಜಾತಿಯನ್ನು ಹೇಳಿಕೊಳ್ಳಲಾರದೇ ಹೀಗೆ ಆಗಿವೆ ಎಂದು ಗೊತ್ತಾದ ಮೇಲೆ ಮತ್ತೆ 1956ರಲ್ಲಿ ಪಟ್ಟಿ ಮಾಡಲಾಯಿತು. ಆಗ ಎಸ್‌ಸಿ ಜಾತಿಗಳ ಸಂಖ್ಯೆ 76ಕ್ಕೆ ಏರಿತು. ಈಗ 101 ಇವೆ. ಒಬಿಸಿ, ಎಸ್‌ಸಿ, ಎಸ್‌ಟಿ ಹೀಗೆ ಯಾವುದೇ ವರ್ಗದಲ್ಲಿ ಜಾತಿಗಳು ಎಷ್ಟೇ ಇದ್ದರೂ ಆಯಾ ಗುಂಪಿನಲ್ಲಿ ಪ್ರಬಲವಾಗಿರುವ ಜಾತಿಗಳೇ ಸೌಲಭ್ಯಗಳನ್ನು ಪಡೆಯುತ್ತಿವೆ. ಎಸ್‌ಸಿಯಲ್ಲಿರುವ 101 ಸಮುದಾಯಗಳಲ್ಲಿ ಐದಾರು ಜಾತಿಗಳನ್ನು ಬಿಟ್ಟರೆ ಉಳಿದ ಸಮುದಾಯಗಳಿಗೆ ಸೌಲಭ್ಯ ತಲುಪುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಅಲೆಮಾರಿ ಸಮುದಾಯಗಳು ಸಣ್ಣತನ, ಅಸೂಯೆಗಳನ್ನು ಬಿಟ್ಟು ಪರಸ್ಪರ ಹೊಂದಾಣಿಕೆ, ಗೌರವ ಮತ್ತು ವಿಶ್ವಾಸ ಬೆಳೆಸಿಕೊಂಡು ಒಗ್ಗಟ್ಟಾಗಿ ಧ್ವನಿ ಎತ್ತಿದರಷ್ಟೇ ಸೌಲಭ್ಯ ಸಿಗಲು ಸಾಧ್ಯ ಎಂದು ಹೇಳಿದರು.

ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಅಧ್ಯಕ್ಷ ರವಿ ಮಾಕಳಿ ಅಧ್ಯಕ್ಷತೆ ವಹಿಸಿದ್ದರು. ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಅನಂತನಾಯ್ಕ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜು ತಂಗಡಗಿ, ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಗೌರವಾಧ್ಯಕ್ಷ ಅರವಿಂದ ಲಿಂಬಾವಳಿ, ಅಲೆಮಾರಿ ವಿಮುಕ್ತ ಬುಡಕಟ್ಟು ಮಹಾಸಭಾ ಅಧ್ಯಕ್ಷ ವೆಂಕಟರಮಣಯ್ಯ, ಆದರ್ಶ್ ಯಲ್ಲಪ್ಪ, ರಾಜಾನಾಯ್ಕ, ಕಿರಣ್ ಕುಮಾರ್ ಸಹಿತ ವಿವಿಧ ಅಲೆಮಾರಿ ಸಮುದಾಯಗಳ ಮುಖಂಡರು ಮಾತನಾಡಿದರು.



'ದಮನಿತ ಅಲೆಮಾರಿಗಳ ಸವಾಲುಗಳು ಮತ್ತು ಪರಿಹಾರ' ವಿಚಾರಗೋಷ್ಠಿಯಲ್ಲಿ ಸಂವಿಧಾನದ ಪೀಠಿಕೆಯನ್ನು ಬೋಧಿಸಲಾಯಿತು. ಆಶೋಕ್ ಲಿಂಬಾವಳಿ, ಲೋಹಿತಾಶ್ವ, ಅನಂತ ನಾಯ್ಕ್, ಇಂದೂಧರ ಹೊನ್ನಾಪುರ, ರವಿ ಮಾಕಳಿ, ಆದರ್ಶ್ ಯಲ್ಲಪ್ಪ, ಮಂಜುನಾಥ್ ದಾಯತ್ಕರ್, ರಾಜಾ ನಾಯ್ಕ್, ಶಿವಕುಮಾರ್ ಇದ್ದರು —ಪ್ರಜಾವಾಣಿ ಚಿತ್ರ



ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರ ಶಿವದಾಸ್ ಘೋಷ್ ಅವರ ಜನ್ಮ ಶತಮಾನೋತ್ಸವದ ಸಮಾರೋಪದಲ್ಲಿ ಎಸ್‌ಯುಸಿಐ ಕೇಂದ್ರ ಪಾಲಿಟ್ ಬ್ಯೂರೋ ಸದಸ್ಯ ಕೆ. ರಾಧಾಕೃಷ್ಣ ಮಾತನಾಡಿದರು

ಶಿವದಾಸ್ ಜನ್ಮ ಶತಮಾನೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈ ನೆಲದ ನೈಜ ಕಮ್ಯುನಿಸ್ಟ್ ಪಕ್ಷ, ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ (ಎಸ್‌ಯುಸಿಐ) ಸ್ಥಾಪಿಸಿದವರು ಶಿವದಾಸ್ ಘೋಷ್' ಎಂದು ಎಸ್‌ಯುಸಿಐ ಕೇಂದ್ರ ಪಾಲಿಟ್ ಬ್ಯೂರೋ ಸದಸ್ಯ ಕೆ. ರಾಧಾಕೃಷ್ಣ ತಿಳಿಸಿದರು.

ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರ, ಮಾರ್ಕ್ಸ್‌ವಾದಿ ಚಿಂತಕ ಶಿವದಾಸ್ ಘೋಷ್ ಅವರ ಜನ್ಮ ಶತಮಾನೋತ್ಸವದ ಸಮಾರೋಪದ ಅಂಗವಾಗಿ ನಡೆದ ದಕ್ಷಿಣ ವಲಯದ ರಾಜ್ಯ ಮಟ್ಟದ ಸಭೆಯಲ್ಲಿ ಮಾತನಾಡಿದರು.

ಎರಡನೇ ಮಹಾಯುದ್ಧದಲ್ಲಿ ಫ್ಯಾಸಿಸಂ ಸೋಲು ಕಂಡಿತಾದರೂ ಮುಂದೆ ಎಲ್ಲ ಬಂಡವಾಳಶಾಹಿ ದೇಶಗಳಲ್ಲೂ ಪರೋಕ್ಷವಾಗಿ ಜಾರಿಗೆ ಬಂದಿದೆ. ಎರಡು ಪಕ್ಷಗಳ ಜನತಂತ್ರದ ರೂಪದಲ್ಲಿ, ಆಡಳಿತಾತ್ಮಕ ರೂಪದಲ್ಲಿ ಫ್ಯಾಸಿಸಂ ಕಾಣಿಸಿಕೊಂಡಿದೆ. ಜರ್ಮನಿ, ಇಟಲಿಗಳ ರೀತಿ ಸರ್ವಾಧಿಕಾರದ ಫ್ಯಾಸಿಸಂ ಬಂಡವಾಳಶಾಹಿ ವರ್ಗಕ್ಕೆ ಅನುಕೂಲವಲ್ಲದ ಕಾರಣ ಇಂತಹ ಮಾರ್ಪಾಡನ್ನು ಮಾಡಿಕೊಂಡಿದೆ. ದಬ್ಬಾಳಿಕೆ ನೀತಿಯಿಂದಲೇ ಫ್ಯಾಸಿಸಂ ಗೆಲ್ಲುವುದಿಲ್ಲ. ಅದಕ್ಕಾಗಿ ಜನರನ್ನು ಮನವೊಲಿಸುವ ನೀತಿ ಅನುಸರಿಸಲಾಗುತ್ತಿದೆ ಎಂದು ಟೀಕಿಸಿದರು.

ರಾಜ್ಯ ಕಾರ್ಯದರ್ಶಿ ಕೆ. ಉಮಾ ಮಾತನಾಡಿ, 'ದೇಶ, ಸಮಾಜ ಎದುರಿಸುತ್ತಿರುವ ಬಿಕ್ಕಟ್ಟುಗಳಿಗೆ, ಸಾಮಾಜಿಕ ರೋಗಗಳಿಗೆ ಲಾಭಾಧಾರಿತ, ಶೋಷಕ ಬಂಡವಾಳಶಾಹಿ ವ್ಯವಸ್ಥೆಯೇ ಕಾರಣ. ಇದನ್ನು ಶಿವದಾಸ್ ಘೋಷ್ ಸರಿಯಾಗಿ ಗ್ರಹಿಸಿದ್ದರು. ಅದಕ್ಕೆ ತಕ್ಕಂತೆ ಹೋರಾಟದ ನೀತಿಗಳನ್ನು ರೂಪಿಸಿದ್ದರು' ಎಂದರು.

ಎಳೆಯ ಕಮ್ಯುನಿಸ್ಟರ ತಂಡ ಕಮ್ಸೊಮೋಲ್ ವತಿಯಿಂದ ಪಥ ಸಂಚಲನದ ಮೂಲಕ ಗೌರವಾರ್ಪಣೆ ಸಲ್ಲಿಸಲಾಯಿತು. ಭಾವಚಿತ್ರಕ್ಕೆ ಪುಷ್ಪ ಗುಚ್ಛ ಇರಿಸಿ ಗೌರವ ಸಲ್ಲಿಸಲಾಯಿತು.

ನೀನಾಸಂ ಅಶ್ವತ್ಥ್ ಬಂಧನ, ಬಿಡುಗಡೆ

ಹಾಸನ: ಚೆಕ್ ಬೌನ್ಸ್ ಪ್ರಕರಣದಲ್ಲಿ ಚಿತ್ರ ನಟ ನೀನಾಸಂ ಅಶ್ವತ್ಥ್ ಅವರನ್ನು ಪೊಲೀಸರು ಶನಿವಾರ ರಾತ್ರಿ ಬಂಧಿಸಿ ಜೆಎಂಎಫ್ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು.

ನ್ಯಾಯಾಧೀಶರ ಬಳಿ ತಪ್ಪೊಪ್ಪಿಕೊಂಡ ಅವರನ್ನು ಶೇ 25ರಷ್ಟು ಹಣ ಪಾವತಿಸಿದ ಬಳಿಕ ಬಿಡುಗಡೆ ಮಾಡಲಾಗಿದೆ. ಹಾಸನದ ರೋಹಿತ್ ಎಂಬುವರಿಂದ ಹಸುಗಳನ್ನು ಖರೀದಿಸಿದ್ದ ಅಶ್ವತ್ಥ್ ₹1.5 ಲಕ್ಷದ ಚೆಕ್ ನೀಡಿದ್ದರು.



ರಾಜರಾಜೇಶ್ವರಿನಗರ ಸಿ.ಮುನಿವೆಂಕಟಯ್ಯ ಆಟದ ಮೈದಾನದಲ್ಲಿ ಹಮ್ಮಿಕೊಂಡಿದ್ದ ಗಾಳಿಪಟ ಉತ್ಸವಕ್ಕೆ ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ರಾಜ್‌ಕುಮಾರ್ ಚಾಲನೆ ನೀಡಿದರು. ಮಾಧುರಿ ಆನಂದ್, ಬಿ.ಕೆ. ರಮೇಶ್, ಎಚ್‌.ಎಲ್‌. ಪ್ರಸಾದ್, ಎಚ್‌.ಎಸ್‌. ಸುಧೀಂದ್ರ ಕುಮಾರ್, ಬಿ.ವಿ. ಶ್ರೀಮತಿ ಇದ್ದಾರೆ

'ಸಂಸ್ಕೃತಿ, ಪರಂಪರೆ ಉಳಿಸಿ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಮಾನಸಿಕ, ಆರೋಗ್ಯ, ನೆಮ್ಮದಿ ಕಾಪಾಡಿಕೊಳ್ಳಬೇಕು. ಸಂಸ್ಕೃತಿ, ಪರಂಪರೆ ಉಳಿಸಬೇಕು. ಜೊತೆಗೆ ಪೂರ್ವಿಕರ ಕಾಲದ ಗ್ರಾಮೀಣ ಕ್ರೀಡೆ, ಸಾಂಸ್ಕೃತಿಕ ಉತ್ಸವ ಮುಂದುವರಿಸಬೇಕು' ಎಂದು ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ. ರಾಜ್‌ಕುಮಾರ್ ತಿಳಿಸಿದರು.

ರಾಜರಾಜೇಶ್ವರಿ ನಗರದ ಸಿ. ಮುನಿವೆಂಕಟಯ್ಯ ಆಟದ ಮೈದಾನದಲ್ಲಿ ಶ್ರೀಯೋಗ ಕೇಂದ್ರ, ರಾಜರಾಜೇಶ್ವರಿನಗರ ವಿಪ್ರ ವೇದಿಕೆ ವತಿಯಿಂದ ಹಮ್ಮಿಕೊಂಡಿದ್ದ ಗಾಳಿಪಟ ಉತ್ಸವ ಉದ್ಘಾಟಿಸಿ ಮಾತನಾಡಿದರು.

ಗಾಳಿಪಟ ಎಷ್ಟೇ ಮೇಲೆ ಹೋದರೂ ಕೆಳಕ್ಕೆ ಬರಲೇಬೇಕು. ಅಧಿಕಾರ, ಶ್ರೀಮಂತಿಕೆಯು ಹಾಗೆಯೇ ಎಂಬುದನ್ನು ಮರೆಯಬಾರದು ಎಂದರು.

ಪತ್ರಕರ್ತ ಎಚ್‌.ಎಸ್‌. ಸುಧೀಂದ್ರಕುಮಾರ್, 'ಹಳೆಯ ಪದ್ಧತಿಯ ಗಾಳಿಪಟ ಉತ್ಸವ, ಗ್ರಾಮೀಣ ಮಾದರಿಯ ಹಬ್ಬ, ಉತ್ಸವಗಳು ಮರೀಚಿಕೆಯಾಗುತ್ತಿವೆ' ಎಂದರು.

ರಾಜರಾಜೇಶ್ವರಿನಗರ ವಿಪ್ರವೇದಿಕೆ ಅಧ್ಯಕ್ಷ ಎಚ್‌.ಎಲ್‌. ಪ್ರಸಾದ್ ಮಾತನಾಡಿದರು.

ವಿಪ್ರವೇದಿಕೆಯ ಬಿ.ಆರ್‌.ರಮೇಶ್, ಚಲಪತಿ, ವಂಶಿಕಾ ಫೌಂಡೇಷನ್ ಅಧ್ಯಕ್ಷೆ ಮಾಧುರಿ ಆನಂದ್, ಸಾಮಾಜಿಕ ಕಾರ್ಯಕರ್ತ ಶಶಿಕಾಂತ ರಾವ್, ಸುರೇಶ್ ರಾವ್, ಶ್ರೀಯೋಗ ಕೇಂದ್ರದ ಕಾರ್ಯದರ್ಶಿ ಬಿ.ವಿ. ಶ್ರೀಮತಿ ಇದ್ದರು.

ಇಂದಿರಾ ಕ್ಯಾಂಟೀನ್‌ಗೆ ಡಿಕೆಶಿ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ನಗರದ ಇಂದಿರಾ ಕ್ಯಾಂಟೀನ್‌ಗಳಿಗೆ ಭಾನುವಾರ ಬೆಳಿಗ್ಗೆ ದಿಢೀರ್ ಭೇಟಿ ನೀಡಿ ಆಹಾರದ ಗುಣಮಟ್ಟ ಪರಿಶೀಲಿಸಿದರು.

ಪಾಲಿಕೆ ಅಧಿಕಾರಿಗಳು ಮತ್ತು ತಮ್ಮ ಸಿಬ್ಬಂದಿಗೆ ಮುನ್ಸೂಚನೆ ನೀಡದೆ ಬೆಳಿಗ್ಗೆ ಮನೆಯಿಂದ ಹೊರಟರು. ದಾಸರಹಳ್ಳಿ ವಲಯದ ಚೊಕ್ಕಸಂದ್ರದ (ವಾರ್ಡ್ ಸಂಖ್ಯೆ 39) ಇಂದಿರಾ ಕ್ಯಾಂಟೀನ್‌ಗೆ ಬೆಳಿಗ್ಗೆ 9.10ಕ್ಕೆ ಭೇಟಿ ನೀಡಿದರು.

ಶಿವಕುಮಾರ್ ಅವರ ಭೇಟಿ ವೇಳೆಗಾಗಲೇ ಕ್ಯಾಂಟೀನ್‌ನಲ್ಲಿ ಉಪಾಹಾರ ಖಾಲಿಯಾಗಿತ್ತು. ದಾಸರಹಳ್ಳಿಯ 15ನೇ ವಾರ್ಡ್ ಕ್ಯಾಂಟೀನ್‌ಗೆ ಭೇಟಿ ನೀಡಿ, ಉಪ್ಪಿಟ್ಟು, ಕೇಸರಿಬಾತ್ ಸೇವಿಸಿದರು.

ಸಹಾಯವಾಣಿ ದುರಸ್ತಿಗೆ ಸೂಚನೆ: ಇಂದಿರಾ ಕ್ಯಾಂಟೀನ್‌ನಲ್ಲಿನ ಕುಂದು ಕೊರತೆ ಕುರಿತು ಅಹವಾಲು ಸಲ್ಲಿಸಲು ಆರಂಭಿಸಿದ್ದ ಸಹಾಯವಾಣಿ ಸಂಖ್ಯೆಗೆ ಉಪ ಮುಖ್ಯಮಂತ್ರಿ ಕರೆ ಮಾಡಿದರು. ಆದರೆ, ಅದು ಕಾರ್ಯ ನಿರ್ವಹಿಸುತ್ತಿಲ್ಲ ಎಂಬುದು ಗೊತ್ತಾಯಿತು. ತಕ್ಷಣವೇ ದುರಸ್ತಿ ಮಾಡುವಂತೆ ಸೂಚಿಸಿದರು.

ಪರಿಶೀಲನೆ: ಸೀಗೆಹಳ್ಳಿ ಮತ್ತು ಕನ್ನಹಳ್ಳಿ ಘನ ತ್ಯಾಜ್ಯ ವಿಲೇವಾರಿ ಘಟಕಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಸೀಗೆಹಳ್ಳಿ ಘಟಕ ಇನ್ನೂ ಕಾರ್ಯಾರಂಭ ಮಾಡಿಲ್ಲ. ಕನ್ನಹಳ್ಳಿಯಲ್ಲಿ ಘಟಕದ ಒಳಬಂದಿರುವ ಲಾರಿಗಳು ಮತ್ತು ನೋಂದಣಿ ಪುಸ್ತಕದಲ್ಲಿ ನಮೂದಾಗಿರುವ ವಾಹನಗಳ ಸಂಖ್ಯೆಯಲ್ಲಿ ವ್ಯತ್ಯಾಸ ಇರುವುದು ಕಂಡು ಬಂತು.

'ಲೋಪ ಸರಿಪಡಿಸಲು ಕ್ರಮ'

'ಇಂದಿರಾ ಕ್ಯಾಂಟೀನ್‌ಗಳಲ್ಲಿ ಕೆಲವು ಸಮಸ್ಯೆಗಳಿವೆ. ನಿಗದಿಗಿಂತ ಹೆಚ್ಚು ದರ ಪಡೆಯದಂತೆ ಸೂಚಿಸಲಾಗಿದೆ. ಎಲ್ಲ ಲೋಪಗಳನ್ನೂ ಸರಿಪಡಿಸಲಾಗುವುದು' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಪಾಲಿಕೆಯಲ್ಲೇ ದೊಡ್ಡ ಪ್ರಮಾಣದ ತೆರಿಗೆ ಸೋರಿಕೆಯಾಗುತ್ತಿದೆ. ಅದನ್ನು ತಡೆದು ಅಭಿವೃದ್ಧಿಗೆ ಬಳಸಲಾಗುವುದು ಎಂದರು. 'ಈ ಸರ್ಕಾರಕ್ಕೆ ಪೆನ್ ಡ್ರೈವ್ ಬಗ್ಗೆ ಭಯ ಇದೆಯೆ' ಎಂಬ ಪ್ರಶ್ನೆಗೆ, 'ಅವರು ಏನು ಬೇಕಾದರೂ ಮಾಡಿಕೊಳ್ಳಲಿ. ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಆ ಬಗ್ಗೆ ಮುಂದೆ ಮಾತಾಡೋಣ' ಎಂದರು.



ಪ್ರಬುದ್ಧ ಮನಸ್ಸುಗಳ ಸ್ಪಂದನೆ ವೇದಿಕೆ ಆಯೋಜಿಸಿದ್ದ 'ಮಣಿಪುರ ಫೈಲ್ಸ್': ಒಂದು ಮುಕ್ತ ಸಂವಾದದಲ್ಲಿ ಸಾಮಾಜಿಕ ಹೋರಾಟಗಾರ್ತಿ ಸ್ವರ ಬನ್ಸಲ್ ಹಾಗೂ ವೇದಿಕೆಯ ವಿವೇಕಾನಂದ ಇದ್ದರು. – ಪ್ರಜಾವಾಣಿ ಚಿತ್ರ

'ಮಣಿಪುರದಲ್ಲಿ ಶಾಂತಿ ನೆಲೆಸುವುದು ಬೇಕಿಲ್ಲವೇ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಣಿಪುರದಲ್ಲಿ ನಡೆಯುತ್ತಿರುವ ಜನಾಂಗೀಯ ಹಿಂಸಾಚಾರ ಹಾಗೂ ಘರ್ಷಣೆಯನ್ನು ರಾಜ್ಯ ಸರ್ಕಾರವು ಆರಂಭಿಕ ಹಂತದಲ್ಲೇ ತಡೆಯುವುದಕ್ಕೆ ಸಾಧ್ಯವಿತ್ತು. ಆದರೆ, ಅಲ್ಲಿನ ಸರ್ಕಾರಕ್ಕೇ ಶಾಂತಿ ಹಾಗೂ ಸೌಹಾರ್ದ ನೆಲೆಸುವುದು ಬೇಕಿರಲಿಲ್ಲವೆಂದು ಕಾಣಿಸುತ್ತಿದೆ' ಎಂದು ಮಣಿಪುರದ ಸಾಮಾಜಿಕ ಹೋರಾಟಗಾರ್ತಿ ಸ್ವರ ಬನ್ಸಲ್ ಹೇಳಿದರು.

ನಗರದಲ್ಲಿ ಭಾನುವಾರ ಪ್ರಬುದ್ಧ ಮನಸ್ಸುಗಳ ವೇದಿಕೆ ಆಯೋಜಿಸಿದ್ದ 'ಮಣಿಪುರ ಫೈಲ್ಸ್': ಒಂದು ಮುಕ್ತ ಸಂವಾದದಲ್ಲಿ ಮಾತನಾಡಿದರು.


'ನಿರೀಕ್ಷೆಗೆ ತಕ್ಕಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶಾಂತಿ ಮರು ಸ್ಥಾಪಿಸುವ ಕೆಲಸ ಮಾಡುತ್ತಿಲ್ಲ. ಇದಕ್ಕೆ ಕಾರಣವೂ ಗೊತ್ತಾಗುತ್ತಿಲ್ಲ. ಆಡಳಿತ ವ್ಯವಸ್ಥೆಯು ಜನಾಂಗೀಯ ಘರ್ಷಣೆಯ ಪ್ರಯೋಗ ನಡೆಸುತ್ತಿದೆಯೇ' ಎಂದರು.

ಮಣಿಪುರದಲ್ಲಿ ಎಸ್‌ಟಿ ಮಾನ್ಯತೆಯಿದ್ದರೆ ಮಾತ್ರ ಅರಣ್ಯ ಭೂಮಿ ಹೊಂದಲು ಅವಕಾಶವಿದೆ. ಇದೇ ಕಾರಣಕ್ಕೆ ಮೈತೇಯಿ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂಬ ಕೂಗಿತ್ತು. ಇದಕ್ಕೆ ನಾಗ, ಕುಕಿ ಎಂಬ ಬುಡಕಟ್ಟು ಸಮುದಾಯದ ವಿರೋಧವಿತ್ತು ಎಂದರು.

ಪ್ರಬುದ್ಧ ವೇದಿಕೆ ಸದಸ್ಯ ಎಚ್‌.ಕೆ.ವಿವೇಕಾನಂದ ಮಾತನಾಡಿ, 'ರಷ್ಯಾ–ಇಸ್ರೇಲ್ ಯುದ್ಧದ ವೇಳೆ ಶಾಂತಿ ನೆಲೆಸುವಂತೆ ಮಾಡಿದ್ದೇ ನಾವೆಂದು ಹೇಳಿಕೊಳ್ಳುವ ಮೋದಿ, ದೇಶದಲ್ಲಿ ನಡೆಯುತ್ತಿರುವ ಘರ್ಷಣೆಯನ್ನು ಏಕೆ ತಡೆಯುತ್ತಿಲ್ಲ ಎಂದು ಪ್ರಶ್ನಿಸಿದರು.

> **ಮಣಿಪುರ ಮಕ್ಕಳು, ವೃದ್ಧರು, ಮಹಿಳೆಯರು ನಿದ್ರಿಸುತ್ತಿಲ್ಲ. ಎರಡು ತಿಂಗಳಿಂದ ಶಾಲೆಗಳೂ ಬಂದ್ ಆಗಿವೆ. ಪೋಷಕರಿಂದ ಮಕ್ಕಳು ಬೇರ್ಪಡುತ್ತಿದ್ದಾರೆ**
> **ಸ್ವರ ಬನ್ಸಲ್,** ಸಾಮಾಜಿಕ ಹೋರಾಟಗಾರ್ತಿ, ಮಣಿಪುರ

> **ಮಾಧ್ಯಮಗಳೂ ಬರೀ ರಾಜಕೀಯ ವಿಶ್ಲೇಷಣೆ ನಡೆಸುತ್ತಿವೆ. ಮಣಿಪುರದ ವಿಚಾರದಲ್ಲಿ ಸೂಕ್ಷ್ಮ ಸಂವೇದನೆ ಕಳೆದುಕೊಂಡಿವೆ.**
> **ವಿವೇಕಾನಂದ,** ಪ್ರಬುದ್ಧ ಮನಸ್ಸುಗಳ ಸ್ಪಂದನ ವೇದಿಕೆ



ಟೋಫೆಲ್ ಪರೀಕ್ಷೆ ಏನು-ಹೇಗೆ?

ಇಂಗ್ಲಿಷ್ ಮಾತನಾಡುವ ವಿದೇಶಗಳ ವಿಶ್ವವಿದ್ಯಾಲಯಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಮತ್ತು ಪಿಎಚ್.ಡಿ ಅಧ್ಯಯನ ಕೈಗೊಳ್ಳಲು ಬಯಸುವ ಭಾರತೀಯ ವಿದ್ಯಾರ್ಥಿಗಳು ಎದುರಿಸಬೇಕಾದ ಪರೀಕ್ಷೆ ಟೋಫೆಲ್ (TOEFL). ಈ ಪರೀಕ್ಷೆಯನ್ನು ಉತ್ತಮ ಅಂಕಗಳೊಂದಿಗೆ ಪಾಸುಮಾಡಿದವರಿಗೆ ವಿದೇಶಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ನೀಡಲಾಗುತ್ತದೆ.

ಗುರುರಾಜ್ ಎಸ್. ದಾವಣಗೆರೆ

ಅಂತಿಮ ವರ್ಷದ ಎಂಜಿನಿಯರಿಂಗ್ ಪದವಿ ಓದುತ್ತಿದ್ದ ಮಗ ಕೇಳಿದ, 'ಅಪ್ಪಾ, ಟೋಫೆಲ್ ಎಕ್ಸಾಂಗೆ ರಿಜಿಸ್ಟರ್ ಮಾಡಬೇಕು. ಹದಿನೈದು ಸಾವಿರ ರೂಪಾಯಿ ಬೇಕು' ಎಂದ. ಆಯಿತು ಯಾವ ರೀತಿಯ ಪರೀಕ್ಷೆ ಆನ್‌ಲೈನಾ, ಆಫ್‌ಲೈನಾ? ಎಂದು ಕೇಳಿದೆ. ಈಗಷ್ಟೇ ರಿಜಿಸ್ಟ್ರೇಷನ್ ಮಾಡುತ್ತಿದ್ದೇನೆ, ಆಮೇಲೆ ನಿರ್ಧಾರ ಮಾಡ್ತೀನಿ ಎಂದ.

ಮಗ ಪರೀಕ್ಷೆ ಬಗ್ಗೆ ಹೇಳುತ್ತಿದ್ದಂತೆ, ಏನಿದು 'ಟೋಫೆಲ್' ? ಯಾವ ಪರೀಕ್ಷೆ ಇದು ? ಎಂದು ಯೋಚಿಸುತ್ತಾ, ವಿವರಗಳನ್ನು ಹುಡುಕಲು ಆರಂಭಿಸಿದೆ. ಆಗ ಗೊತ್ತಾಗಿದ್ದು, ಇದು ವಿದೇಶದಲ್ಲಿ ಶಿಕ್ಷಣ ಪಡೆಯಲು ಬಯಸುವ ಭಾರತೀಯ ವಿದ್ಯಾರ್ಥಿಗಳು ಕಡ್ಡಾಯವಾಗಿ ಪಾಸು ಮಾಡಬೇಕಾದ 'ಭಾಷಾ ಪ್ರವೇಶ ಪರೀಕ್ಷೆ' ಎಂದು.

1964 ರಿಂದ ನಡೆಸಲಾಗುತ್ತಿರುವ ಈ ಪರೀಕ್ಷೆಯ ಹೆಸರನ್ನು ಟೆಫ್ಲ್ ಅಥವಾ ಟಾಫ್ಲ್ ಎಂದೂ ಉಚ್ಚರಿಸಲಾಗುತ್ತದೆ. ನಮ್ಮ ಇಂಗ್ಲಿಷ್ ಬಳಕೆಯಲ್ಲಿ 'ಟೋಫೆಲ್' ಎಂದು ಉಚ್ಚರಿಸುತ್ತೇವೆ.

ಟೋಫೆಲ್ (TOEFL)ನ ವಿಸ್ತೃತ ರೂಪ ಟೆಸ್ಟ್ ಆಫ್ ಇಂಗ್ಲಿಷ್ ಆ್ಯಸ್ ಫಾರಿನ್ ಲ್ಯಾಂಗ್ವೇಜ್(TOEFL– Test of English As Foreign Language). ಎಜುಕೇಷನಲ್ ಟೆಸ್ಟಿಂಗ್ ಸರ್ವೀಸ್ ಸಂಸ್ಥೆ (ಇಟಿಎಸ್), ಈ ಪರೀಕ್ಷೆಯನ್ನು ನಡೆಸುತ್ತದೆ. ಇಂಗ್ಲಿಷ್ ಅನ್ನು ಸ್ಥಳೀಯ ಭಾಷೆಯನ್ನಾಗಿ ಮಾತನಾಡುವ ದೇಶಗಳ ವಿಶ್ವವಿದ್ಯಾಲಯಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಮತ್ತು ಪಿಎಚ್.ಡಿ ಅಧ್ಯಯನ ಕೈಗೊಳ್ಳ ಬಯಸುವ ನಮ್ಮ ವಿದ್ಯಾರ್ಥಿಗಳು ಈ ಪರೀಕ್ಷೆಯನ್ನು ಎದುರಿಸಿ ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾಗಲೇಬೇಕು.

ಪದವಿ ಮತ್ತು ಉನ್ನತ ಅಧ್ಯಯನಕ್ಕೆ ವಿದೇಶಿ ವಿದ್ಯಾರ್ಥಿಗಳಿಗೆ ಪ್ರವೇಶ ನಿಡುವ ಬಹುಪಾಲು ಖಾಸಗಿ ಹಾಗೂ ಸರ್ಕಾರಿ ವಿಶ್ವವಿದ್ಯಾಲಯಗಳೆಲ್ಲ ಟೋಫೆಲ್ ಪರೀಕ್ಷೆಯ ಫಲಿತಾಂಶವನ್ನು ಅಧಿಕೃತ ಮಾನದಂಡವನ್ನಾಗಿ ಪರಿಗಣಿಸುತ್ತವೆ. ಜಗತ್ತಿನ ಅತ್ಯಂತ ಜನಪ್ರಿಯ ಭಾಷಾ ಪರೀಕ್ಷೆ ಎಂದೇ ಜನಜನಿತವಾಗಿರುವ ಟೋಫೆಲ್ ಪರೀಕ್ಷೆಗೆ ಪ್ರತಿ ವರ್ಷ ನಮ್ಮ ದೇಶದ 3 ಲಕ್ಷ ವಿದ್ಯಾರ್ಥಿಗಳು ಹಾಜರಾಗಿ ತಮ್ಮ ವಿದೇಶ ವಿದ್ಯಾಭ್ಯಾಸದ ಅವಕಾಶದ ಅದೃಷ್ಟ ಪರೀಕ್ಷೆ ಮಾಡಿಕೊಳ್ಳುತ್ತಾರೆ. ಯುರೋಪಿಯನ್ ಸಮುದಾಯದ ವಿವಿಗಳಲ್ಲಿ ಟೋಫೆಲ್ ಪರೀಕ್ಷೆಯ ಬದಲಾಗಿ ಐಲ್ಟ್ಸ್ (IELTS - International English Language Testing) ಪರೀಕ್ಷೆಯನ್ನು ನಡೆಸಿ ಅದರ ಅಂಕಗಳನ್ನು ಪರಿಗಣಿಸಿ ಅಭ್ಯರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸುತ್ತವೆ.

ವರ್ಷದಲ್ಲಿ ಎಷ್ಟು ಬಾರಿ ಎದುರಿಸಬಹುದು ?

ಟೋಫೆಲ್ ಪರೀಕ್ಷೆಯನ್ನು ಎದುರಿಸಲು ಇಂತಿಷ್ಟೇ ಅವಕಾಶ ಎಂಬ ಯಾವ ಮಿತಿಯೂ ಇಲ್ಲ. ಅಭ್ಯರ್ಥಿಗಳು ತಮಗಿಷ್ಟ ಬಂದಷ್ಟು ಸಲ ಪರೀಕ್ಷೆ ಎದುರಿಸಬಹುದು. ಒಮ್ಮೆ ಪರೀಕ್ಷೆ ಬರೆದ ನಂತರ ಮೂರು ದಿನಗಳ ನಂತರ ಮತ್ತೆ ಪರೀಕ್ಷೆ ಬರೆಯಬಹುದು. ಯಾವುದೇ ಒಂದು ವಿಭಾಗದಲ್ಲಿ ಕಡಿಮೆ ಅಂಕ ಬಂದಿದೆ ಎಂದು, ಅದೊಂದನ್ನೇ ಬರೆಯುವಂತಿಲ್ಲ. ನಾಲ್ಕೂ ವಿಭಾಗಗಳ ಪ್ರಶ್ನೆಗಳನ್ನು ಎದುರಿಸಬೇಕು. ಪ್ರತೀ ಬಾರಿಯೂ ಹೊಸದಾಗಿ ನೋಂದಣಿ ಮಾಡಿಕೊಳ್ಳಬೇಕು. ನೋಂದಣಿ ಮಾಡಿಕೊಂಡಾಗಲೆಲ್ಲ ಶುಲ್ಕ ಪಾವತಿಸಬೇಕು. ನೋಂದಣಿ ಮಾಡಿಕೊಳ್ಳಲು ಮಾನ್ಯತೆ ಇರುವ ಪಾಸ್‌ಪೋರ್ಟ್ ಇರಲೇಬೇಕು.

ಯಾವ ವಿಷಯದ ಪರೀಕ್ಷೆ?

ಪಿಯುಸಿ ಹಂತ ಹಾಗೂ ಪದವಿ ಅಧ್ಯಯನ ಮುಗಿಸಿರುವ ವಿದ್ಯಾರ್ಥಿಗಳು ತೆಗೆದುಕೊಳ್ಳುವ ಈ ಪರೀಕ್ಷೆಯಲ್ಲಿ ಅಭ್ಯರ್ಥಿಯು ಅಭ್ಯಸಿಸಿದ ಪಿಯುಸಿ - ಪದವಿ ವಿಷಯಗಳ ಕುರಿತು ಪ್ರಶ್ನೆಗಳಿರುವುದಿಲ್ಲ. ಬದಲಿಗೆ ಇಂಗ್ಲಿಷ್ ಭಾಷೆಯ ಮೇಲಿನ ಹಿಡಿತವನ್ನು ಪರೀಕ್ಷಿಸುವ ಪ್ರಶ್ನೆಗಳಿರುತ್ತವೆ. ಹಿಡಿತ ಎಂದರೆ ಏನು? ಭಾಷೆಯನ್ನು ಓದುವುದು, ಬರೆಯುವುದು, ಕೇಳಿಸಿಕೊಳ್ಳುವುದು ಮತ್ತು ಮಾತನಾಡುವುದು (Reading, Writing, Listening and Speaking)-ಈ ನಾಲ್ಕು ಆಯಾಮಗಳ ಕುರಿತು 120 ಅಂಕಗಳ 3 ಗಂಟೆ 30 ನಿಮಿಷ ಅವಧಿಯ ಈ ಪರೀಕ್ಷೆಯನ್ನು ಶುಲ್ಕ ಸಂದಾಯಿಸಿ ನೋಂದಣಿ ಮಾಡಿಕೊಂಡ ವಿದ್ಯಾರ್ಥಿಗಳು ನಿಗದಿತ ಪರೀಕ್ಷಾ ಕೇಂದ್ರಗಳಲ್ಲಿ ಆನ್‌ಲೈನ್ ಇಲ್ಲವೆ ಆಫ್‌ಲೈನ್ ವಿಧಾನದಲ್ಲಿ ಎದುರಿಸಬಹುದು. ಅಮೆರಿಕದ ವಿವಿ ಗಳಲ್ಲಿ ಪ್ರವೇಶ ಪಡೆಯಲು ಪ್ರತಿ ವಿಭಾಗದ 30 ಅಂಕಗಳಿಗೆ ಕನಿಷ್ಠ 20 ಅಂಕ ಗಳಿಸಿರಲೇಬೇಕು. ಯುರೋಪಿಯನ್ ಸಮುದಾಯದ ವಿವಿಗಳ ಕಾಲೇಜಿನಲ್ಲಿ ಪ್ರವೇಶ ಪಡೆಯಲು ಅಭ್ಯರ್ಥಿಯು ಪ್ರತಿ ವಿಭಾಗದಲ್ಲಿ ಕನಿಷ್ಠ 25 ಕ್ಕೂ ಹೆಚ್ಚು ಅಂಕಗಳಿಸಿರಬೇಕು. ಟೋಫೆಲ್ ಪರೀಕ್ಷೆಯ ಫಲಿತಾಂಶ ಎರಡು ವರ್ಷಗಳವರೆಗೆ ಮಾನ್ಯತೆ ಹೊಂದಿರುತ್ತದೆ.

ರೀಡಿಂಗ್ (ಓದುವುದು): ಈ ವಿಭಾಗದಲ್ಲಿ ಅಭ್ಯರ್ಥಿಯು 700 ಪದಗಳ 3 ಅಥವಾ 4 ಇಂಗ್ಲಿಷ್ ಪ್ಯಾರಾಗ್ರಾಫ್‌ಗಳನ್ನೂ ಓದಬೇಕು. ಪ್ರತಿ ಪ್ಯಾರಾಗ್ರಾಫ್‌ಗೆ ಸಂಬಂಧಿಸಿದ 10 ಪ್ರಶ್ನೆಗಳಿರುತ್ತವೆ. 54 ರಿಂದ 72 ನಿಮಿಷಗಳಲ್ಲಿ ಎಲ್ಲ ಪ್ರಶ್ನೆಗಳಿಗೂ ಕೀ ಬೋರ್ಡ್ ಬಳಸಿ ಟೈಪ್ ಮಾಡಿ ಉತ್ತರಿಸಬೇಕು.

ಲಿಸನಿಂಗ್ (ಕೇಳಿಸಿಕೊಳ್ಳುವುದು): ಈ ವಿಭಾಗದಲ್ಲಿ ಮೂರರಿಂದ ಐದು ನಿಮಿಷಗಳ 3 ರಿಂದ 4 ಉಪನ್ಯಾಸ ಮತ್ತು ಪ್ರತಿ ಉಪನ್ಯಾಸಕ್ಕೆ ಸಂಬಂಧಿಸಿದ ಆರು ಪ್ರಶ್ನೆಗಳಿರುತ್ತವೆ. ನಂತರ ಮೂರು ನಿಮಿಷದ ಎರಡು ಸಂಭಾಷಣೆಗಳಿರುತ್ತವೆ ಮತ್ತು ಪ್ರತಿ ಸಂಭಾಷಣೆಯ ಕುರಿತು 5 ಪ್ರಶ್ನೆಗಳಿರುತ್ತವೆ. ನಿಗದಿಪಡಿಸಿದ ಸಮಯ 41 ರಿಂದ 57 ನಿಮಿಷಗಳು. ಉಪನ್ಯಾಸ, ಸಂಭಾಷಣೆ ಆಲಿಸುವಾಗ ಟಿಪ್ಪಣಿ ಮಾಡಿಕೊಳ್ಳಬಹುದು.

ಸ್ಪೀಕಿಂಗ್ (ಮಾತನಾಡುವುದು): ಇಲ್ಲಿ ಪರೀಕ್ಷೆ ನಡೆಸುವ ಸಂಸ್ಥೆಯ ತಜ್ಞರು ಅಭ್ಯರ್ಥಿಗೆ ಆರು ಪ್ರಶ್ನೆಗಳನ್ನು ಕೇಳುತ್ತಾರೆ. ಅಭ್ಯರ್ಥಿಯು ತಾನು ತಲೆಗೆ ಧರಿಸಿಕೊಂಡಿರುವ ಮೈಕ್ ಉಪಯೋಗಿಸಿ ಪ್ರಶ್ನೆಗಳಿಗೆ ಉತ್ತರಿಸಬೇಕು. ಉತ್ತರಗಳಲ್ಲಿ ಉಚ್ಚಾರಣೆ ಸ್ಪಷ್ಟವಾಗಿರಬೇಕು. ಪರೀಕ್ಷೆಗೂ ಮುಂಚೆ ಮೈಕ್ ಸರಿಯಾಗಿ ಕೆಲಸ ಮಾಡುತ್ತದೆಯೇ ಎಂಬುದನ್ನು ಪರೀಕ್ಷಿಸಿಕೊಳ್ಳಬೇಕು. ತೊಂದರೆಯಿದ್ದರೆ ಪರೀಕ್ಷಾ ಕೇಂದ್ರದ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಪರೀಕ್ಷೆ ಪ್ರಾರಂಭವಾಗುವುದಕ್ಕೂ ಮುನ್ನ ಇದಕ್ಕಾಗಿಯೇ 30 ನಿಮಿಷಗಳ ಸಮಯ ಇರುತ್ತದೆ.

ರೈಟಿಂಗ್ (ಬರೆಯುವುದು): ಪ್ರತಿ ಅಭ್ಯರ್ಥಿಯು ಎರಡು ಕಿರು ಪ್ರಬಂಧ ಬರೆಯಬೇಕು. ಪ್ರಶ್ನೆಯಾಗಿ ವಿಷಯ ಮತ್ತು ಅದಕ್ಕೆ ಸಂಬಂಧಿಸಿದ ಚಿಕ್ಕ ಉಪನ್ಯಾಸವಿರುತ್ತದೆ. ವಿಷಯ ಓದಲು 3 ನಿಮಿಷ ಸಿಗುತ್ತದೆ. ಎರಡನ್ನೂ ಸಮನ್ವಯಗೊಳಿಸಿಕೊಂಡು 20 ನಿಮಿಷಗಳಲ್ಲಿ 150 ರಿಂದ 225 ಪದಗಳ ಪ್ರಬಂಧವನ್ನು ಬರೆಯಬೇಕು. ಮೇಲೆ ಬರೆದ ಪ್ರಬಂಧದ ವಿಷಯಕ್ಕೆ ಸಂಬಂಧಿಸಿದಂತೆ ಅಭ್ಯರ್ಥಿಯು ತನ್ನ ಅನುಭವ ಇಲ್ಲವೇ ಅಭಿಪ್ರಾಯವನ್ನು 30 ನಿಮಿಷಗಳಲ್ಲಿ 250 ಪದಗಳಿಗೆ ಮೀರದಂತೆ ಇನ್ನೊಂದು ಪ್ರಬಂಧ ಬರೆಯಬೇಕು.

(ಲೇಖಕರು: ಪ್ರಾಚಾರ್ಯರು, ವಿದಿಯಾ ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜು, ಬೆಂಗಳೂರು)

ಪರೀಕ್ಷೆ ಹೇಗೆ, ಎಲ್ಲಿ ನಡೆಯುತ್ತದೆ?

ಮೂರು ವಿಧಗಳಲ್ಲಿ ಪರೀಕ್ಷೆ ನಡೆಯುತ್ತದೆ. ಭಾರತದ ಪ್ರಮುಖ ನಗರಗಳಾದ ಅಹಮದಾಬಾದ್, ಬೆಂಗಳೂರು, ಚಂಡಿಗಡ, ಅಲಹಾಬಾದ್, ಮುಂಬೈ, ಪುಣೆ, ಹೈದರಾಬಾದ್, ಚೆನ್ನೈ, ದೆಹಲಿ, ಕೋಲ್ಕತ್ತ, ಗುರುಗ್ರಾಮ, ನೋಯಿಡಾ, ಲಖನೌ, ವಿಶಾಖಪಟ್ಟಣ, ಇಂದೋರ್, ಲುಧಿಯಾನ ಮತ್ತು ಕೊಯಮತ್ತೂರುಗಳಲ್ಲಿ ಪರೀಕ್ಷಾ ಕೇಂದ್ರಗಳಿವೆ. ಪರೀಕ್ಷೆ ನಡೆದ ಆರು ದಿನಗಳಲ್ಲಿ ಅಂಕಗಳ ವಿವರಗಳನ್ನು ಅಭ್ಯರ್ಥಿಯ ಇ-ಮೇಲ್‌ಗೆ ಪ್ರಮಾಣ ಪತ್ರ ರೂಪದಲ್ಲಿ ಕಳಿಸಿಕೊಡಲಾಗುತ್ತದೆ. ಇಡೀ ವರ್ಷ ಈ ಪರೀಕ್ಷೆಯನ್ನು ಬರೆಯಬಹುದಾದರೂ ಹತ್ತಿರದ ಊರಿನ ಪರೀಕ್ಷಾ ಕೇಂದ್ರಕ್ಕೆ ನೋಂದಣಿ ಬೇಕೆಂದರೆ ಕನಿಷ್ಠ ಮೂರು ತಿಂಗಳ ಮುಂಚೆಯೇ ಪ್ರಯತ್ನಿಸಬೇಕು.. ಪರೀಕ್ಷೆಗೆ ಒಂದು ವಾರವಿರುವಂತೆಯೇ ನೋಂದಣಿ ಸ್ಥಗಿತಗೊಳ್ಳುತ್ತದೆ.

ಮುಂದಿನ ವಾರ
ಟೋಫೆಲ್ ಪರೀಕ್ಷಾ ವಿಧಗಳು, ಇಂಗ್ಲಿಷ್ ಭಾಷಾ ಪರೀಕ್ಷೆಗಳು, ಯಾವ ದೇಶಗಳಲ್ಲಿ ಈ ಪರೀಕ್ಷೆಗೆ ಮಾನ್ಯತೆ ಕುರಿತ ವಿವರ...

ವಿದ್ಯಾರ್ಥಿ ವೇತನ ಕೈಪಿಡಿ

ರಮಣಕಾಂತ್ ಮುಂಜಲ್ ಸ್ಕಾಲರ್‌ಶಿಪ್ 2023

ಪ್ರತಿಷ್ಠಿತ ಕಾಲೇಜುಗಳಲ್ಲಿ ಹಣಕಾಸು ಸಂಬಂಧಿತ ಕೋರ್ಸ್‌ಗಳನ್ನು ಅಧ್ಯಯನ ಮಾಡಲು ಇಚ್ಛಿಸುವ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುವುದಕ್ಕಾಗಿ ಹೀರೊ ಫಿನ್‌ಕಾರ್ಪ್ ಸಂಸ್ಥೆ ಬೆಂಬಲಿತ ರಮಣಕಾಂತ್ ಮಂಜಲ್ ಫೌಂಡೇಷನ್‌ನ ಉಪಕ್ರಮವೇ 'ರಮಣಕಾಂತ್ ಮುಂಜಲ್ ಸ್ಕಾಲರ್‌ಶಿಪ್' ಪ್ರೋಗ್ರಾಂ.

ಅರ್ಹತೆಗಳು:
- ಬಿಬಿಎ, ಬಿಎಫ್‌ಐಎ, ಬಿ.ಕಾಂ(ಎಚ್,ಇ), ಬಿಎಂಎಸ್, ಐಪಿಎಂ, ಬಿಎ(ಎಕನಾಮಿಕ್ಸ್), ಬಿಬಿಎಸ್, ಬಿಬಿಐ, ಬಿಎಎಫ್ ಮತ್ತು ಬಿಎಸ್.ಸಿ (ಸ್ಟಾಟಿಸ್ಟಿಕ್ಸ್) ಅಥವಾ ಯಾವುದೇ ಇತರ ಹಣಕಾಸು ಸಂಬಂಧಿತ ಪದವಿ ಕೋರ್ಸ್‌ನ ಮೊದಲನೇ ವರ್ಷಕ್ಕೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಈ ಸ್ಕಾಲರ್‌ಶಿಪ್ ಕಾರ್ಯಕ್ರಮಕ್ಕೆ ಅರ್ಜಿ ಸಲ್ಲಿಸಬಹುದು.
- ಅರ್ಜಿದಾರರು 10 ಮತ್ತು 12ನೇ ತರಗತಿ ಪರೀಕ್ಷೆಗಳಲ್ಲಿ ಕನಿಷ್ಠ ಶೇ 80ರಷ್ಟು ಅಂಕಗಳನ್ನು ಪಡೆದಿರಬೇಕು.
- ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹4 ಲಕ್ಷಕ್ಕಿಂತ ಕಡಿಮೆಯಿರಬೇಕು.
- ಭಾರತೀಯ ಪ್ರಜೆಯಾಗಿರಬೇಕು
- **ಆರ್ಥಿಕ ನೆರವು:** ವರ್ಷಕ್ಕೆ ₹ 5ಲಕ್ಷದವರೆಗೆ 3 ವರ್ಷಗಳವರೆಗೆ
- **ಅರ್ಜಿ ಸಲ್ಲಿಕೆಗೆ ಕೊನೆ ದಿನ:** 15-09-2023
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** www.b4s.in/praja/RMKSP1

ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಎಂಬಿಎ ಸ್ಕಾಲರ್‌ಶಿಪ್ 2023-25

ಆರ್ಥಿಕ ಸಂಕಷ್ಟದಿಂದಾಗಿ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್ ವಿಷಯದಲ್ಲಿ ಉನ್ನತ ಅಧ್ಯಯನ ನಡೆಸಲು ಸಾಧ್ಯವಾಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಅಧ್ಯಯನ ಲಭ್ಯವಾಗುವಂತೆ ಮಾಡಲು ಐಡಿಎಫ್‌ಸಿ ಬ್ಯಾಂಕ್ ರೂಪಿಸಿರುವ ಕಾರ್ಯಕ್ರಮ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಎಂಬಿಎ ಸ್ಕಾಲರ್‌ಶಿಪ್ ಪ್ರೋಗ್ರಾಂ.

- **ಅರ್ಹತೆ:** ಆಯ್ದ ಶಿಕ್ಷಣ ಸಂಸ್ಥೆಗಳಲ್ಲಿ 2 ವರ್ಷ ಅವಧಿಯ ಎಂಬಿಎ ಪದವಿಯ ಮೊದಲ ವರ್ಷಕ್ಕೆ ಪ್ರವೇಶ ಪಡೆದಿರುವ ಭಾರತೀಯ ವಿದ್ಯಾರ್ಥಿಗಳು ಈ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿದಾರರ ಒಟ್ಟು ವಾರ್ಷಿಕ ಕುಟುಂಬದ ಆದಾಯವು ₹6 ಲಕ್ಷದ ಒಳಗಿರಬೇಕು. ಅರ್ಜಿ ಸಲ್ಲಿಸುವ ದಿನಾಂಕದಂದು ಅಭ್ಯರ್ಥಿಗಳ ವಯಸ್ಸು 35 ವರ್ಷಕ್ಕಿಂತ ಹೆಚ್ಚಿರಬಾರದು. ಅರ್ಜಿದಾರರು ಸಮರ್ಪಕವಾದ ತಮ್ಮ ಮೊಬೈಲ್ ಸಂಖ್ಯೆಯನ್ನು ತಮ್ಮ ಆಧಾರ್ ಕಾರ್ಡ್‌ಗೆ ಲಿಂಕ್ ಮಾಡಿರಬೇಕು.
- **ಆರ್ಥಿಕ ನೆರವು:** ಎರಡು ವರ್ಷಗಳ ಎಂಬಿಎ ಅಧ್ಯಯನಕ್ಕಾಗಿ ₹2 ಲಕ್ಷ (ಪ್ರತಿ ವರ್ಷ ₹ 1 ಲಕ್ಷ)
- **ಅರ್ಜಿ ಸಲ್ಲಿಸಲು ಕೊನೆ ದಿನ:** 31-07-2023
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್ ಮೂಲಕ
- **ಹೆಚ್ಚಿನ ಮಾಹಿತಿಗೆ:** www.b4s.in/praja/IFBMS4

ಕೃಪೆ: **www.buddy4study.com**

'ವಿದ್ಯಾಧಾನ್' ವಿದ್ಯಾರ್ಥಿವೇತನ

ಸರೋಜಿನಿ ದಾಮೋದರನ್ ಪ್ರತಿಷ್ಠಾನದ ವತಿಯಿಂದ 2023ನೇ ಸಾಲಿನ 'ವಿದ್ಯಾಧಾನ್' ವಿದ್ಯಾರ್ಥಿ ವೇತನಕ್ಕೆ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಪ್ರತಿಷ್ಠಾನವು ಕರ್ನಾಟಕ, ಕೇರಳ, ತಮಿಳುನಾಡು, ಪುದುಚೇರಿ, ಗೋವಾ, ಆಂಧ್ರಪ್ರದೇಶ, ತೆಲಂಗಾಣ, ಗುಜರಾತ್, ಮಹಾರಾಷ್ಟ್ರ, ಒಡಿಶಾ, ದೆಹಲಿ, ಲಡಾಖ್, ಬಿಹಾರ ಮತ್ತು ಜಾರ್ಖಂಡ್‌ನಲ್ಲಿ ಕಾರ್ಯನಿರ್ವಹಿಸುತ್ತಿದೆ.

- **ಇರಬೇಕಾದ ಅರ್ಹತೆಗಳು:** ಕುಟುಂಬದ ವಾರ್ಷಿಕ ಆದಾಯ ₹ 2 ಲಕ್ಷಕ್ಕಿಂತ ಕಡಿಮೆ ಇರಬೇಕು. 2023ನೇ ಸಾಲಿನ ಎಸ್ಸೆಸ್ಸೆಲ್ಸಿಯಲ್ಲಿ ಪಾಸಾಗಿರಬೇಕು. 90ಕ್ಕಿಂತ ಅಧಿಕ ಅಥವಾ 9CGPA (ಶೇ 75 ಅಥವಾ 7CGPA ಅಂಗವೈಕಲ್ಯ ಹೊಂದಿರುವ ವಿದ್ಯಾರ್ಥಿಗಳು) ಅರ್ಜಿ ಸಲ್ಲಿಸಲು ಅರ್ಹರು.
- **ಅವಶ್ಯವಿರುವ ದಾಖಲೆಗಳು:** ಆದಾಯ ಪ್ರಮಾಣ ಪತ್ರ, 10ನೇ ತರಗತಿಯ ಅಂಕಪಟ್ಟಿ, ವಿದ್ಯಾರ್ಥಿಯ ಭಾವಚಿತ್ರ, ವಿದ್ಯಾರ್ಥಿಯ ಹೆಸರಿನ ಇ-ಮೇಲ್ ಐಡಿ.
- ವಿದ್ಯಾರ್ಥಿಗಳು ಉಚಿತವಾಗಿ www.vidyadhan.org ವೆಬ್‌ಸೈಟ್‌ನಲ್ಲಿ ಜುಲೈ 31ರ ಒಳಗೆ ಅರ್ಜಿ ಸಲ್ಲಿಸಬಹುದು.
- ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 9663517131

ಔಷಧೀಯ ಗುಣಗಳ ಹಾಲವಾಣ

ಡಾ. ಎಸ್. ಶಿಶುಪಾಲ



ಹಾಲವಾಣದ ಹೂವು -ಚಿತ್ರ: ಲೇಖಕರದ್ದು

ಜೀವಾನ್ವೇಷಣೆ

ಗೇಣುದ್ದನೆಯ, ಮೇಲ್ಮೈನಲ್ಲಿ ಗಂಟುಗಳಂತೆ ಕಾಣುವ ಕಾಯಿಯ ಸಿಪ್ಪೆ ಬಿಡಿಸಿ, ಅದರೊಳಗಿದ್ದ ಹಸಿ ಬೀಜ ತೆಗೆದು, ಬೀಜದ ಹೊಟ್ಟೆ ಕೊರೆದು ರಂಧ್ರ ಮಾಡಿ, ಬೆರಳಿಗೆ ಉಂಗುರ ಮಾಡಿಕೊಳ್ಳುತ್ತಿದ್ದು ನೆನಪಿದೆಯಾ..!

ಅದೇ ಬೀಜ ಒಣಗಿದ ಮೇಲೆ, ಅದನ್ನು ಕಲ್ಲಿಗೆ ಉಜ್ಜಿ ಪಕ್ಕದಲ್ಲಿದ್ದ ಗೆಳೆಯರ ಮೈಗೆ ತಾಗಿಸಿ, ಚುರುಗುಟ್ಟುವಂತಹ ಬಿಸಿ ತಾಕಿ ಅವರು 'ಹಾ..' ಎಂದಾಗ.. ಫುಲ್ ಖುಷಿಪಟ್ಟಿದ್ದು.. ನೆನಪಾಯ್ತಾ !

ನಿಜ. ಇದು ಹಾಲವಾಣ ಮರದ ಬೀಜದ ಕಥೆಯೇ. ಆದರೆ, ಇದು ಬಾಲ್ಯದ ಆಟಕ್ಕಷ್ಟೇ ಸೀಮಿತವಾಗಿಲ್ಲ.. ಆ ಮರದ ಬೀಜಗಳಿಗೆ ಔಷಧೀಯ ಗುಣವಿದೆ. ಇದನ್ನು ಭಾರತೀಯ ಹವಳದ ಮರ (ಇಂಡಿಯನ್ ಕೊರಲ್ ಟ್ರಿ) ಎಂದು ಕರೆಯುತ್ತಾರೆ. ಇದು ವೈಜ್ಞಾನಿಕವಾಗಿ ಎರಿತ್ರಿನಾ(Erythrina) ಕುಲಕ್ಕೆ ಸೇರಿದ್ದು. ಇದರಲ್ಲಿ ಸುಮಾರು 110 ಪ್ರಭೇದಗಳನ್ನು ಗುರುತಿಸಲಾಗಿದೆ. ಬಟಾಣಿ ಗಿಡದ ಕುಟುಂಬಕ್ಕೆ ಸೇರಿದ ಪ್ರಭೇದವಿದು. ದಕ್ಷಿಣ ಭಾರತದಲ್ಲಿರುವ ಹೂ ಬಿಡುವ ಸ್ಥಳೀಯ ಮರಗಳಲ್ಲೊಂದು. ಎಲೆ ಉದುರುವ ಕಾಡುಗಳಲ್ಲಿನ ಮರವಿದು.

ಗುಣಲಕ್ಷಣಗಳು: ಇದು ಮಧ್ಯಮ ಗಾತ್ರದ ಮರ. ಐದರಿಂದ ಹದಿನೈದು ಮೀಟರ್‌ವರೆಗೆ ವೇಗವಾಗಿ ಬೆಳೆಯುತ್ತದೆ. ಕೊಂಬೆಗಳು ಹತ್ತಿರದಲ್ಲಿರುತ್ತವೆ. ಕಾಂಡದ ಮೇಲೆ ನಯವಾದ ತೊಗಟೆಯಿದ್ದರೂ ಮುಳ್ಳುಗಳಿರುತ್ತವೆ. ಮೂರು ಪತ್ರೆಗಳಿರುವ ಎಲೆಗಳಲ್ಲಿ ತೊಟ್ಟು 15 ಸೆಂಮೀ ಇದ್ದು ಪತ್ರೆ ಏಳರಿಂದ 12 ಸೆಂ.ಮೀ. ಅಗಲವಿರುತ್ತದೆ. ಪತ್ರೆಗಳು ಮೊಟ್ಟೆಯಾಕಾರದಲ್ಲಿರುತ್ತವೆ.

ಫೆಬ್ರುವರಿಯಿಂದ ಏಪ್ರಿಲ್‌ವರೆಗೆ ಹೂ ಬಿಡುವ ಕಾಲ. ಸುಮಾರು ಎರಡು ತಿಂಗಳವರೆಗೆ ಹೂಗಳು ಮರದಲ್ಲಿರುತ್ತವೆ. ಈ ಸಮಯದಲ್ಲಿ ಮರದಲ್ಲಿ ಎಲೆಗಳೇ ಇರುವುದಿಲ್ಲ. ಕೊಂಬೆಗಳ ತುದಿಯಲ್ಲಿ ಆಕರ್ಷಕ ಹೂಗಳು 10 ರಿಂದ 20 ಸೆಂ.ಮೀ. ಗಾತ್ರವಿದ್ದು ಗೊಂಚಲಿನಲ್ಲಿ ಬಿಡುತ್ತವೆ. ಆಕರ್ಷಕ ಢಾಳ ಕೆಂಪು ಅಥವಾ ಹವಳ ಕೆಂಪಿನ ಸುಂದರ ಹೂವುಗಳು. ತುದಿ ಚೂಪಾಗಿರುವ ಹಣ್ಣುಗಳು ಏಳರಿಂದ 15 ಸೆಂಮೀಗಳಷ್ಟು ಉದ್ದವಿರುತ್ತವೆ (ಚಿತ್ರದ ಬಲಭಾಗದಲ್ಲಿವೆ). ಮೊದಲಿಗೆ ಕಾಯಿ ಹಸಿರಾಗಿದ್ದು ಕ್ರಮೇಣ ಕಡು-ಕಂದು ಬಣ್ಣದ್ದಾಗುತ್ತದೆ. ಬೀಜಗಳು ಮೂತ್ರಕೋಶದ ಆಕಾರದಲ್ಲಿರುತ್ತವೆ. ಒಂದು ಹಣ್ಣಿನಲ್ಲಿ 12ರ ತನಕ ಬೀಜಗಳಿರುತ್ತವೆ.


ಉಪಯೋಗಗಳು: ಉಪಯುಕ್ತ ನೆರಳಿನ ಮರ. ಹೂಗಳ ಅಂದಕ್ಕಾಗಿ ಈ ಮರವನ್ನು ಬೆಳೆಸಲಾಗುತ್ತದೆ. ಹೊಸ ಎಲೆಗಳನ್ನು ಪಲ್ಯಕ್ಕಾಗಿ ಉಪಯೋಗಿಸುತ್ತಾರೆ. ಎಲೆಗಳು ಚಳಿಗಾಲದವರೆಗೆ ಇರುತ್ತವೆ. ಆಯುರ್ವೇದ ಮತ್ತು ಸಿದ್ಧ ಔಷಧಿಗಳಲ್ಲಿ ಜ್ವರ ಮತ್ತು ಕರುಳು ಹುಳು ನಿವಾರಕವಾಗಿ ಬಳಕೆಯಲ್ಲಿದೆ. ಆಸ್ತಮಾ, ಕೆಮ್ಮು, ಋತುಚಕ್ರದ ಅಸ್ವಸ್ಥತೆ ಮುಂತಾದ ಆರೋಗ್ಯ ಸಮಸ್ಯೆಗಳಿಗೆ ಉಪಯುಕ್ತ. ಸಸ್ಯದಲ್ಲಿರುವ ಆಲ್ಕಲೈಡ್ ಮತ್ತು ಫ್ಲೆವೊನೈಡ್ ಎಂಬ ರಾಸಾಯನಿಕಗಳನ್ನು ಉರಿಯೂತ ನಿವಾರಣೆ ಮತ್ತು ಪ್ರತಿಜೀವಕಗಳಾಗಿಯೂ ಉಪಯೋಗಿಸುವರು.

ಹಾಲವಾಣ ಮರಗಳನ್ನು ಕಾಫಿ ಮತ್ತು ಚಹಾ ತೋಟಗಳಲ್ಲಿ ನೆರಳಿಗಾಗಿ ಬೆಳೆಸುತ್ತಾರೆ. ವೀಳ್ಯದೆಲೆ ಮತ್ತಿತರ ಬಳ್ಳಿಗಳಿಗೆ ಆಶ್ರಯ ಮರವಾಗಿಯೂ ಬಳಸಲಾಗುವುದು. ಮರದ ಕಾಂಡದಿಂದ ಗೊಂಬೆಗಳನ್ನು ತಯಾರಿಸಲಾಗುತ್ತದೆ. ತೊಗರಿ, ಹೆಸರು ಮುಂತಾದ ದ್ವಿದಳ ಸಸ್ಯಗಳ ಕುಟುಂಬಕ್ಕೆ ಸೇರಿದ ಮರವಾದ್ದರಿಂದ ಬೇರಿನಲ್ಲಿ ಸಾರಜನಕ ಹಿಡಿದಿಡುವ ಬ್ಯಾಕ್ಟಿರೀಯಾಗಳಿಗೆ ಆಶ್ರಯತಾಣ. ಹಾಗಾಗಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು ಸಹಕಾರಿ. ಬೀಜಗಳಿಂದ ಅಥವಾ ಕೊಂಬೆಗಳಿಂದ ಗಿಡವನ್ನು ಬೆಳೆಸಬಹುದು.


ಭಾರತದಲ್ಲಿ ಮಾತ್ರ ಕಾಣಸಿಗುವ ಸ್ಥಳೀಯ ಪ್ರಭೇದವಾಗಿದ್ದು ಕರ್ನಾಟಕ, ಬಿಹಾರ, ಪಶ್ಚಿಮ ಬಂಗಾಳ, ಅಂಡಮಾನ್-ನಿಕೋಬಾರ್ ದ್ವೀಪ ಸಮೂಹಗಳ ಕಾಡುಗಳಲ್ಲಿ ಬೆಳೆಯುತ್ತದೆ. ದೇಶದ ಅಭಿವೃದ್ಧಿ ಅಲ್ಲಿರುವ ನೈಸರ್ಗಿಕ ಸಂಪತ್ತು ಮತ್ತು ವಾತಾವರಣವನ್ನು ಅವಲಂಬಿಸಿದೆ. ಬಣ್ಣದ ಹೂಗಳಿರುವ ಮರಗಳು ಎಲ್ಲರ ಮನಸ್ಸಿಗೆ ಆಹ್ಲಾದವನ್ನು ಉಂಟುಮಾಡುತ್ತವೆ. ಜೊತೆಗೆ ಆರೋಗ್ಯಕರ ಪರಿಸರ ನಿರ್ಮಾಣವಾಗುವುದು. ಜೈವಿಕ ಅಲಂಕಾರ ಯೋಜನೆಗಳನ್ನು ಅನುಷ್ಠಾನಕ್ಕೆ ತರುವಾಗ ಸ್ಥಳೀಯ ಪ್ರಭೇದಗಳಿಗೆ ಆದ್ಯತೆ ನೀಡಬೇಕೆಂದು ಪರಿಸರ ತಜ್ಞರ ಅಭಿಪ್ರಾಯ. ಹಾಲವಾಣದಂತಹ ಮರಗಳು ಇದಕ್ಕೆ ಸೂಕ್ತವಾದದ್ದು. ಇಂತಹ ಬಹುಪಯೋಗಿ ಸಸ್ಯಗಳು ಹೆಚ್ಚಾದರೆ ಒಳ್ಳೆಯದಲ್ಲವೇ?

(ಲೇಖಕರು: ದಾವಣಗೆರೆ ವಿಶ್ವವಿದ್ಯಾಲಯದ ಸೂಕ್ಷ್ಮಜೀವಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರು)

ಎಂಬಿಎ ಪ್ರವೇಶಕ್ಕೆ ಪಿಜಿಸಿಇಟಿ ಕಡ್ಡಾಯವೇ?



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

1. ಎಂಬಿಎ ಮಾಡಲು ಪಿಜಿಸಿಇಟಿ ಕಡ್ಡಾಯವೇ? ಸರ್ಕಾರಿ ಕಾಲೇಜಿಗೆ ಪ್ರವೇಶ ಹೇಗೆ? ಈ ಕೋರ್ಸ್‌ನಲ್ಲಿ ಕಲಿಸುವ ವಿಷಯಗಳು ಯಾವುವು?

ಅಭಿಷೇಕ್ ಪಿ.ಎನ್, ಹರಿಹರ

ಉದ್ಯಮಗಳ ಅಭಿವೃದ್ಧಿಗಾಗಿ, ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಉಪಯೋಗಿಸುವ ಯೋಜನೆಗಳನ್ನು ರಚಿಸಿ, ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವುದೇ ಮ್ಯಾನೇಜ್‌ಮೆಂಟ್‌ನ ಮೂಲ ಉದ್ದೇಶ. ಈ ಜವಾಬ್ದಾರಿಗಳನ್ನು ನಿರ್ವಹಿಸಲು, ಸಮಗ್ರವಾದ ಜ್ಞಾನ ಮತ್ತು ಕೌಶಲಗಳನ್ನು ಎಂಬಿಎ ಕೋರ್ಸಿನಲ್ಲಿ ನೀಡಲಾಗುತ್ತದೆ. ಇದಲ್ಲದೆ, ಉದ್ಯಮಗಳಲ್ಲಿ ಪ್ರಾಯೋಗಿಕವಾದ ತರಬೇತಿಯನ್ನು ಪ್ರಾಜೆಕ್ಟ್‌ಗಳ ಮುಖಾಂತರ ನೀಡುವುದರಿಂದ ಕಲಿಕೆ ಪರಿಪೂರ್ಣವಾಗುತ್ತದೆ. ನಿಮ್ಮ ನೈಪುಣ್ಯ ಮತ್ತು ಚತುರತೆ ವರ್ಧಿಸಿ, ಯಾವುದೇ ಕೆಲಸವನ್ನು ನಿಭಾಯಿಸುವ ಆತ್ಮವಿಶ್ವಾಸ ಬೆಳೆಯುತ್ತದೆ. ಒಟ್ಟಾರೆ, ಎಂಬಿಎ ಕಲಿಕೆಯ ವೈವಿಧ್ಯಗಳಿಂದ ನಿಮ್ಮ ವ್ಯಕ್ತಿತ್ವದ ಸರ್ವತೋಮುಖ ಬೆಳವಣಿಗೆಯಾಗುತ್ತದೆ.

ಸರ್ಕಾರಿ ಮತ್ತು ಅನೇಕ ಖಾಸಗಿ ಕಾಲೇಜುಗಳಲ್ಲಿ ಎಂಬಿಎ ಪ್ರವೇಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಪಿಜಿಸಿಇಟಿ ಪರೀಕ್ಷೆಯಲ್ಲಿನ ಫಲಿತಾಂಶ ಮತ್ತು ಇನ್ನಿತರ ಪ್ರಕ್ರಿಯೆಗಳ ಮೂಲಕ ನಿರ್ಧರಿಸಲಾಗುತ್ತದೆ.

ಸಾಮಾನ್ಯವಾಗಿ, ಎಂಬಿಎ ಕೋರ್ಸಿನಲ್ಲಿ ಮ್ಯಾನೇಜ್‌ಮೆಂಟ್, ಮಾರ್ಕೆಟಿಂಗ್, ಅರ್ಥಶಾಸ್ತ್ರ, ಹಣಕಾಸು, ಮಾನವ ಸಂಪನ್ಮೂಲ, ಉತ್ಪಾದನೆ, ಲಾಜಿಸ್ಟಿಕ್ಸ್, ಸಾಂಸ್ಥಿಕ ನಡವಳಿಕೆ, ಕೈಗಾರಿಕ ಸಂಬಂಧಗಳು, ಸಂವಹನ, ಕಾನೂನು ಮುಂತಾದ ವಿಷಯಗಳನ್ನು ಕಲಿಸಲಾಗುತ್ತದೆ. ಇದರ ಜೊತೆಗೆ ವೃತ್ತಿಗೂ, ಜೀವನಕ್ಕೂ ಅಗತ್ಯವಾದ ಅನೇಕ ಸೂತ್ರಗಳ, ಮೌಲ್ಯಗಳ ಮನದಟ್ಟಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=WHZTFCmu3zg

2. ನಾನು ಬಿ.ಎಸ್ಸಿ ಓದುತ್ತಿದ್ದು ಎಂ.ಎಸ್ಸಿ (ಭ್ರೂಣಶಾಸ್ತ್ರ) ಅಧ್ಯಯನ ಮಾಡಲು ಇಚ್ಛಿಸಿದ್ದೇನೆ. ಈ ಕೋರ್ಸ್ ಮಾಡಲು ಉತ್ತಮ ಕಾಲೇಜುಗಳು, ಪ್ರವೇಶ ಪರೀಕ್ಷೆ ಮತ್ತು ಕೋರ್ಸ್ ನಂತರದ ವೃತ್ತಿಜೀವನದ ಬಗ್ಗೆ ತಿಳಿಸಿ.

ಮೌಲ್ಯ, ಬೆಂಗಳೂರು

ಭ್ರೂಣಶಾಸ್ತ್ರ ವಿಶಿಷ್ಟವಾದ ಮತ್ತು ಬೇಡಿಕೆಯಲ್ಲಿರುವ ಕ್ಷೇತ್ರ. ಎಂ.ಎಸ್ಸಿ (ಭ್ರೂಣಶಾಸ್ತ್ರ) ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯ, ಮೈಸೂರಿನ ಜೆಎಸ್‌ಎಸ್ ಮೆಡಿಕಲ್ ಕಾಲೇಜು, ಕೆಎಂಸಿ ಮಣಿಪಾಲ್ ಸೇರಿದಂತೆ ಕರ್ನಾಟಕದ ಕೆಲವೇ ಶಿಕ್ಷಣ ಸಂಸ್ಥೆಗಳಲ್ಲಿ ಲಭ್ಯವಿದೆ. ದೆಹಲಿಯ ಏಮ್ಸ್ (ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ನಲ್ಲಿಯೂ ಈ ಕೋರ್ಸ್ ಲಭ್ಯವಿದೆ. ನೀವು ಸೇರಬಯಸುವ ಸಂಸ್ಥೆಯನ್ನು ಆಧರಿಸಿ, ಪ್ರವೇಶ ಪರೀಕ್ಷೆಯಿರುತ್ತದೆ.

ಈ ಕೋರ್ಸ್ ನಂತರ ಉತ್ತಮವಾದ ವೃತ್ತಿಯ ಅವಕಾಶಗಳಿವೆ. ಎಂಬ್ರಿಯಾಲಜಿಸ್ಟ್, ಫರ್ಟಿಲಿಟಿ ರಿಸರ್ಚರ್, ಜೆನಟಿಸಿಸ್ಟ್, ಜೆನಟಿಕ್ ಕೌನ್ಸೆಲರ್, ಲ್ಯಾಬ್ ಮ್ಯಾನೇಜರ್, ರಿಪ್ರೊಡಕ್ಟಿವ್ ಬಯಾಲಜಿಸ್ಟ್, ಎಂಬ್ರಿಯಾಲಜಿ ಉಪನ್ಯಾಸಕರು ಇತ್ಯಾದಿ ಹುದ್ದೆಗಳಿಗೆ ಸೇರಬಹುದು. ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ಫರ್ಟಿಲಿಟಿ ಸೆಂಟರ್ಸ್, ಪ್ರಯೋಗಾಲಯಗಳು, ವಿಶ್ವವಿದ್ಯಾಲಯಗಳಲ್ಲಿ ಹುದ್ದೆಗಳನ್ನು ಅರಸಬಹುದು.

3. ನಾನು ಎಂಜಿನಿಯರಿಂಗ್ ಮುಗಿಸಿ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ ಮನಃಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಕೋರ್ಸ್ ಮಾಡುವ ಆಸಕ್ತಿಯಿದೆ. ಈ ಕೋರ್ಸ್ ಮತ್ತು ವೃತ್ತಿ ಸಂಬಂಧಿತ ಅವಕಾಶಗಳ ಕುರಿತು ತಿಳಿಸಿ.

ಹೆಸರು ತಿಳಿಸಿಲ್ಲ, ರಾಯಚೂರು

ಮನಃಶಾಸ್ತ್ರ ವಿಷಯದಲ್ಲಿ ಎಂ.ಎಸ್ಸಿ ಅಥವಾ ಎಂಎ ಮಾಡಬಹುದು. ಎಂ.ಎಸ್ಸಿ ಕೋರ್ಸ್ ವಿಜ್ಞಾನ ಮತ್ತು ಸಂಶೋಧನಾತ್ಮಕ ಅಂಶಗಳ ಮೇಲೆ ಕೇಂದ್ರೀಕೃತವಾಗಿದ್ದು ಎಂಎ ಕೋರ್ಸ್ ಮನೋವಿಜ್ಞಾನದ ಮಾನವಿಕ ಅಂಶಗಳ ಮೇಲೆ ಕೇಂದ್ರೀಕೃತವಾಗಿರುತ್ತದೆ. ಆದ್ದರಿಂದ, ಮುಂದಿನ ನಿಮ್ಮ ವೃತ್ತಿ ಯೋಜನೆಯನ್ನು ಪರಿಗಣಿಸಿ, ಅದರಂತೆ ಕೋರ್ಸ್ ಆಯ್ಕೆಯಿರಲಿ.

ಈ ಕೋರ್ಸ್ ನಂತರ ಪೊಲೀಸ್ ಇಲಾಖೆ, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ಮಾನಸಿಕ ಆರೋಗ್ಯ ಸಂಸ್ಥೆಗಳು, ಕೌನ್ಸೆಲಿಂಗ್ ಸಂಸ್ಥೆಗಳು, ಪ್ರಯೋಗಾಲಯಗಳು, ಸಂಶೋಧನಾ ಸಂಸ್ಥೆಗಳು ಮುಂತಾದ ಕ್ಷೇತ್ರಗಳಲ್ಲಿ ಉದ್ಯೋಗವನ್ನು ಪಡೆಯಬಹುದು.

ವೃತ್ತಿಯೋಜನೆಯನ್ನು ಮಾಡುವ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=oyUMPrEKPPU

ಇನ್ನಷ್ಟು ಪ್ರಶ್ನೋತ್ತರಗಳಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

4. ನಾನು ಎಂಎ (ಅರ್ಥಶಾಸ್ತ್ರ) ಕೋರ್ಸ್ ಅನ್ನು ಮುಕ್ತ ವಿಶ್ವವಿದ್ಯಾಲಯದ ಮೂಲಕ ಮಾಡಲು ಇಚ್ಛಿಸಿದ್ದೇನೆ. ಪ್ರವೇಶ ಪ್ರಕ್ರಿಯೆ ಯಾವಾಗ ಶುರುವಾಗಲಿದೆ? ದಯವಿಟ್ಟು ತಿಳಿಸಿ.

ಹೆಸರು ತಿಳಿಸಿಲ್ಲ, ರಾಯಚೂರು

ಸ್ನಾತಕೋತ್ತರ ಕೋರ್ಸ್ ಪ್ರವೇಶ ಪ್ರಕ್ರಿಯೆ ಈಗಾಗಲೇ ಶುರುವಾಗಿದೆ. ಉದಾಹರಣೆಗೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಪ್ರಕಟಣೆಯ ಪ್ರಕಾರ 2023-2024ನೇ ಶೈಕ್ಷಣಿಕ ವರ್ಷದ ಪ್ರವೇಶಕ್ಕೆ ದಿನಾಂಕ 31, ಆಗಸ್ಟ್, 2023 ಕೊನೆಯ ದಿನಾಂಕವೆಂದು ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://ksoumysuru.ac.in/

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಉತ್ತರ ಭಾರತ: ಚುರುಕುಗೊಂಡ ರಕ್ಷಣಾ ಕಾರ್ಯ ● ವಿದ್ಯುತ್, ಇಂಟರ್‌ನೆಟ್ ಸೇವೆಯಲ್ಲಿ ವ್ಯತ್ಯಯ

ಧಾರಾಕಾರ ಮಳೆ: ಜನಜೀವನ ಅಸ್ತವ್ಯಸ್ತ

ನವದೆಹಲಿ (ಪಿಟಿಐ): ಧಾರಾಕಾರ ಮಳೆ, ಜೋರಾಗಿ ಬೀಸುತ್ತಿದ್ದ ಗಾಳಿಯು ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಭಾನುವಾರ ಜನರನ್ನು ಸಂಕಷ್ಟಕ್ಕೆ ದೂಡಿದೆ. ರಕ್ಷಣಾ ಕಾರ್ಯವನ್ನು ಚುರುಕುಗೊಳಿಸಲಾಗಿದೆ.

ಹಿಮಾಚಲ ಪ್ರದೇಶ, ಉತ್ತರಾಖಂಡದಲ್ಲಿ ನದಿಗಳು ಅಪಾಯ ಮಟ್ಟ ಮೀರಿ ಹರಿಯುತ್ತಿವೆ. ಹಲವೆಡೆ ವಾಹನಗಳು ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಮಳೆ ಸಂಬಂಧಿತ ಅವಘಡಗಳಿಂದಾಗಿ 20 ಜನರು ಪ್ರಾಣ ಕಳೆದುಕೊಂಡಿದ್ದಾರೆ.

ಯಮುನಾ ನದಿ ತುಂಬಿ ಹರಿಯುತ್ತಿರುವುದರಿಂದ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿದೆ. ಉದ್ಯಾನಗಳು, ಅಂಡರ್ ಪಾಸ್‌ಗಳು, ಮಾರುಕಟ್ಟೆಗಳು, ಹಲವಾರು ಆಸ್ಪತ್ರೆಗಳ ಆವರಣಗಳು ಮಳೆ ನೀರಿನಲ್ಲಿ ಮುಳುಗಿದ ಪರಿಣಾಮ ಜನರು ತೊಂದರೆ ಅನುಭವಿಸಿದರು.

ವಿದ್ಯುತ್ ಹಾಗೂ ಇಂಟರ್‌ನೆಟ್ ಸೇವೆಯಲ್ಲಿ ಕೂಡ ವ್ಯತ್ಯಯವಾಗಿತ್ತು. ದೆಹಲಿ, ಗುರುಗ್ರಾಮದ ರಸ್ತೆಗಳಲ್ಲಿ ವಾಹನಗಳ ಸಂಚಾರಕ್ಕೆ ಅಡಚಣೆಯಾಗಿತ್ತು.

ಸಾವು–ನೋವು: ಹಿಮಾಚಲ ಪ್ರದೇಶದ ಹಲವಡೆ ಭೂಕುಸಿತ ಉಂಟಾಗಿ ಸಂಭವಿಸಿದ ಅವಘಡಗಳಲ್ಲಿ ಐವರು ಮೃತಪಟ್ಟಿದ್ದಾರೆ.

ಶಿಮ್ಲಾ ಜಿಲ್ಲೆಯ ಕೋಟ್ಗಢದಲ್ಲಿ ಮನೆಯೊಂದು ಕುಸಿದು ಒಂದೇ ಕುಟುಂಬದ ಮೂವರು ಮೃತಪಟ್ಟಿದ್ದಾರೆ. ಶಿಮ್ಲಾ ಹೊರವಲಯದ ರಾಘುಣಾ ಗ್ರಾಮದಲ್ಲಿ ಮಳೆಯಿಂದಾಗಿ ಮನೆಯೊಂದು ಕುಸಿದಿದ್ದು, ಭಾರಿ ಪ್ರಮಾಣದ ಅವಶೇಷ ಮಳೆ ನೀರಿನಲ್ಲಿ ಕೊಚ್ಚಿ ಹೋಗಿದೆ. ಇದರಡಿ ಸಿಲುಕಿದ ಬಾಲಕಿಯೊಬ್ಬಳು ಜೀವಂತ ಸಮಾಧಿಯಾಗಿದ್ದಾಳೆ.

ಕುಲ್ಲು ಪಟ್ಟಣದಲ್ಲಿ ನಿರ್ಮಿಸಿದ್ದ ತಾತ್ಕಾಲಿಕ ಮನೆಯೊಂದು ಕುಸಿದು ಮಹಿಳೆ ಮೃತಪಟ್ಟಿದ್ದಾರೆ. ಮತ್ತೊಂದು ಘಟನೆಯಲ್ಲಿ, ಚಂಬಾ ಜಿಲ್ಲೆಯ ಕಟಿಯಾನ್ ಎಂಬಲ್ಲಿ ಸಂಭವಿಸಿದ ಭೂಕುಸಿತದಲ್ಲಿ ವ್ಯಕ್ತಿಯೊಬ್ಬರು ಜೀವಂತ ಸಮಾಧಿಯಾಗಿದ್ದಾರೆ.

ಉತ್ತರ ಪ್ರದೇಶದ ಮುಜಫ್ಫರ ನಗರ ಜಿಲ್ಲೆಯ ನಿಯಾಜುರ ಗ್ರಾಮದಲ್ಲಿ ಮಳೆಯಿಂದಾಗಿ ಮನೆಯೊಂದರ ಚಾವಣಿ ಕುಸಿದು ತಾಯಿ–ಮಗಳು ಮೃತಪಟ್ಟಿದ್ದಾರೆ. ಕೌಶಾಂಬಿಯಲ್ಲಿ ಮರದ ರೆಂಬೆಗಳು ಮನೆ ಚಾವಣಿಯ ತಗಡಿನ ಮೇಲೆ ಬಿದ್ದ ಪರಿಣಾಮ, 10 ವರ್ಷದ ಬಾಲಕಿ ಮೃತಪಟ್ಟಿದ್ದಾಳೆ.

ಉತ್ತರಾಖಂಡದ ತೆಹ್ರಿ ಗರ್ಹವಾಲ್ ಜಿಲ್ಲೆಯಲ್ಲಿ ಗುಡ್ಡ ಕುಸಿದು ಉರುಳಿದ ಕಲ್ಲುಗಳು ಡಿಕ್ಕಿ ಹೊಡೆದ ಪರಿಣಾಮ ವಾಹನವೊಂದು ಗಂಗಾ ನದಿಯಲ್ಲಿ ಬಿದ್ದು ಮೂವರು ಮೃತಪಟ್ಟಿದ್ದಾರೆ. ಇತರ ಮೂವರು ನಾಪತ್ತೆಯಾಗಿದ್ದಾರೆ.

ಜಮ್ಮು–ಕಾಶ್ಮೀರದ ಪೂಂಚ್ ಜಿಲ್ಲೆಯ ಸುರಾನಕೋಟ್ ಎಂಬಲ್ಲಿನ ಡೋಗ್ರಾ ಕಾಲುವೆಯನ್ನು ದಾಟುವ ವೇಳೆ, ದಿಢೀರ್ ಪ್ರವಾಹ ಉಂಟಾಗಿ ಸೇನೆಯ ಇಬ್ಬರು ಯೋಧರು ಕೊಚ್ಚಿಕೊಂಡು ಹೋಗಿದ್ದಾರೆ. ನಾಯಬ್ ಸುಬೇದಾರ್ ಕುಲದೀಪ್ ಸಿಂಗ್ ಹಾಗೂ ಲಾನ್ಸ್ ನಾಯಕ್ ತೇಲುರಾಮ್ ಮೃತ ಯೋಧರು.

ದೋಡಾ ಜಿಲ್ಲೆಯಲ್ಲಿ ಭೂಕುಸಿತದಿಂದಾಗಿ ಬಂಡೆಗಳು ಬಸ್‌ವೊಂದಕ್ಕೆ ಡಿಕ್ಕಿ ಹೊಡೆದು ಸಂಭವಿಸಿದ ಅವಘಡದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ದೆಹಲಿಯಲ್ಲಿ ಗೋಡೆ ಕುಸಿದು ಮಹಿಳೆ ಮೃತಪಟ್ಟಿದ್ದಾರೆ.

ಹಾನಿ–ತೊಂದರೆ: ಹರಿಯಾಣ ಮತ್ತು ಪಂಜಾಬ್‌ನ ಹಲವು ಜಿಲ್ಲೆಗಳಲ್ಲಿ ಮಳೆ ನೀರು ಮನೆಗಳಿಗೆ, ಅಂಗಡಿಗಳಿಗೆ ನುಗ್ಗಿದೆ. ಅಕಾಲಿಕ ಹಿಮಪಾತ ಮತ್ತು ಭಾರಿ ಮಳೆಯಿಂದಾಗಿ ಲಡಾಖ್ ಜನರು ತೊಂದರೆ ಅನುಭವಿಸಿದರು.

ಹಿಮಾಚಲ ಪ್ರದೇಶದಲ್ಲಿ ಬಹುತೇಕ ನದಿಗಳು ಅಪಾಯ ಮಟ್ಟ ಮೀರಿ ಹರಿಯುತ್ತಿವೆ.


ಹಿಮಾಚಲ ಪ್ರದೇಶದ ಕುಲ್ಲುವಿನಲ್ಲಿ ಭಾರಿ ಮಳೆಗೆ ಉಕ್ಕಿ ಹರಿದ ಬಿಯಾಸ್ ನದಿ –ಪಿಟಿಐ ಚಿತ್ರ

ಪ್ರಮುಖ ಅಂಶಗಳು

- ಹಿಮಾಚಲ ಪ್ರದೇಶದಲ್ಲಿ 10 ಮತ್ತು 11ರಂದು ಎಲ್ಲ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ
- ದೆಹಲಿ, ನೋಯ್ಡಾ ಹಾಗೂ ಗುರುಗ್ರಾಮದಲ್ಲಿ ಎಲ್ಲ ಶಾಲೆಗಳಿಗೆ ಸೋಮವಾರ ರಜೆ ಘೋಷಿಸಲಾಗಿದೆ
- ಭಾರಿ ಮಳೆಯಿಂದಾಗಿ ಪರಿಹಾರ ಕಾರ್ಯಕ್ಕೆ ಚುರುಕು ನೀಡುವ ಉದ್ದೇಶದಿಂದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಎಲ್ಲ ಸರ್ಕಾರಿ ಅಧಿಕಾರಿಗಳ ಭಾನುವಾರದ ರಜೆಯನ್ನು ರದ್ದುಗೊಳಿಸಿದ್ದರು
- ಹಿಮಾಚಲ ಪ್ರದೇಶದ 14 ಕಡೆಗಳಲ್ಲಿ ಭಾರಿ ಪ್ರಮಾಣದ ಭೂಕುಸಿತ ಉಂಟಾಗಿದ್ದು, 13 ಕಡೆಗಳಲ್ಲಿ ದಿಢೀರ್ ಪ್ರವಾಹ ಕಂಡುಬಂದಿದೆ
- ಶಿಮ್ಲಾ ಮತ್ತು ಕಲ್ಕಾ ನಡುವಿನ 'ಯುನೆಸ್ಕೊ ಪಾರಂಪರಿಕ ರೈಲು ಮಾರ್ಗ'ದಲ್ಲಿ ಎಲ್ಲ ರೈಲುಗಳ ಸಂಚಾರವನ್ನು ರದ್ದುಗೊಳಿಸಲಾಗಿದೆ
- ಉತ್ತರ ರೈಲ್ವೆಯು 17 ರೈಲುಗಳ ಸಂಚಾರ ರದ್ದುಪಡಿಸಿದ್ದು, 12 ರೈಲುಗಳ ಮಾರ್ಗ ಬದಲಾಯಿಸಿದೆ

ಯಾತ್ರೆ ಮತ್ತೆ ಆರಂಭ

ಪ್ರತಿಕೂಲ ಹವಾಮಾನ ಕಾರಣ ಮೂರು ದಿನಗಳಿಂದ ಸ್ಥಗಿತಗೊಳಿಸಲಾಗಿದ್ದ ಅಮರನಾಥ ಯಾತ್ರೆಯನ್ನು ಭಾನುವಾರ ಪುನಃ ಆರಂಭಿಸಲಾಯಿತು. ಜಮ್ಮು–ಕಾಶ್ಮೀರದ ಪಂಜ್‌ತರಣಿ ಹಾಗೂ ಶೇಷನಾಗ್‌ದಲ್ಲಿನ ಶಿಬಿರಗಳಲ್ಲಿದ್ದ ಯಾತ್ರಿಗಳು ಪ್ರಯಾಣ ಮುಂದುವರಿಸಿದರು.

ಮಾಹಿತಿ ಪಡೆದ ಶಾ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ದೆಹಲಿ, ಕೇಂದ್ರಾಡಳಿತ ಪ್ರದೇಶ ಜಮ್ಮು–ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್‌ಗಳಿಗೆ ಕರೆ ಮಾಡಿ, ಮಳೆಯಿಂದಾಗಿ ಉದ್ಭವಿಸಿರುವ ಪರಿಸ್ಥಿತಿ ಕುರಿತು ಮಾಹಿತಿ ಪಡೆದರು.

ಜಮ್ಮು–ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರಿಂದ ಅಮರನಾಥ ಯಾತ್ರೆ ಹಾಗೂ ದೆಹಲಿಯಲ್ಲಿನ ಪರಿಸ್ಥಿತಿ ಕುರಿತು ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರಿಂದ ಮಾಹಿತಿ ಪಡೆದರು ಎಂದು ಮೂಲಗಳು ತಿಳಿಸಿವೆ.

ಅಮರನಾಥ ಯಾತ್ರೆ 129 ಕನ್ನಡಿಗರು ಸುರಕ್ಷಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮರನಾಥ ಯಾತ್ರೆಗೆ ತೆರಳಿ ಪ್ರತಿಕೂಲ ಹವಾಮಾನ ಸ್ಥಿತಿಯಿಂದಾಗಿ ಪಂಚತಾರಿಣಿ ಬೇಸ್ ಕ್ಯಾಂಪ್‌ನಲ್ಲಿ ಸಿಲುಕಿದ್ದ ಕರ್ನಾಟಕದ 129 ಮಂದಿ ಸುರಕ್ಷಿತವಾಗಿ ಹೊರ ಬಂದಿದ್ದಾರೆ ಎಂದು ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ತಿಳಿಸಿದ್ದಾರೆ.

'ಬೆಂಗಳೂರಿನ 78, ಗದಗ ಜಿಲ್ಲೆಯ 23, ಮೈಸೂರಿನ 13, ಬಳ್ಳಾರಿಯ ಆರು, ಧಾರವಾಡದ ಐದು, ಚಿತ್ರದುರ್ಗ ಮತ್ತು ವಿಜಯನಗರ ಜಿಲ್ಲೆಗಳ ತಲಾ ಇಬ್ಬರು ಪಂಚತಾರಿಣಿ ಬೇಸ್ ಕ್ಯಾಂಪ್‌ನಲ್ಲಿ ಸಿಲುಕಿದ್ದರು. ಭಾನುವಾರ ಸಂಜೆ ಎಲ್ಲರೂ ಸುರಕ್ಷಿತವಾಗಿ ಹೊರಬಂದಿದ್ದಾರೆ. ಕೆಲವರು ಶ್ರೀನಗರ ತಲುಪಿದ್ದು, ಉಳಿದವರು ಶ್ರೀನಗರದತ್ತ ಪ್ರಯಾಣ ಬೆಳೆಸಿದ್ದಾರೆ' ಎಂದು ಸಂಕಷ್ಟದಲ್ಲಿರುವ ರಾಜ್ಯದ ಅಮರನಾಥ ಯಾತ್ರಿಕರ ರಕ್ಷಣಾ ಕಾರ್ಯಾಚರಣೆಯ ಉಸ್ತುವಾರಿಯಾಗಿ ನಿಯೋಜನೆಗೊಂಡಿರುವ ಅವರು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್, ಬೆಂಗಳೂರು ನಗರ ಅಪರಾಧ ವಿಭಾಗದ ಡಿಸಿಪಿ ಯತೀಶ್ ಚಂದ್ರ ಮತ್ತು ಪ್ರೊಬೇಷನರಿ ಐಎಎಸ್ ಅಧಿಕಾರಿ ಕಾನಿಷ್ಕಾ ಅವರಿದ್ದ ತಂಡವನ್ನು ಕರ್ನಾಟಕದ ಯಾತ್ರಿಕರಿಗೆ ನೆರವು ಒದಗಿಸಲು ಶ್ರೀನಗರಕ್ಕೆ ಕಳುಹಿಸಲಾಗಿದೆ. ಈ ತಂಡವು ರಾಜ್ಯದ ಯಾತ್ರಿಕರು ತವರಿಗೆ ಮರಳಲು ಅಗತ್ಯ ನೆರವು ಒದಗಿಸಲಿದೆ ಎಂದು ತಿಳಿಸಿದ್ದಾರೆ.

ಅಮರನಾಥ ಯಾತ್ರಿಕರ ನೆರವಿಗಾಗಿ ಸಹಾಯವಾಣಿ ಆರಂಭಿಸಲಾಗಿದೆ. ದೂರವಾಣಿ ಸಂಖ್ಯೆ 1070, 080–22253707 ಅಥವಾ 080–22340676 ಸಂಪರ್ಕಿಸಬಹುದು. ಇ–ಮೇಲ್ ವಿಳಾಸ seockarnataka@gmail.com ಅಥವಾ ಟ್ವಿಟರ್ @SEOC_Karnataka ಮೂಲಕವೂ ನೆರವಿಗಾಗಿ ಮನವಿ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ತಮಿಳುನಾಡಿಗೆ ರಾಜ್ಯಪಾಲ ರವಿಯೇ ಬೆದರಿಕೆ: ಸ್ಟಾಲಿನ್ ಪತ್ರ



ಚೆನ್ನೈ (ಪಿಟಿಐ): ರಾಜ್ಯಪಾಲ ಆರ್.ಎನ್. ರವಿ ಅವರು ಕೋಮು ದ್ವೇಷ ಪ್ರಚೋದನೆಯಲ್ಲಿ ತೊಡಗಿದ್ದು, ತಮಿಳುನಾಡಿಗೆ ಬೆದರಿಕೆಯಾಗಿ ಪರಿಣಮಿಸಿದ್ದಾರೆ ಎಂದು ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ತಿಳಿಸಿರುವುದಾಗಿ ಸರ್ಕಾರ ಭಾನುವಾರ ಹೇಳಿದೆ.

ಮುರ್ಮು ಅವರಿಗೆ ಶನಿವಾರ (ಜುಲೈ 8) ಪತ್ರ ಬರೆದಿರುವ ಸ್ಟಾಲಿನ್, 'ಸಂವಿಧಾನದ 159ನೇ ವಿಧಿಯ ಅಡಿಯಲ್ಲಿ ಮಾಡಿದ ಪ್ರಮಾಣವನ್ನೇ ರವಿ ಉಲ್ಲಂಘಿಸುತ್ತಿದ್ದಾರೆ. ಅವರು ಕೋಮು ದ್ವೇಷವನ್ನು ಹುಟ್ಟುಹಾಕುತ್ತಿದ್ದಾರೆ. ತಮಿಳುನಾಡಿನ ಶಾಂತಿಗೆ ಬೆದರಿಕೆಯೊಡ್ಡಿದ್ದಾರೆ' ಎಂದು ಉಲ್ಲೇಖಿಸಿರುವುದಾಗಿ ಸರ್ಕಾರದ ಅಧಿಕೃತ ಪ್ರಕಟಣೆಯಲ್ಲಿ ಹೇಳಲಾಗಿದೆ.

ಸಚಿವ ವಿ. ಸೆಂಥಿಲ್ ಬಾಲಾಜಿ ಅವರನ್ನು ಮಂತ್ರಿ ಮಂಡಲದಿಂದ ವಜಾ ಮಾಡಿದ್ದು, ನಂತರ ಹಿಂಪಡೆದ ನಡೆಯ ಬಗ್ಗೆ ಸ್ಟಾಲಿನ್ ತಮ್ಮ ಪತ್ರದಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ. 'ಒಂದೆಡೆ, ರವಿ ಅವರು ಹಿಂದಿನ ಎಐಎಡಿಎಂಕೆ ಸರ್ಕಾರದಲ್ಲಿ ಸಚಿವರಾಗಿದ್ದವರ ವಿಚಾರಣೆಗೆ ಅನುಮತಿ ನೀಡುವುದನ್ನು ವಿಳಂಬ ಮಾಡುತ್ತಿದ್ದಾರೆ. ಇನ್ನೊಂದೆಡೆ, ಸೆಂಥಿಲ್ ಬಾಲಾಜಿ ವಿಷಯದಲ್ಲಿ ತಮ್ಮ ಆತುರದ ನಡೆ ಪ್ರದರ್ಶಿಸಿದ್ದಾರೆ. ಈ ಮೂಲಕ ಅವರು ತಮ್ಮ ರಾಜಕೀಯ ಒಲವನ್ನು ಬಹಿರಂಗಪಡಿಸಿದ್ದಾರೆ' ಎಂದು ಸ್ಟಾಲಿನ್ ಆರೋಪಿಸಿದ್ದಾರೆ.

'ತಮ್ಮ ನಡವಳಿಕೆ ಮತ್ತು ಕ್ರಮದಿಂದ ರಾಜ್ಯಪಾಲರು ಪಕ್ಷಪಾತಿ ಎಂದು ಸಾಬೀತಾಗಿದೆ. ರಾಜ್ಯಪಾಲರ ಹುದ್ದೆಯಲ್ಲಿರಲು ಅವರು ಅನರ್ಹರು ಎಂದು ಸಾಬೀತುಪಡಿಸಿದ್ದಾರೆ. ರಾಜ್ಯಪಾಲರಂಥ ಉನ್ನತ ಹುದ್ದೆಯಿಂದ ವಜಾ ಮಾಡಲು ರವಿ ಯೋಗ್ಯರು' ಎಂದು ಸಿಎಂ ತಮ್ಮ ಪತ್ರದಲ್ಲಿ ಒತ್ತಿ ಹೇಳಿದ್ದಾರೆ.

'ತಮಿಳುನಾಡು ರಾಜ್ಯಪಾಲರು ಅಧಿಕಾರದಲ್ಲಿ ಮುಂದುವರಿಯುವುದು ಭಾರತದ ಸಂವಿಧಾನ ರಚನಕಾರರ ಭಾವನೆಗಳು ಮತ್ತು ಘನತೆಯನ್ನು ಕಾಪಾಡುವ ದೃಷ್ಟಿಯಿಂದ ಸೂಕ್ತವೇ' ಎಂದು ನಿರ್ಧರಿಸುವ ವಿಚಾರವನ್ನು ರಾಷ್ಟ್ರಪತಿಯವರಿಗೇ ಬಿಡುವುದಾಗಿ ಸ್ಟಾಲಿನ್ ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ ಎಂದು ಸರ್ಕಾರ ಹೇಳಿಕೆಯಲ್ಲಿ ತಿಳಿಸಿದೆ.

ಬಿಜೆಪಿ ವಿರೋಧಿ ನಿಲುವಿನಿಂದ ಅಪಾಯ ಬಂದರೂ ಹೆದರಬೇಕಿಲ್ಲ: ಬಿಜೆಪಿ ವಿರುದ್ಧದ ತನ್ನ ದೃಢವಾದ ನಿಲುವಿನಿಂದ ಅಪಾಯಗಳು ಎದುರಾದರೂ ಚಿಂತಿಸುವ ಅಗತ್ಯವಿಲ್ಲ ಎಂದು ತಮಿಳುನಾಡು ಮುಖ್ಯಮಂತ್ರಿ ಮತ್ತು ಡಿಎಂಕೆ ನಾಯಕ ಎಂ. ಕೆ. ಸ್ಟಾಲಿನ್ ಭಾನುವಾರ ಹೇಳಿದ್ದಾರೆ.

ಪಟ್ನಾದಲ್ಲಿ ಇತ್ತೀಚೆಗೆ ನಡೆದಿದ್ದ ವಿರೋಧ ಪಕ್ಷಗಳ ಸಭೆಯ ಕುರಿತು ಮಾತನಾಡಿದ ಸ್ಟಾಲಿನ್, 'ಅಧಿಕಾರವನ್ನು ಯಾರು ಹಿಡಿಯಬೇಕು ಎಂಬುದರ ಕುರಿತು ಗಮನ ಕೇಂದ್ರೀಕರಿಸುವ ಬದಲು, ಒಂದು ನಿರ್ದಿಷ್ಟ ಪಕ್ಷ ಕೇಂದ್ರದಲ್ಲಿ ಅಧಿಕಾರದಲ್ಲಿ ಮುಂದುವರಿಯದಂತೆ ನೋಡಿಕೊಳ್ಳುವುದು ಹೆಚ್ಚು ಮುಖ್ಯ' ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮಕ್ಕಳ ಸಹಾಯವಾಣಿ ರಾಜ್ಯಗಳಿಗೆ ಹಸ್ತಾಂತರ: ಸ್ಮೃತಿ ಇರಾನಿ

ಭೋಪಾಲ್ (ಪಿಟಿಐ): ಮಕ್ಕಳ ಸಹಾಯವಾಣಿಯನ್ನು ರಾಜ್ಯಗಳಿಗೆ ಹಸ್ತಾಂತರಿಸಲಾಗುವುದು ಎಂದು ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರು ಭಾನುವಾರ ಹೇಳಿದ್ದಾರೆ.

ಇಲ್ಲಿ ಹಮ್ಮಿಕೊಂಡಿದ್ದ ವಿಚಾರ ಸಂಕಿರಣವೊಂದರಲ್ಲಿ ಮಾತನಾಡಿದ ಅವರು, 'ತೊಂದರೆಗೆ ಸಿಲುಕುವವರು ಮಾಡುವ ಕರೆಗಳನ್ನು ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ಸ್ವೀಕರಿಸಿದರೆ, ಸಮಸ್ಯೆಗಳನ್ನು ಶೀಘ್ರ ಪರಿಹರಿಸಲು ಸಾಧ್ಯ' ಎಂದು ತಿಳಿಸಿದ್ದಾರೆ.

ಮಕ್ಕಳ ಸಹಾಯವಾಣಿ 1098, 24 ಗಂಟೆಗಳೂ ಕಾರ್ಯನಿರ್ವಹಿಸುವ ತುರ್ತು ದೂರವಾಣಿ ಸೇವೆಯಾಗಿದ್ದು, 26 ವರ್ಷಗಳಿಂದ ಮಕ್ಕಳಿಗೆ ನೆರವು ನೀಡುತ್ತಿದೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯದ ಅಧೀನದಲ್ಲಿ ಕಾರ್ಯ ನಿರ್ವಹಿಸುವ ಚೈಲ್ಡ್‌ಲೈನ್ ಇಂಡಿಯಾ ಫೌಂಡೇಶನ್ (ಸಿಐಎಫ್) ದೇಶದಾದ್ಯಂತ ಮಕ್ಕಳ ಸಹಾಯವಾಣಿ 1098ರ ಮೇಲ್ವಿಚಾರಣೆ ಮತ್ತು ನಿರ್ವಹಣೆ ಮಾಡುತ್ತಿದೆ.

ಶಾಸಕರ ಅನರ್ಹತೆ ಪ್ರಕರಣ: ಕಾದು ನೋಡುವ ತಂತ್ರಕ್ಕೆ ಉದ್ಧವ್ ಠಾಕ್ರೆ ಮೊರೆ

ಮಹಾರಾಷ್ಟ್ರ: ಸ್ಪೀಕರ್ ಮೇಲೆ ಎಲ್ಲರ ಕಣ್ಣು

ಮುಂಬೈ (ಪಿಟಿಐ): ಪಕ್ಷಾಂತರ ನಿಷೇಧ ಕಾಯ್ದೆಯಡಿ ಶಾಸಕರ ಸದಸ್ಯತ್ವದ ಅನರ್ಹತೆ ಅರ್ಜಿಗೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಸಚಿವಾಲಯವು ಶಿವಸೇನಾದ ಶಿಂದೆ ಮತ್ತು ಉದ್ಧವ್ ಬಣದ ಸದಸ್ಯರಿಗೆ ನೋಟಿಸ್ ಜಾರಿಗೊಳಿಸಿರುವ ಬೆನ್ನಲ್ಲೇ ವಿಧಾನಸಭಾ ಸ್ಪೀಕರ್ ನಡೆಯ ಮೇಲೆ ಎಲ್ಲರ ಕುತೂಹಲದ ಕಣ್ಣು ನೆಟ್ಟಿದೆ.


ಸ್ಪೀಕರ್ ರಾಹುಲ್ ನಾರ್ವೇಕರ್ ಕೈಗೊಳ್ಳುವ ಕ್ರಮದ ಮೇಲೆ ಮುಖ್ಯಮಂತ್ರಿ ಏಕನಾಥ ಶಿಂದೆ ಸರ್ಕಾರದ ಭವಿಷ್ಯವೂ ನಿಂತಿದೆ. ಮತ್ತೊಂದೆಡೆ ಶಿವಸೇನಾವು (ಯುಬಿಟಿ) ಕಾದು ನೋಡುವ ತಂತ್ರಕ್ಕೆ ಮೊರೆ ಹೋಗಿದೆ.

ಶಿಂದೆ ಬಣದ ಶಾಸಕರ ಅನರ್ಹತೆ ಅರ್ಜಿ ಕುರಿತಂತೆ ಸ್ಪೀಕರ್ ಅವರೇ ನಿಗದಿತ ಅವಧಿಯೊಳಗೆ ನಿರ್ಧಾರ ಕೈಗೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಈಗಾಗಲೇ ಸ್ಪಷ್ಟಪಡಿಸಿದೆ. ಶಿಂದೆ ಸೇರಿದಂತೆ ಅವರ ಬಣದ 40 ಶಾಸಕರು ಮತ್ತು ಉದ್ಧವ್ ಬಣದ 14 ಶಾಸಕರಿಗೆ ಸ್ಪೀಕರ್ ನೋಟಿಸ್ ಜಾರಿಗೊಳಿಸಿದ್ದಾರೆ. ವ್ಯತಿರಿಕ್ತ ಆದೇಶ ಹೊರಬಿದ್ದರೆ ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ಉದ್ಧವ್ ಠಾಕ್ರೆ ನಿರ್ಧರಿಸಿದ್ದಾರೆ.

ನಾಗ್ಪುರದಲ್ಲಿ ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, 'ಸ್ಪೀಕರ್ ನೀಡಿರುವ ನೋಟಿಸ್‌ಗೆ ಉತ್ತರಿಸಲು ಶಾಸಕರಿಗೆ ಏಳು ದಿನಗಳ ಕಾಲಾವಕಾಶವಿದೆ. ಶಿಂದೆ ಸೇರಿದಂತೆ ಅವರ ಬಣದ 16 ಶಾಸಕರ ಅನರ್ಹತೆಗೆ ಸಂಬಂಧಿಸಿದಂತೆ ಕಾನೂನು ಚೌಕಟ್ಟಿನೊಳಗೆ ಸ್ಪೀಕರ್ ಕ್ರಮ ಕೈಗೊಳ್ಳಬೇಕಿದೆ. ಕ್ರಮ ಜರುಗಿಸಲು ಹಿಂಜರಿದರೆ ಸುಪ್ರೀಂ ಕೋರ್ಟ್ ಬಾಗಿಲು ಯಾವಾಗಲೂ ತೆರೆದಿದೆ' ಎಂದು ಪುನರುಚ್ಚರಿಸಿದರು.

'ಅಧಿಕಾರ ಒಪ್ಪಂದ ಉಲ್ಲಂಘಿಸಿದ ಬಿಜೆಪಿ'

ಮುಂಬರುವ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಯ ಗೆಲುವಿನ ಮೇಲೆ ಕಣ್ಣಿಟ್ಟಿರುವ ಉದ್ಧವ್ ಠಾಕ್ರೆ ರಾಜ್ಯದಲ್ಲಿ ಪಕ್ಷ ಸಂಘಟನೆಗೆ ನಿರ್ಧರಿಸಿದ್ದಾರೆ. ಭಾನುವಾರದಿಂದ ಎರಡು ದಿನ ವಿದರ್ಭ ವಲಯದಲ್ಲಿ ಪ್ರವಾಸ ಆರಂಭವಾಗಿದೆ.



ಈ ಭಾಗವು ಬಿಜೆಪಿಯ ಭದ್ರಕೋಟೆ ಎಂದೇ ಬಿಂಬಿತವಾಗಿದೆ. ಅಜಿತ್ ಪವಾರ್ ಅವರು ಶಿಂದೆ ನೇತೃತ್ವದ ಸರ್ಕಾರದ ಜೊತೆ ಕೈಜೋಡಿಸಿ ಒಂದು ವಾರ ಪೂರ್ಣಗೊಂಡ ಬಳಿಕ ಉದ್ಧವ್ ಅವರು, ಪಕ್ಷದೊಳಗಿನ ಆಂತರಿಕ ಸಂಘರ್ಷದಿಂದ ಕುಗ್ಗಿ ಹೋಗಿರುವ ಕಾರ್ಯಕರ್ತರಲ್ಲಿ ಆತ್ಮಸ್ಥೈರ್ಯ ತುಂಬಲು ಮುಂದಾಗಿದ್ದಾರೆ.

ಯವತ್ಮಾಲ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, '2019ರ ವಿಧಾನಸಭಾ ಚುನಾವಣಾ ಪೂರ್ವದಲ್ಲಿ ಬಿಜೆಪಿ ಮತ್ತು ಶಿವಸೇನಾ ನಡುವೆ ಮುಖ್ಯಮಂತ್ರಿ ಸ್ಥಾನ ಸೇರಿದಂತೆ ತಲಾ ಎರಡೂವರೆ ವರ್ಷಗಳ ಅಧಿಕಾರದ ಹಂಚಿಕೆಯ ಒಪ್ಪಂದವಾಗಿತ್ತು. ಈ ಬಗ್ಗೆ ಅಮಿತ್ ಶಾ ಜೊತೆಗೂ ಚರ್ಚಿಸಿದ್ದೆ. ಆದರೆ, ಅದನ್ನು ಕಮಲ ಪಾಳಯ ಮುರಿಯಿತು' ಎಂದು ಟೀಕಿಸಿದರು.

ವಿದರ್ಭ ವಲಯದಲ್ಲಿ ಬಂಜಾರ ಸಮುದಾಯದವರು ಹೆಚ್ಚಿರುವ ಪ್ರದೇಶಗಳಿಗೆ ಹಾಗೂ ಆ ಸಮುದಾಯದ ಆರಾಧ್ಯ ದೇವತೆ ಪೋಹರಾದೇವಿ ದೇಗುಲಕ್ಕೂ ಭೇಟಿ ನೀಡಿ ಪೂಜೆ ಸಲ್ಲಿಸಿದರು.

'ವಿದರ್ಭ ಈಗ ನೆನಪಾಯಿತೇ?'

ಉದ್ಧವ್ ಪ್ರವಾಸವನ್ನು ಕಟುವಾಗಿ ಟೀಕಿಸಿರುವ ಬಿಜೆಪಿಯು, 'ಈಗಷ್ಟೇ ನಿಮಗೆ ವಿದರ್ಭದ ನೆನಪಾಗುತ್ತಿದೆ. ಮುಖ್ಯಮಂತ್ರಿಯಾಗಿದ್ದ ವೇಳೆ ನಿಮಗೆ ಮರೆಗುಳಿ ಕಾಯಿಲೆ ಇತ್ತೇ' ಎಂದು ಪ್ರಶ್ನಿಸಿದೆ.

'ಉದ್ಧವ್ ಅವರು ಎರಡೂವರೆ ವರ್ಷ ಅಧಿಕಾರ ನಡೆಸಿದ ವೇಳೆ ರಾಜ್ಯ ಕಾರ್ಯದರ್ಶಿ ಸೇರಿದಂತೆ ಅಧಿಕಾರಿಗಳು ಇಲ್ಲಿಗೆ ಭೇಟಿ ನೀಡಿರಲಿಲ್ಲ. ಎರಡೂವರೆ ದಿನಗಳ ಭೇಟಿಯ ಉದ್ದೇಶವಾದರೂ ಏನು' ಎಂದು ಮಹಾರಾಷ್ಟ್ರ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಚಂದ್ರಶೇಖರ ಬಾವನಕುಲೆ ವ್ಯಂಗ್ಯವಾಡಿದ್ದಾರೆ.

'ಸಿ.ಎಂ ಆಗಿದ್ದಾಗ ದೇಗುಲಗಳ ಬಾಗಿಲು ಮುಚ್ಚಿ ಯಥೇಚ್ಛವಾಗಿ ಮದ್ಯದಂಗಡಿಗಳ ಬಾಗಿಲುಗಳನ್ನು ತೆರೆಸಿದ್ದರು. ಈಗ ದೇಗುಲಗಳಿಗೆ ಭೇಟಿ ನೀಡುತ್ತಿದ್ದಾರೆ. ಬಾಳಾಸಾಹೆಬ್ ಠಾಕ್ರೆ ಅವರ ನಿಧನದ ಬಳಿಕ ನೀವು ಬಿಜೆಪಿ ಮತ್ತು ಹಿಂದುತ್ವಕ್ಕೆ ದ್ರೋಹ ಬಗೆದಿದ್ದೀರಿ. ರಾಜ್ಯದಲ್ಲಿ ಎಷ್ಟೇ ಪ್ರವಾಸ ಮಾಡಿದರೂ ನಿಮ್ಮ ನಿಲುವು ಏನೆಂಬುದು ಜನರಿಗೆ ತಿಳಿದಿದೆ' ಎಂದರು.

ನಗ್ನ ವ್ಯಕ್ತಿಗೆ ಥಳಿತ: ಪ್ರಕರಣ ದಾಖಲು

ಸಾಗರ್ (ಪಿಟಿಐ): ನಗ್ನ ವ್ಯಕ್ತಿಗೆ ಗುಂಪೊಂದು ಥಳಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ಬೆನ್ನಲ್ಲೇ ಮಧ್ಯಪ್ರದೇಶದ ಸಾಗರ್ ನಗರದ ಪೊಲೀಸರು ಅಪರಿಚಿತ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಳ್ಳನೆಂದು ಆರೋಪಿಸಿ ವ್ಯಕ್ತಿಗೆ ಬಡಿಗೆ ಮತ್ತು ಪೈಪ್‌ಗಳಿಂದ ಮನಬಂದಂತೆ ಥಳಿಸುತ್ತಿರುವ ದೃಶ್ಯ ವಿಡಿಯೊದಲ್ಲಿ ಇದೆ.

'ವಿಡಿಯೊವನ್ನು ಮೋತಿನಗರ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುವ ಧರ್ಮ ಕಂಟಾ ಪ್ರದೇಶದಲ್ಲಿ ಚಿತ್ರೀಕರಿಸಲಾಗಿದೆ ಎಂದು ಪ್ರಾಥಮಿಕ ತನಿಖೆ ವೇಳೆ ತಿಳಿದುಬಂದಿದೆ. ಎಫ್‌ಐಆರ್ ದಾಖಲಾಗಿದ್ದು, ಆರೋಪಿಗಳ ಪತ್ತೆಗೆ ಪೊಲೀಸರು ತನಿಖೆ ಆರಂಭಿಸಿದ್ದಾರೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಅಭಿಷೇಕ್ ತಿವಾರಿ ತಿಳಿಸಿದ್ದಾರೆ.

ಶಿಫಾರಸಿಲ್ಲದೇ ಮೀಸಲು ರದ್ದು

ಒಂದನೇ ಪುಟದಿಂದ...

'ಮುಸ್ಲಿಂ ಮೀಸಲಾತಿ ರದ್ದು ವಿಚಾರ ಇದೀಗ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ಸುಪ್ರೀಂ ಕೋರ್ಟ್‌ನಲ್ಲಿ ನಾವೂ (ಆಯೋಗ) ಪ್ರತಿವಾದಿಗಳು. ಹೀಗಾಗಿ, ಈ ಬಗ್ಗೆ ನಮ್ಮ ಅಭಿಪ್ರಾಯವನ್ನು ತಿಳಿಸಲಿದ್ದೇವೆ' ಎಂದು ಜಯಪ್ರಕಾಶ್ ಹೆಗ್ಡೆ ಹೇಳಿದರು.

'ಪ್ರವರ್ಗ 2ಎಗೆ ಸೇರಿಸಬೇಕೆಂಬ ಪಂಚಮಸಾಲಿ ಸಮುದಾಯದ ಬೇಡಿಕೆ ವಿಚಾರವಾಗಿ ಆಯೋಗದಿಂದ ಹಿಂದಿನ ಸರ್ಕಾರ ವರದಿ ಕೇಳಿತ್ತು. ಮಧ್ಯಂತರ ವರದಿಯನ್ನಷ್ಟೆ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಈ ವರದಿಯಲ್ಲಿ ಮುಸ್ಲಿಂ ಸಮುದಾಯಕ್ಕೆ ಸಂಬಂಧಿಸಿದ ಯಾವುದೇ ವಿಚಾರದ ಪ್ರಸ್ತಾವ ಇಲ್ಲ. ಅದರಲ್ಲಿ ಮುಸ್ಲಿಂ ಮೀಸಲಾತಿ ರದ್ದು ವಿಷಯವೂ ಇರಲಿಲ್ಲ. ರಾಜ್ಯದಲ್ಲಿರುವ ಮುಸ್ಲಿಂ ಸಮುದಾಯದ ಸ್ಥಿತಿಗತಿಯ ಕುರಿತಂತೆ ಆಯೋಗ ಯಾವುದೇ ಸಮೀಕ್ಷೆ ಮಾಡಿಲ್ಲ' ಎಂದು ಸ್ಪಷ್ಟಪಡಿಸಿದರು.

'ಪಂಚಮಸಾಲಿ ಸಮುದಾಯದ ಬೇಡಿಕೆ ಕುರಿತಂತೆ ಅಧ್ಯಯನ ನಡೆಸಿ ಆಯೋಗವು ಸರ್ಕಾರಕ್ಕೆ ಸಲ್ಲಿಸಿರುವ ಮಧ್ಯಂತರ ವರದಿಯು ಈಗ ಸಾರ್ವಜನಿಕ ದಾಖಲೆಯಾಗಿದೆ. ನಾವು ಆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದೆವು. ಸರ್ಕಾರ ಅದನ್ನು ಮುಚ್ಚಿದ ಲಕೋಟೆಯಲ್ಲಿ ಹೈಕೋರ್ಟ್‌ಗೆ ನೀಡಿತ್ತು.

ಈ ಮಧ್ಯೆ, ಸುಪ್ರೀಂ ಕೋರ್ಟ್ ಆದೇಶವೊಂದನ್ನು ಮಾಡಿ, ಮುಚ್ಚಿದ ಲಕೋಟೆಯಲ್ಲಿ ಯಾವುದೇ ಮಾಹಿತಿ ನೀಡುವ ವ್ಯವಸ್ಥೆ ಹೋಗಬೇಕು ಎಂದು ಹೇಳಿದೆ. ಹೀಗಾಗಿ, ಆ ವರದಿಯನ್ನು ಅರ್ಜಿದಾರರು ಮತ್ತು ಸಂಬಂಧಿಸಿದ ಎಲ್ಲರಿಗೂ ನೀಡುವಂತೆ ಹೈಕೋರ್ಟ್ ಹೇಳಿದೆ. ಪಂಚಮಸಾಲಿ ಸಮುದಾಯದ ಬೇಡಿಕೆಯ ಕುರಿತಂತೆ ಅಂತಿಮ ವರದಿ ಬಂದ ಬಳಿಕವಷ್ಟೆ ಯಾವುದೇ ತೀರ್ಮಾನ ತೆಗೆದುಕೊಳ್ಳಬೇಕು. ಮಧ್ಯಂತರ ವರದಿಯ ಆಧಾರದಲ್ಲಿ ಯಾವುದೇ ತೀರ್ಮಾನ ತೆಗೆದುಕೊಳ್ಳದಂತೆಯೂ ನಾವು (ಆಯೋಗ) ತಿಳಿಸಿದ್ದೆವು' ಎಂದೂ ಅವರು ವಿವರಿಸಿದರು.

ರಾಜಕೀಯ ಲಾಭಕ್ಕೆ ಯುಸಿಸಿ ದಾಳ: ಪೈಲಟ್

ನವದೆಹಲಿ (ಪಿಟಿಐ): ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಗೆ ಇಂಗಿತ ವ್ಯಕ್ತಪಡಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರ ನಡೆಗೆ ಕಾಂಗ್ರೆಸ್ ಮುಖಂಡ ಸಚಿನ್ ಪೈಲಟ್ ಅವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.




'ದೇಶದ ಜ್ವಲಂತ ಸಮಸ್ಯೆಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯುವುದಕ್ಕಾಗಿ ಬಿಜೆಪಿಯು ಗಾಳಿಪಟ ಹಾರಿಸುವ ತಂತ್ರಕ್ಕೆ ಜೋತುಬಿದ್ದಿದೆ. ಆದರೆ, ನಾಗರಿಕ ಸಂಹಿತೆಯ ಪ್ರಸ್ತಾವಕ್ಕೆ ಇನ್ನೂ ಸ್ಪಷ್ಟವಾದ ಮೂರ್ತರೂಪವೇ ಸಿಕ್ಕಿಲ್ಲ. ಜನರನ್ನು ದಿಕ್ಕುತಪ್ಪಿಸಲು ಅವರತ್ತ 'ಗೂಗ್ಲಿ ಎಸೆತ'ಕ್ಕೆ ಮುಂದಾಗಿದೆ' ಎಂದು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಸಂಹಿತೆಯ ಜಾರಿ ಸಂಬಂಧ ಸಂಸದೀಯ ಸ್ಥಾಯಿ ಸಮಿತಿ ಅಥವಾ ಸಂಸತ್‌ನಲ್ಲಿ ಇನ್ನೂ ಸ್ಪಷ್ಟ ನಿರ್ಧಾರವನ್ನೇ ಕೈಗೊಂಡಿಲ್ಲ. ಈ ವಿಷಯವನ್ನು ತನ್ನ ರಾಜಕೀಯ ಲಾಭಕ್ಕಾಗಿ ದಾಳವಾಗಿಸಿಕೊಂಡಿದೆ ಎಂದು ಟೀಕಿಸಿದ್ದಾರೆ.

ಗೋಳವಲಕರ್ ಹೇಳಿಕೆ ಉಲ್ಲೇಖಿಸಿ ಟ್ವೀಟ್

ದಿಗ್ವಿಜಯ್ ವಿರುದ್ಧ ಎಫ್‌ಐಆರ್

ಭೋಪಾಲ್/ಇಂದೋರ್ (ಪಿಟಿಐ): ಆರ್‌ಎಸ್‌ಎಸ್‌ನ ಮಾಜಿ ಮುಖ್ಯಸ್ಥ ಎಂ.ಎಸ್. ಗೋಳವಲಕರ್ ಅವರ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಂಡ ಆರೋಪದ ಮೇಲೆ ಮಧ್ಯಪ್ರದೇಶದ ಕಾಂಗ್ರೆಸ್ ನಾಯಕ ದಿಗ್ವಿಜಯ್ ಸಿಂಗ್ ವಿರುದ್ಧ ಭಾನುವಾರ ಎಫ್‌ಐಆರ್ ದಾಖಲಾಗಿದೆ.



ಆರ್‌ಎಸ್‌ಎಸ್ ಕಾರ್ಯಕರ್ತ ರಾಜೇಶ್ ಜೋಷಿ ಎಂಬವರು ಈ ದೂರು ನೀಡಿದ್ದಾರೆ. ಇದರನ್ವಯ ಐಪಿಸಿ ಸೆಕ್ಷನ್ 153ಎ (ಧಾರ್ಮಿಕ, ಜನಾಂಗೀಯ, ಹುಟ್ಟಿದ ಸ್ಥಳ, ಭಾಷೆಯ ಹಿನ್ನೆಲೆಯಲ್ಲಿ ಭಿನ್ನ ಗುಂಪುಗಳ ನಡುವೆ ದ್ವೇಷ ಹರಡುವುದು), 469 (ಗೌರವ ಹಾಳು ಮಾಡಲು ನಕಲು ಮಾಡುವ ಉದ್ದೇಶ), 500 (ಮಾನಹಾನಿ) ಹಾಗೂ 505ರ (ಜನರನ್ನು ದಾರಿ ತಪ್ಪಿಸುವ ಉದ್ದೇಶ) ಅಡಿ ಪ್ರಕರಣ ದಾಖಲಿಸಲಾಗಿದೆ.

'ಸುಳ್ಳು ಪೋಸ್ಟ್‌ನ ಮೂಲಕ ದಲಿತರು, ಹಿಂದುಳಿದವರು, ಮುಸ್ಲಿಮರ ನಡುವೆ ಸಂಘರ್ಷ ಸೃಷ್ಟಿಸಲು ಯತ್ನಿಸಲಾಗುತ್ತಿದೆ' ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಪೋಸ್ಟ್‌ನಲ್ಲಿ ಏನಿದೆ?: 'ದಲಿತರು, ಹಿಂದುಳಿದ ವರ್ಗದವರು ಮತ್ತು ಮುಸ್ಲಿಂ ಸಮುದಾಯಕ್ಕೆ ಸಮಾನ ಹಕ್ಕುಗಳನ್ನು ನೀಡುವುದಾದರೆ ನಾನು ಬ್ರಿಟಿಷರ ಆಡಳಿತದಲ್ಲಿಯೇ ಬದುಕಲು ಇಚ್ಛಿಸುತ್ತೇನೆ' ಎಂದು ಗೋಳವಲಕರ್ ಹೇಳಿದ್ದರು ಎನ್ನಲಾದ ಹೇಳಿಕೆಯನ್ನು ದಿಗ್ವಿಜಯ್ ಸಿಂಗ್ ಟ್ವೀಟ್ ಮಾಡಿದ್ದರು.

ಮುಖ್ಯಮಂತ್ರಿ ಖಂಡನೆ: ಇದಕ್ಕೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್, 'ಗೋಳವಲಕರ್ ಬಗ್ಗೆ ಸುಳ್ಳು ಸಂದೇಶ ಹರಡಿ ಸಮಾಜದಲ್ಲಿ ದ್ವೇಷದ ವಾತಾವರಣ ಸೃಷ್ಟಿಸಲು ಕಾಂಗ್ರೆಸ್ ನಾಯಕ ಹುನ್ನಾರ ನಡೆಸಿದ್ದಾರೆ' ಎಂದು ಟೀಕಿಸಿದ್ದಾರೆ.

ಇಂದೋರ್ ಪೊಲೀಸ್ ಆಯುಕ್ತ ಮಕರಂದ್ ದೇವುಸ್ಕರ್ ಸುದ್ದಿಗಾರರೊಂದಿಗೆ ಮಾತನಾಡಿ, 'ಗೋಳವಲಕರ್ ಬಗ್ಗೆ ಅವಮಾನಕರವಾಗಿ ಪೋಸ್ಟ್ ಹಂಚಿಕೊಳ್ಳಲಾಗಿದೆ ಎಂಬ ದೂರಿನ ಮೇರೆಗೆ ದಿಗ್ವಿಜಯ್ ಸಿಂಗ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ತನಿಖೆ ನಡೆಸಿ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ತಿಳಿಸಿದರು.

ಹಣೆಗೆ ತಿಲಕ; ಸಾಮರಸ್ಯ ಕಾಪಾಡಿ

ಇಂದೋರ್, ಮಧ್ಯಪ್ರದೇಶ (ಪಿಟಿಐ): ತಿಲಕವಿಟ್ಟುಕೊಂಡಿದ್ದ ವಿದ್ಯಾರ್ಥಿಗೆ ತರಗತಿ ಪ್ರವೇಶ ನಿರಾಕರಿಸಿದ್ದ ಇಲ್ಲಿನ ಖಾಸಗಿ ಶಾಲೆಯೊಂದಕ್ಕೆ, 'ಧಾರ್ಮಿಕ ಸಾಮರಸ್ಯ ಕಾಪಾಡಿಕೊಳ್ಳಿ' ಎಂದು ಶಿಕ್ಷಣ ಇಲಾಖೆ ಸೂಚಿಸಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಶ್ರೀ ಬಾಲ ವಿಜ್ಞಾನ ಶಿಶು ವಿಹಾರ ಹೈಯರ್ ಸೆಕೆಂಡರಿ ಸ್ಕೂಲ್ ಮುಂಭಾಗ ನಿಂತಿರುವ ವಿದ್ಯಾರ್ಥಿ, 'ಹಣೆಗೆ ತಿಲಕವಿಟ್ಟುಕೊಂಡಿದ್ದರಿಂದ ಶಾಲೆಯೊಳಗೆ ಪ್ರವೇಶ ನೀಡಿಲ್ಲ. ಮತ್ತೊಮ್ಮೆ ಇದು ಪುನರಾವರ್ತನೆಯಾದರೆ ವರ್ಗಾವಣೆ ಪತ್ರ (ಟಿ.ಸಿ) ಕೊಡಲಾಗುವುದು ಎಂದು ಶಾಲಾ ಆಡಳಿತ ಮಂಡಳಿ ತಿಳಿಸಿದೆ' ಎಂದು ಹೇಳಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ಹರಿದಾಡಿದೆ.

ಪಶ್ಚಿಮ ಬಂಗಾಳ: ಚುನಾವಣಾ ಅಕ್ರಮ ಖಂಡಿಸಿ ವಿವಿಧೆಡೆ ಪ್ರತಿಭಟನೆ

ಹಿಂಸಾಚಾರ: ಮೃತರ ಸಂಖ್ಯೆ 15ಕ್ಕೆ ಏರಿಕೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಪಂಚಾಯಿತಿ ಚುನಾವಣೆ ವೇಳೆ ನಡೆದ ಹಿಂಸಾಚಾರದಲ್ಲಿ ಮೃತಪಟ್ಟವರ ಸಂಖ್ಯೆ 15ಕ್ಕೆ ಏರಿಕೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಕ್ಷಿಣ 24 ಪರಗಣ ಜಿಲ್ಲೆಯ ಪಶ್ಚಿಮ ಗಬ್ಟಾಲಾದ ಮತದಾನ ಕೇಂದ್ರವೊಂದರ ಬಳಿ ಅಬು ಸಲೀಂ ಖಾನ್ ಎಂಬವರ ಮೃತದೇಹ ಭಾನುವಾರ ಪತ್ತೆಯಾಗಿದೆ ಮತ್ತು ಗಲಭೆಯಲ್ಲಿ ಗಾಯಗೊಂಡಿದ್ದ ಇತರ ಇಬ್ಬರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ ಎಂದೂ ವಿವರಿಸಿದ್ದಾರೆ.

ಅಬು ಸಲೀಂ ಖಾನ್ ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಕಾರ್ಯಕರ್ತರಾಗಿದ್ದರು ಎಂದು ಸ್ಥಳೀಯರು ತಿಳಿಸಿದ್ದಾರೆ. ಮೃತದೇಹ ಪತ್ತೆಯಾದ ಬಳಿಕ ಈ ಪ್ರದೇಶದಲ್ಲಿ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಹಿಂಸಾಚಾರದ ವೇಳೆ ಗಾಯಗೊಂಡಿದ್ದ ಟಿಎಂಸಿ ಕಾರ್ಯಕರ್ತ ಅಜರ್ ಲಷ್ಕರ್ ಎಂಬವರು ಕೋಲ್ಕತ್ತದ ಆಸ್ಪತ್ರೆಯಲ್ಲಿ ಹಾಗೂ ಮಾಲ್ಡಾ ಜಿಲ್ಲೆಯ ಬೈಶಾನ್‌ನಗರದಲ್ಲಿ ಇರಿತಕ್ಕೊಳಗಾಗಿದ್ದ ಟಿಎಂಸಿ ಕಾರ್ಯಕರ್ತ ಮೋತಿಯುರ್ ರೆಹಮಾನ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಕಾರ್ಯಕರ್ತರು ಮತಪೆಟ್ಟಿಗೆಗಳಲ್ಲಿ ಅಕ್ರಮ ನಡೆಸುತ್ತಿದ್ದುದನ್ನು ತಡೆಯಲು ಮುಂದಾಗಿದ್ದ ವೇಳೆ ಮೋತಿಯುರ್ ರೆಹಮಾನ್ ಇರಿತಕ್ಕೊಳಗಾಗಿದ್ದರು ಎಂದು ಟಿಎಂಸಿ ಆರೋಪಿಸಿದೆ. ಈ ಆರೋಪವನ್ನು ಕಾಂಗ್ರೆಸ್ ತಳ್ಳಿ ಹಾಕಿದೆ.

ಹಿಂಸಾಚಾರದಲ್ಲಿ ಒಂಬತ್ತು ಮಂದಿ ಕಾರ್ಯಕರ್ತರು ಮೃತರಾಗಿದ್ದಾರೆ ಎಂದು ಟಿಎಂಸಿ ಹೇಳಿದೆ. ತನ್ನ ಮೂವರು ಕಾರ್ಯಕರ್ತರು ಮೃತಪಟ್ಟಿದ್ದಾರೆ ಎಂದು ಕಾಂಗ್ರೆಸ್ ತಿಳಿಸಿದೆ.

ತಮ್ಮ ಪಕ್ಷದ ಇಬ್ಬರು ಕಾರ್ಯಕರ್ತರು ಮೃತಪಟ್ಟಿದ್ದಾರೆ ಎಂದು ಬಿಜೆಪಿ ಮುಖಂಡರು ಹೇಳಿದ್ದಾರೆ. ಸಿಪಿಎಂನ ಇಬ್ಬರು ಕಾರ್ಯಕರ್ತರು ಕೂಡ ಮೃತಪಟ್ಟಿರುವುದಾಗಿ ಆ ಪಕ್ಷ ಹೇಳಿದೆ. ಆದರೆ ಈ ಕುರಿತು ನಿಖರ ಮಾಹಿತಿ ಲಭ್ಯವಾಗಿಲ್ಲ.

ಹಿಂಸಾಚಾರದಲ್ಲಿ ಮೃತಪಟ್ಟವರ ಕುರಿತು 24 ಗಂಟೆಗಳೊಳಗೆ ವರದಿ ನೀಡುವಂತೆ ರಾಜ್ಯ ಚುನಾವಣಾ ಆಯೋಗವು ಜಿಲ್ಲಾಧಿಕಾರಿಗಳಿಗೆ ಸೂಚಿಸಿದೆ.

ಕೂಚ್‌ಬೆಹರ್ ಜಿಲ್ಲೆಯ ದಿನ್ಹಾತಾದ 32 ಮತಗಟ್ಟೆಗಳಲ್ಲಿ ಮರು ಮತದಾನ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯಪಾಲರು ದೆಹಲಿಗೆ: ಪಶ್ಚಿಮ ಬಂಗಾಳದ ರಾಜ್ಯಪಾಲ ಸಿ.ವಿ. ಆನಂದ ಬೋಸ್ ಅವರು ಭಾನುವಾರ ದೆಹಲಿಗೆ ತೆರಳಿದ್ದು, ಪಂಚಾಯಿತಿ ಚುನಾವಣೆ ವೇಳೆ ನಡೆದ ಹಿಂಸಾಚಾರದ ಕುರಿತು ಕೇಂದ್ರ ಗೃಹಸಚಿವ ಅಮಿತ್ ಶಾ ಅವರಿಗೆ ವರದಿ ಸಲ್ಲಿಸುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೆದ್ದಾರಿ ತಡೆ

ಚುನಾವಣೆ ವೇಳೆ ನಡೆದ ಹಿಂಸಾಚಾರ ಮತ್ತು ಅಕ್ರಮಗಳನ್ನು ಖಂಡಿಸಿ ಪಶ್ಚಿಮ ಬಂಗಾಳದ ವಿವಿಧೆಡೆ ಭಾನುವಾರ ಪ್ರತಿಭಟನೆಗಳು ನಡೆದಿವೆ.

ಪೂರ್ವ ಮೇದಿನಿಪುರ ಜಿಲ್ಲೆಯ ನಂದಕುಮಾರ್ ಗ್ರಾಮದಲ್ಲಿ ಬಿಜೆಪಿ ಕಾರ್ಯಕರ್ತರು ಹಲ್ದಿಯಾ–ಮೆಚೆಡಾ ರಾಜ್ಯ ಹೆದ್ದಾರಿಯಲ್ಲಿ ವಾಹನ ಸಂಚಾರಕ್ಕೆ ತಡೆಯುಂಟು ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಮಾಲ್ಡಾದ ರಥ್‌ಬರಿ ಪ್ರದೇಶದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನ ಸಂಚಾರವನ್ನು ತಡೆದಿದ್ದಾರೆ.

'ಹಿಂಸಾಚಾರ ಖಂಡಿಸಿ ನಾವು ವಿವಿಧೆಡೆ ಪ್ರತಿಭಟನೆ ನಡೆಸಿದ್ದೇವೆ ಮತ್ತು ನ್ಯಾಯಾಲಯದ ಮೊರೆ ಹೋಗಲಿದ್ದೇವೆ' ಎಂದು ಕಾಂಗ್ರೆಸ್ ಸಂಸದ ಅಬು ಹಸೇಮ್ ಖಾನ್ ಚೌಧರಿ ಹೇಳಿದ್ದಾರೆ.


ಕೋಲ್ಕತ್ತದ ಚುನಾವಣಾ ಆಯೋಗದ ಕಚೇರಿ ಮುಂಭಾಗದಲ್ಲಿ ಬಿಜೆಪಿ ಕಾರ್ಯಕರ್ತರು ಭಾನುವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಎಂತಹ ಕಟು ಪ್ರಸಂಗ ಬಂದರೂ ಎದೆಗುಂದಬಾರದು. ಇದೇ ಸುಖಿಯಾಗಿ ಇರುವುದರ ರಹಸ್ಯ.

-ದ.ರಾ.ಬೇಂದ್ರೆ

ದೌರ್ಜನ್ಯಕ್ಕೆ ಪ್ರತಿಯಾಗಿ ದೌರ್ಜನ್ಯ ಅರಾಜಕತೆಗೆ ದಾರಿ ಮಾಡುವ ಕ್ರಮ

ಕಾನೂನಿಗೆ ಅನುಗುಣವಾಗಿ ಆಡಳಿತ ವ್ಯವಸ್ಥೆ ಮುನ್ನಡೆಯಬೇಕು, ಜನ ನಾಗರಿಕವಾಗಿ ನಡೆದುಕೊಳ್ಳಬೇಕು ಎಂಬ ತತ್ವವನ್ನು ಒಪ್ಪಿಕೊಂಡ ಸಮಾಜವು, ಒಂದು ಅಕ್ರಮವನ್ನು ಇನ್ನೊಂದು ಅಕ್ರಮದ ಮೂಲಕ ಸರಿಪಡಿಸಲು ಮುಂದಾಗುವುದಿಲ್ಲ. ಹಾಗೆಯೇ ಒಂದು ದೌರ್ಜನ್ಯಕ್ಕೆ ಇನ್ನೊಂದು ದೌರ್ಜನ್ಯದ ಮೂಲಕ ಉತ್ತರ ನೀಡಲು ಮುಂದಾಗುವುದಿಲ್ಲ. ಆದರೆ, ಕೆಲವು ಸಂದರ್ಭಗಳಲ್ಲಿ ಕಾನೂನಿಗೆ ಅನುಗುಣವಾದ ಹಾಗೂ ನಾಗರಿಕವಾದ ವರ್ತನೆಗಿಂತ ಮೃಗೀಯವಾಗಿ ವರ್ತಿಸುವುದು ಹೆಚ್ಚು ಸರಿ ಎಂದು ಕೆಲವರಿಗೆ ಅನ್ನಿಸಿಬಿಡಬಹುದು. ಆಗ ಅಂಥವರ ಆಲೋಚನೆಗಳು ಹಾಗೂ ನಡೆಗಳು ತೀರಾ ಒರಟಾದ ವೈಯಕ್ತಿಕ, ಸಾಮಾಜಿಕ ಅಥವಾ ರಾಜಕೀಯ ಒತ್ತಡಗಳಿಂದ ಪ್ರಚೋದಿತವಾಗುತ್ತವೆ. ಮಧ್ಯಪ್ರದೇಶದ ಸೀಧೀ ಜಿಲ್ಲೆಯಲ್ಲಿ ಪ್ರವೇಶ್ ಶುಕ್ಲಾ ಎಂಬ ವ್ಯಕ್ತಿಯೊಬ್ಬ ಬುಡಕಟ್ಟು ಸಮುದಾಯಕ್ಕೆ ಸೇರಿದವರೊಬ್ಬರ ಮೇಲೆ ಮೂತ್ರ ಮಾಡಿದ. ಅತ್ಯಂತ ಅಮಾನವೀಯ ಕೃತ್ಯ ಇದು. ಈ ಕೃತ್ಯದ ವಿಡಿಯೊ ನೋಡಿದವರು ಇದನ್ನು ತೀವ್ರವಾಗಿ ಖಂಡಿಸಿದರು. ರಾಜ್ಯ ಸರ್ಕಾರವು ಶುಕ್ಲಾನನ್ನು ಬಂಧಿಸಿತು. ರಾಷ್ಟ್ರೀಯ ಭದ್ರತಾ ಕಾಯ್ದೆ (ಎನ್‌ಎಸ್‌ಎ) ಹಾಗೂ ಭಾರತೀಯ ದಂಡ ಸಂಹಿತೆಯ (ಐಪಿಸಿ) ಅಡಿಯಲ್ಲಿ ಆತನ ವಿರುದ್ಧ ಪ್ರಕರಣ ದಾಖಲಿಸಿತು. ಅವನ ಮನೆಗೆ ಬುಲ್ಡೋಜರ್ ಕಳಿಸಿತು, ಮನೆಯ ಒಂದು ಭಾಗವನ್ನು ನೆಲಸಮ ಮಾಡಲಾಯಿತು.




ಒಬ್ಬ ವ್ಯಕ್ತಿಯು ಎಸಗಿರುವ ಕೃತ್ಯ ಅದೆಷ್ಟೇ ಕೆಟ್ಟದ್ದಾಗಿರಲಿ, ಕಾನೂನಿನ ಪ್ರಕ್ರಿಯೆ ಹೊರತುಪಡಿಸಿ ಬೇರೆ ಯಾವ ಮಾರ್ಗದ ಮೂಲಕವೂ ಆತನಿಗೆ ಶಿಕ್ಷೆ ವಿಧಿಸುವ ಅಧಿಕಾರವು ಸರ್ಕಾರಕ್ಕೆ ಇರುವುದಿಲ್ಲ

ದೌರ್ಜನ್ಯಕ್ಕೆ ಗುರಿಯಾದ ವ್ಯಕ್ತಿಗೆ ವಿಳಂಬವಿಲ್ಲದೆ ನ್ಯಾಯ ಕೊಡಿಸಿಯಾಗಿದೆ ಎಂದು ಅಲ್ಲಿನ ರಾಜ್ಯ ಸರ್ಕಾರ ಹೇಳಿಕೊಳ್ಳಬಹುದು. ಆದರೆ ಇಲ್ಲಿ ಮೂತ್ರ ಮಾಡಿದ ವ್ಯಕ್ತಿಯ ಮೇಲೆ ಎನ್‌ಎಸ್‌ಎ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದು ಹೇಗೆ? ಈ ಪ್ರಕರಣದಲ್ಲಿ ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಅಂಶ ಇಲ್ಲ. ಸರ್ಕಾರವು ತಾನು ಕಠಿಣ ಕ್ರಮವೊಂದನ್ನು ತೆಗೆದುಕೊಳ್ಳುತ್ತಿದ್ದೇನೆ ಎಂಬ ಸಂದೇಶ ರವಾನಿಸಲು ಈ ರೀತಿ ಮಾಡಿರಬಹುದು. ಮಧ್ಯಪ್ರದೇಶದಲ್ಲಿ ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿರುವ ಕಾರಣ, ಈ ಸಂದೇಶ ರವಾನಿಸುವ ಉದ್ದೇಶ ಸರ್ಕಾರಕ್ಕೆ ಇದ್ದಿರಬಹುದು. ಬುಡಕಟ್ಟು ಸಮುದಾಯದ ವ್ಯಕ್ತಿಯ ಮೇಲೆ ಶುಕ್ಲಾ ಮೂತ್ರ ಮಾಡಿದ್ದು ಬಿಜೆಪಿಗೆ ಚುನಾವಣೆಯಲ್ಲಿ ಪೆಟ್ಟು ಕೊಡುವ ಸಾಧ್ಯತೆ ಇದೆ ಎನ್ನಲಾಗಿದೆ. ಮೂತ್ರ ಮಾಡಿದ ವ್ಯಕ್ತಿಯು ಬಿಜೆಪಿ ಜೊತೆ ನಂಟು ಹೊಂದಿದ್ದ ಎಂದು ವರದಿಯಾಗಿದೆ. ಆದರೆ ಅವನ ಮನೆಯ ಒಂದು ಭಾಗವನ್ನು ಬುಲ್ಡೋಜರ್ ಬಳಸಿ ನೆಲಸಮ ಮಾಡಿದ್ದು ತಪ್ಪು, ಅಕ್ರಮ. ಮನೆಯ ಒಂದು ಭಾಗವನ್ನು ನೆಲಸಮ ಮಾಡಿದ ಕೃತ್ಯವೇ ಒಂದು ದೌರ್ಜನ್ಯ. ಆ ಮನೆಯು ಆರೋಪಿಯ ತಂದೆ ತಾಯಿಗೆ ಸೇರಿದ್ದು. ಶುಕ್ಲಾ ಎಸಗಿರುವ ಕೃತ್ಯ ಅದೆಷ್ಟೇ ಕೆಟ್ಟದ್ದಾಗಿರಲಿ, ಕಾನೂನಿನ ಪ್ರಕ್ರಿಯೆ ಹೊರತುಪಡಿಸಿ ಬೇರೆ ಯಾವ ಮಾರ್ಗದ ಮೂಲಕವೂ ಆತನಿಗೆ ಶಿಕ್ಷೆ ವಿಧಿಸುವ ಅಧಿಕಾರವು ಸರ್ಕಾರಕ್ಕೆ ಇಲ್ಲ. ಆರೋಪಿಗಳ ಮನೆಗೆ ಬುಲ್ಡೋಜರ್ ನುಗ್ಗಿಸುವುದು ಉತ್ತರಪ್ರದೇಶದ ಯೋಗಿ ಆದಿತ್ಯನಾಥ ನೇತೃತ್ವದ ಸರ್ಕಾರವು ಜಾರಿಗೆ ತಂದಿರುವ ಪ್ರತೀಕಾರದ ಒಂದು ಮಾರ್ಗ. ಇದನ್ನು ಉತ್ತರಪ್ರದೇಶ ರಾಜ್ಯದಲ್ಲಿ ಅಲ್ಪಸಂಖ್ಯಾತ ಸಮುದಾಯದವರ ಮೇಲೆ ಹೆಚ್ಚಾಗಿ ಪ್ರಯೋಗಿಸಲಾಗುತ್ತಿದೆ. ಕಾನೂನಿಗೆ ಮರ್ಯಾದೆ ಕೊಡುವಲ್ಲಿ ಇಂತಹ ಅಸ್ತ್ರಗಳಿಗೆ ಅವಕಾಶ ಇರಬಾರದು. ಆದರೆ, ಉತ್ತರಪ್ರದೇಶ ಮತ್ತು ಮಧ್ಯಪ್ರದೇಶದಲ್ಲಿ ಇದು ವ್ಯವಸ್ಥೆಯ ಭಾಗವಾಗಿಬಿಟ್ಟಿದೆ.

ಹೇಯ ಅಪರಾಧ ಮಾಡಿದ ವ್ಯಕ್ತಿಗೂ ಕಾನೂನಿನ ಪ್ರಕ್ರಿಯೆಗಳಿಗೆ ಅನುಗುಣವಾಗಿ ಶಿಕ್ಷೆ ತೀರ್ಮಾನವಾಗಬೇಕು. ಆದರೆ, ಶುಕ್ಲಾ ವಿರುದ್ಧ ಕ್ರಮ ಕೈಗೊಂಡ ಪ್ರಕರಣದಲ್ಲಿ ಸರ್ಕಾರವು ಚುನಾವಣೆಗಳ ಮೇಲೆ ಕಣ್ಣಿಟ್ಟು, ಮತದಾರರನ್ನು ಮೆಚ್ಚಿಸುವ ಕೆಲಸ ಮಾಡಿದೆ. ಸರ್ಕಾರಗಳು ತಮ್ಮ ಮನಸ್ಸಿಗೆ ತೋಚಿದಂತೆ ಇಂತಹ ಕ್ರಮಗಳನ್ನು ಜರುಗಿಸುವುದು ನ್ಯಾಯಾಂಗದ ಪ್ರಕ್ರಿಯೆಯನ್ನು ಅಣಕಿಸುವುದಕ್ಕೆ ಸಮ. ಕಾನೂನಿನ ಪಾಲನೆ ಮಾಡಬೇಕಿರುವುದು ಸರ್ಕಾರಗಳ ಕರ್ತವ್ಯ. ಅದನ್ನು ಸರಿಯಾಗಿ ಮಾಡದಿರುವುದು ಪ್ರಜೆಗಳ ಹಕ್ಕುಗಳನ್ನು ಕಿತ್ತುಕೊಳ್ಳುವುದಕ್ಕೆ ಸಮ. ಅಲ್ಲದೆ, ಅದು ಮುಂದೆ ಅರಾಜಕತೆಗೆ ನಾಂದಿಯಾಗುತ್ತದೆ. ಅಪರಾಧ ಹಾಗೂ ಶಿಕ್ಷೆಯ ವಿಚಾರದಲ್ಲಿ ಮಧ್ಯ ಯುಗದಲ್ಲಿ ಜಾರಿಯಲ್ಲಿ ಇದ್ದಂತಹ ಆಚರಣೆಗಳು ದೇಶದಲ್ಲಿ ಎಲ್ಲಿಯೂ ಮರುಕಳಿಸಬಾರದು. ಹಾಗೆ ಮಾಡಿದಲ್ಲಿ ನಾಗರಿಕವಾದ ಹಾಗೂ ಸಂವಿಧಾನಕ್ಕೆ ಅನುಗುಣವಾದ ಜೀವನಕ್ರಮವನ್ನೇ ಬುಡಮೇಲು ಮಾಡಿದಂತೆ ಆಗುತ್ತದೆ. ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ದೌರ್ಜನ್ಯಕ್ಕೆ ಒಳಗಾದ ವ್ಯಕ್ತಿಯನ್ನು ಕರೆದು ಸಾಂತ್ವನ ಹೇಳಿದ್ದಾರೆ, ಪಾದ ತೊಳೆದಿದ್ದಾರೆ. ಆರೋಪಿಯು ಬಿಜೆಪಿ ಜೊತೆ ನಂಟು ಹೊಂದಿಲ್ಲದೇ ಇದ್ದಿದ್ದರೆ ಚೌಹಾಣ್ ಹೀಗೆ ಮಾಡುತ್ತಿದ್ದರೇ? ರಾಜಕಾರಣಿಗಳು ಚುನಾವಣಾ ಜೀವಿಗಳು; ತೋರಿಸಿಕೊಳ್ಳುವುದು ಅವರ ಒಂದು ಗುಣ.

ದಿನದ ಟ್ವೀಟ್

ನಿಷ್ಪಕ್ಷಪಾತ ತನಿಖೆ ನಡೆಯಲಿ




ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಹಿರೇಕೋಡಿ ಗ್ರಾಮದ, ಅಹಿಂಸೆ ಮತ್ತು ಶಾಂತಿಗೆ ಹೆಸರಾದ ಜೈನ ಮುನಿ ಕಾಮಕುಮಾರ ನಂದಿ ಮಹಾರಾಜರ ಹತ್ಯೆ ಅತ್ಯಂತ ಅಮಾನವೀಯ ಕೃತ್ಯವಾಗಿದ್ದು ಇದನ್ನು ಖಂಡಿಸುತ್ತೇನೆ. ಹತ್ಯೆಯ ಆರಂಭಿಕ ತನಿಖೆಯಲ್ಲಿ ಸಂಶಯ ಮೂಡಿದ್ದು, ಉನ್ನತ ಅಧಿಕಾರಿಗಳಿಂದ ನಿಷ್ಪಕ್ಷಪಾತ ತನಿಖೆ ನಡೆಸಿ ಮುಖ್ಯ ಅಪರಾಧಿಗಳನ್ನು ತಕ್ಷಣ ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು.

ಬಸವರಾಜ ಬೊಮ್ಮಾಯಿ, ಬಿಜೆಪಿ ಮುಖಂಡ

ಕಿಡಿನುಡಿ

ಸಹಕಾರಿ ಕ್ಷೇತ್ರ ಕೆಲವರ ಸ್ವತ್ತಾಗಿದೆ. ಅಲ್ಲೂ ಸ್ಥಳೀಯ ಸಂಸ್ಥೆಗಳ ಮಾದರಿಯಲ್ಲೇ ಸರ್ಕಾರ ಮೀಸಲಾತಿಯನ್ನು ಜಾರಿಗೊಳಿಸಬೇಕು.



ಎಚ್.ವಿಶ್ವನಾಥ್, ವಿಧಾನಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಶುಕ್ರವಾರ, 10-7-1998

• ದುರ್ಬಲರ ಮೀಸಲಾತಿ ಅಬಾಧಿತ: ಪ್ರಧಾನಿ

ನವದೆಹಲಿ, ಜುಲೈ 9– ದುರ್ಬಲ ವರ್ಗಗಳಿಗೆ ನೀಡಲಾಗುತ್ತಿರುವ ಮೀಸಲಾತಿ ಪದ್ಧತಿಯಲ್ಲಿ ಯಾವುದೇ ಬದಲಾವಣೆ ತರುವ ಉದ್ದೇಶ ಸರ್ಕಾರಕ್ಕಿಲ್ಲ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಸ್ಪಷ್ಟಪಡಿಸಿದರು.

ಮೀಸಲಾತಿಯನ್ನು ಪುನರ್‌ಪರಿಶೀಲಿಸಲಾಗುವುದು ಎಂಬ ಸಚಿವ ರಾಂ ಜೇಠ್ಮಲಾನಿ ಅವರ ಹೇಳಿಕೆ ಇಂದು ಸಂಸತ್‌ನ ಉಭಯ ಸದನಗಳಲ್ಲೂ ಭಾರಿ ಗದ್ದಲ ಸೃಷ್ಟಿಸಿದ ಹಿನ್ನೆಲೆಯಲ್ಲಿ ಅವರು ಈ ಸ್ಪಷ್ಟನೆ ನೀಡಿದರು.

ನಗರ ವ್ಯವಹಾರಗಳ ಖಾತೆ ಸಚಿವ ರಾಂ ಜೇಠ್ಮಲಾನಿ ಅವರು ನಿನ್ನೆ ಪತ್ರಿಕಾ ಸಂದರ್ಶನ ಕಾರ್ಯಕ್ರಮದಲ್ಲಿ, ಮೀಸಲಾತಿ ನೀತಿ ಪುನರ್ ವಿಮರ್ಶಿಸುವುದಾಗಿ ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಲೋಕಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿರೋಧಿ ನಾಯಕ ಶರದ್ ಪವಾರ್ ಆಕ್ಷೇಪ ವ್ಯಕ್ತಪಡಿಸಿದರು.

• ನೌಕರರ ಮುಷ್ಕರ: ದೇಶದಾದ್ಯಂತ ಅಂಚೆ ಸೇವೆ ಅಸ್ತವ್ಯಸ್ತ

ನವದೆಹಲಿ, ಜುಲೈ 9 (ಪಿಟಿಐ): ಹೆಚ್ಚಿನ ವೇತನ, ಅಧಿಕ ಬೋನಸ್ ಹಾಗೂ ಇತರ ಸೌಲಭ್ಯಗಳನ್ನು ನೀಡುವಂತೆ ಆಗ್ರಹಿಸಿ ಅಂಚೆ ಇಲಾಖೆಯ ಸುಮಾರು ಆರು ಲಕ್ಷ ನೌಕರರು ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿರುವುದರಿಂದ ದೇಶದಾದ್ಯಂತ ಅಂಚೆ ವ್ಯವಸ್ಥೆ ಅಸ್ತವ್ಯಸ್ತಗೊಂಡಿದೆ.

ಮುಷ್ಕರಕ್ಕೆ ಬಹುತೇಕ ಎಲ್ಲೆಡೆ ಉತ್ತೇಜಕ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ಎಫ್‌ಎನ್‌ಪಿಒ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಆರ್.ಎಲ್.ಭಟ್ಟಾಚಾರ್ಯ ಹೇಳಿದ್ದಾರೆ.

• ರಾಜ್ಯಸಭೆ ಉಪಾಧ್ಯಕ್ಷೆಯಾಗಿ ಹೆಪ್ತುಲ್ಲಾ ಆಯ್ಕೆ

ನವದೆಹಲಿ, ಜುಲೈ 9 (ಪಿಟಿಐ)– ಹಿರಿಯ ಕಾಂಗ್ರೆಸ್ ಸದಸ್ಯೆ ನಜ್ಮಾ ಹೆಪ್ತುಲ್ಲಾ ಅವರು ರಾಜ್ಯಸಭೆಯ ಉಪಾಧ್ಯಕ್ಷೆಯಾಗಿ ಇಂದು ಸರ್ವಾನುಮತದಿಂದ ಆಯ್ಕೆಯಾದರು.

50 ವರ್ಷಗಳ ಹಿಂದೆ

ಮಂಗಳವಾರ, 10-7-1973

• ವಿಜಯನಗರ ಉಕ್ಕು ಕಾರ್ಖಾನೆಗೆ ಬಾಲಾರಿಷ್ಟ; ಕುದುರೆಮುಖ ಭೂಗತ

ಬೆಂಗಳೂರು, ಜುಲೈ 9– ಮುಂದಿನ ದಶಕಗಳಲ್ಲಿ ರಾಜ್ಯದ ಕೈಗಾರಿಕೆ ಅಭಿವೃದ್ಧಿಯಲ್ಲಿ ಮೈಲುಗಲ್ಲುಗಳೆನಿಸಲಿರುವ ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳ ವೆಚ್ಚದ ವಿಜಯನಗರದ ಉಕ್ಕು ಕಾರ್ಖಾನೆ ಮತ್ತು ಕುದುರೆಮುಖ ಅದಿರು ಅಭಿವೃದ್ಧಿ ಯೋಜನೆಗಳಿಗೆ ಕೇಂದ್ರದಿಂದ ಅರ್ಧಚಂದ್ರದ ಸೂಚನೆ ಬಂದಿರುವುದು, ಇಲ್ಲಿ ಸರ್ಕಾರಿ ವಲಯಗಳಲ್ಲಿ ತೀವ್ರ ಕಳವಳ ಹಾಗೂ ಗಾಬರಿ ಮೂಡಿಸಿದೆ.

‘ಇದು ನಿಜಕ್ಕೂ ಕಳವಳಕಾರಿ ಬೆಳವಣಿಗೆ’ ಎಂದು ಇಲ್ಲಿ ಒಪ್ಪಿಕೊಂಡ ಕೈಗಾರಿಕೆ ಮಂತ್ರಿ ಎಸ್.ಎಂ. ಕೃಷ್ಣ ಅವರು, ನಾಳೆ ನಗರಕ್ಕೆ ಆಗಮಿಸಲಿರುವ ಮುಖ್ಯಮಂತ್ರಿಯವರೊಡನೆ ಮಾತನಾಡಿ, ಮುಂದಿನ ಚರ್ಚೆಗೆ ದೆಹಲಿಗೆ ಧಾವಿಸಲಿದ್ದಾರೆ.

• ಕೃಷ್ಣರಾಜ ಸಾಗರಕ್ಕೆ ಮತ್ತೆ 7 ಅಡಿ ನೀರು

ಮೈಸೂರು, ಜುಲೈ 9– ಕೃಷ್ಣರಾಜ ಸಾಗರ ಜಲಾಶಯಕ್ಕೆ ಕಳೆದ 24 ಗಂಟೆಗಳ ಅವಧಿಯಲ್ಲಿ ಮತ್ತೆ ಸುಮಾರು 7 ಅಡಿಗಳಷ್ಟು ನೀರು ಬಂದ ಫಲವಾಗಿ, ಇಂದು ಸಂಜೆ ಜಲಾಶಯದ ನೀರಿನ ಮಟ್ಟ 121 ಅಡಿಗಳನ್ನು ಮುಟ್ಟಿತು. ಜಲಾಶಯದೊಳಕ್ಕೆ ಸಂಜೆ 1,02,622 ಕ್ಯೂಸೆಕ್ ನೀರು ಬರುತ್ತಿತ್ತು.

ಜಲಾಶಯದ ಬಾಗಿಲುಗಳನ್ನು ತೆರೆಯಲಾಗುತ್ತಿದ್ದು, ಬನ್ನೂರು ಮತ್ತು ಟಿ. ನರಸೀಪುರದ ಬಳಿ ತಗ್ಗು ಪ್ರದೇಶಗಳಲ್ಲಿರುವ ಗ್ರಾಮಗಳ ಜನರನ್ನು ಈಗಾಗಲೇ ಎಚ್ಚರಿಸಲಾಗಿದೆ.

ಈ ಕುರಿತು ದೇಶದಾದ್ಯಂತ ವ್ಯಾಪಕ ಚರ್ಚೆ ನಡೆಯಬೇಕಾದ ಅಗತ್ಯ ಇದೆ

ನಾಗರಿಕ ಸಂಹಿತೆ: ತೊಡಕು, ಸವಾಲು



ವಿಶ್ಲೇಷಣೆ

ಸಿ.ಎನ್.ರಾಮಚಂದ್ರನ್

ಏಕರೂಪ ನಾಗರಿಕ ಸಂಹಿತೆ (ಯೂನಿಫಾರ್ಮ್ ಸಿವಿಲ್ ಕೋಡ್– ಯುಸಿಸಿ) ಕುರಿತು ಪರ, ವಿರೋಧದ ಚರ್ಚೆಗಳು ಇತ್ತೀಚೆಗೆ ದೇಶದಾದ್ಯಂತ ನಡೆಯುತ್ತಿವೆ. ಆದರೆ, ಭಾರತದಂತಹ ಬಹುಧರ್ಮೀಯ, ಬಹುಸಂಸ್ಕೃತಿಯ ರಾಷ್ಟ್ರದಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು ರೂಪಿಸುವಾಗ ಏಳುವ ಅನೇಕ ತೊಡಕುಗಳು ಹಾಗೂ ಸವಾಲುಗಳನ್ನು ಕುರಿತು ಹೆಚ್ಚಿನ ರೀತಿಯಲ್ಲಿ ಚರ್ಚೆಯಾಗುತ್ತಿಲ್ಲ ಎಂದು ತೋರುತ್ತದೆ.

ಏಕರೂಪ ನಾಗರಿಕ ಸಂಹಿತೆಯನ್ನು ರೂಪಿಸುವ ವಿಷಯವು ಸಂವಿಧಾನ ಸಭೆಯಲ್ಲಿ ಚರ್ಚೆಗೆ ಬಂದಾಗ, ಆ ವಿಧಿಯನ್ನು ಹಿಂದೂಗಳು ಹಾಗೂ ಮುಸ್ಲಿಮರು ಒಟ್ಟಿಗೇ ವಿರೋಧಿಸಿದ್ದರು. ಅವರ ನಿಲುವು ‘ಧಾರ್ಮಿಕ ವಿಷಯಗಳಲ್ಲಿ ಸರ್ಕಾರದ ಹಸ್ತಕ್ಷೇಪ ಇರಬಾರದು’ ಎಂಬುದಾಗಿತ್ತು. ಆದರೆ, ಕೆ.ಎಂ.ಮುನ್ಶಿ, ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಡಾ. ಬಿ.ಆರ್.ಅಂಬೇಡ್ಕರ್ ಅಂತಹವರ ಆಗ್ರಹದಿಂದ ಸಂವಿಧಾನದ 44ನೆಯ ವಿಧಿ ಅಂಗೀಕಾರಗೊಂಡರೂ ಅದು ‘ಮಾರ್ಗಸೂಚಿ ತತ್ವಗಳು’ (ಡೈರೆಕ್ಟಿವ್ ಪ್ರಿನ್ಸಿಪಲ್ಸ್) ಭಾಗದಲ್ಲಿ ಸೇರಿತು. ‘ಮಾರ್ಗಸೂಚಿ ತತ್ವ’ಗಳನ್ನು ಜಾರಿಗೆ ತರದಿರುವುದು ಅಸಾಂವಿಧಾನಿಕ ಎಂದು ನ್ಯಾಯಾಲಯಗಳ ಮೆಟ್ಟಿಲೇರಲು ಆಗುವುದಿಲ್ಲ. ಯುಸಿಸಿ ವಿಷಯದಲ್ಲಿ ನೆಹರೂ ಅವರ ನಿಲುವು ‘ಈ ಕ್ಷೇತ್ರದಲ್ಲಿ ಸರ್ಕಾರವೇ ನೇರವಾಗಿ ಹಸ್ತಕ್ಷೇಪ ಮಾಡುವ ಬದಲು ಆಯಾ ಧರ್ಮಗಳಿಗೆ ಸೇರಿದ ಜನರಿಂದಲೇ ಸುಧಾರಣೆಗಾಗಿ ಒತ್ತಾಯ ಬಂದರೆ ಆಗ ಸರ್ಕಾರ ಅವರ ನೆರವಿಗೆ ಬರಬಹುದು’ ಎಂಬುದಾಗಿತ್ತು.

ಈಗ ಯುಸಿಸಿ ಕುರಿತ ಚರ್ಚೆಯು ಮುನ್ನೆಲೆಗೆ ಬಂದಿರುವುದರ ಮುಖ್ಯ ಕಾರಣ, ಷರಿಯತ್ ಹಾಗೂ ಬಾಲ್ಯವಿವಾಹ ತಡೆ ಕಾಯ್ದೆಯ (2006) ನಡುವೆ ಇರುವ ವೈರುಧ್ಯ. ಮುಸ್ಲಿಂ ಸಮಾಜದಲ್ಲಿ, ವಿವಾಹವಾಗುವಾಗ ವರನಿಗೆ 15 ವರ್ಷಗಳಾಗಿದ್ದರೆ ಮತ್ತು ವಧು ‘ಪ್ರೌಢಾವಸ್ಥೆ’ಯನ್ನು ತಲಪಿದ್ದರೆ ಸಾಕು (ಋತುಸ್ರಾವವು ಪ್ರಾರಂಭವಾಗಿದ್ದರೆ ಆ ಮಹಿಳೆ ‘ಪ್ರೌಢೆ’). ಆದರೆ, ಭಾರತದ ಎಲ್ಲ ಪ್ರಜೆಗಳಿಗೂ ಅನ್ವಯಿಸುವ ‘ಬಾಲ್ಯವಿವಾಹ ತಡೆ ಕಾಯ್ದೆ 2006’ರ ಪ್ರಕಾರ, ವಧು- ವರರಿಗೆ ಕ್ರಮವಾಗಿ ಕನಿಷ್ಠ 18 ಮತ್ತು 21 ವರ್ಷ ವಯಸ್ಸಾಗಿರಬೇಕು. ಹಾಗಿದ್ದರೆ, ಷರಿಯತ್ ಪ್ರಕಾರ ಮದುವೆಯಾದ ಎಲ್ಲ ವಿವಾಹಗಳೂ ‘ಬಾಲ್ಯವಿವಾಹಗಳೇ’? ‘ಹೌದು’ ಎಂದು ಮದ್ರಾಸ್ ಹೈಕೋರ್ಟ್ ‘ಅಬ್ದುಲ್ ಖಾದರ್’ ಪ್ರಕರಣದಲ್ಲಿ 2014ರಲ್ಲಿ ಮತ್ತು ಕೇರಳ ಹೈಕೋರ್ಟ್ ‘18 ವರ್ಷಗಳಾಗದ ಮುಸ್ಲಿಂ ಕನ್ಯೆ’ ಪ್ರಕರಣದಲ್ಲಿ 2022ರಲ್ಲಿ ಆದೇಶ ನೀಡಿದ್ದರೆ, ಸುಪ್ರೀಂ ಕೋರ್ಟ್ ‘ಅಲ್ಲ’ ಎಂದು ಹಾದಿಯಾ ಪ್ರಕರಣದಲ್ಲಿ 2017ರಲ್ಲಿ ತೀರ್ಪು ಕೊಟ್ಟಿದೆ.

ಷರಿಯತ್ ಮತ್ತು ಬಾಲ್ಯವಿವಾಹ ತಡೆ ಕಾಯ್ದೆಯ ನಡುವಿನ ವೈರುಧ್ಯವನ್ನು ಪರಿಹರಿಸುವುದು ಹೇಗೆ? ‘ಏಕರೂಪ ನಾಗರಿಕ ಸಂಹಿತೆಯ ಮೂಲಕ’ ಎಂದು ಮೇಲ್ನೋಟಕ್ಕೆ ಅನಿಸುತ್ತದೆ. ಆದರೆ ಈ ಸಂಹಿತೆಯನ್ನು ಜಾರಿಗೊಳಿಸಿದರೆ ಕೆಳಗಿನ ತೊಡಕುಗಳು ಎದುರಾಗುತ್ತವೆ:

1. ಬಹುಪತ್ನಿತ್ವ ಮತ್ತು ದ್ವಿಪತ್ನಿತ್ವ: ಇಸ್ಲಾಂ ಧರ್ಮಾನುಯಾಯಿಗಳಲ್ಲಿ (ಷರಿಯತ್ ಪ್ರಕಾರ) ಬಹುಪತ್ನಿತ್ವ ನ್ಯಾಯಸಮ್ಮತವಾಗಿದೆ. ಹಿಂದೂ- ಕ್ರೈಸ್ತ- ಪಾರ್ಸಿ ಧರ್ಮಾನುಯಾಯಿಗಳಲ್ಲಿ ಬಹುಪತ್ನಿತ್ವ ಇಲ್ಲ. ಬಹುಪತ್ನಿತ್ವವು ಮಹಿಳೆಯ ಶೋಷಣೆಯ ಒಂದು ಭಾಗ, ಅದನ್ನು ನಿಷೇಧಿಸಬೇಕು, ನಿಜ. ಆದರೆ ದ್ವಿಪತ್ನಿತ್ವ? ಕೆಲವು ಹಿಂದೂ ಸಮುದಾಯಗಳಲ್ಲಿ ಇರುವ ದ್ವಿಪತ್ನಿತ್ವವೂ ಅದೇ ಬಗೆಯ ಶೋಷಣೆಯಲ್ಲವೇ?

1961ರ ಜನಗಣತಿಯ ಪ್ರಕಾರ, ದ್ವಿಪತ್ನಿತ್ವವು ಹಿಂದೂಗಳಲ್ಲಿ ಶೇ 5.8ರಷ್ಟು, ಬೌದ್ಧರಲ್ಲಿ ಶೇ 7.9ರಷ್ಟು ಮತ್ತು ಬುಡಕಟ್ಟು ಜನಾಂಗಗಳಲ್ಲಿ ಶೇ 15.25ರಷ್ಟು ಪ್ರಮಾಣದಲ್ಲಿ ಇದೆ. 1974ರಲ್ಲಿ ನಡೆದ ‘ಗವರ್ನಮೆಂಟ್ ಸರ್ವೆ’ ಕೂಡಾ ಈ ಶೇಕಡಾವಾರು ಅಂಶಗಳನ್ನು ಸಮರ್ಥಿಸುತ್ತದೆ (ನೋಡಿ: ರಿತು ಮೆನನ್, ‘ಅನೀಕ್ವಲ್ ಸಿಟಿಜನ್ಸ್: ಎ ಸ್ಟಡಿ ಆಫ್ ಮುಸ್ಲಿಂ ವಿಮೆನ್ ಇನ್ ಇಂಡಿಯಾ’, 2005 ಮತ್ತು ರಾಮ್ ಪುಣಿಯಾನಿ, ‘ಕಮ್ಯುನಲ್ ಪಾಲಿಟಿಕ್ಸ್: ಫ್ಯಾಕ್ಟ್ಸ್ ವರ್ಸಸ್ ಮಿಥ್ಸ್’, 2003).

‘ಹಿಂದೂ ವಿವಾಹ ಕಾಯ್ದೆ 1955’ ದ್ವಿಪತ್ನಿತ್ವವನ್ನು ನಿಷೇಧಿಸಿರುವಾಗ ಹಿಂದೂ ಸಮಾಜದಲ್ಲಿ ದ್ವಿಪತ್ನಿತ್ವ ಇರುವುದು ಹೇಗೆ? ಇದಕ್ಕೆ ಕಾರಣ, ಈ ಕಾಯ್ದೆಯ ಪ್ರಕಾರ, ದ್ವಿಪತ್ನಿತ್ವ ಅಸಂಜ್ಞೇಯ (ನಾನ್ ಕಾಗ್ನಿಜಬಲ್) ಅಪರಾಧವಾಗಿದೆ ಮತ್ತು ಅಪರಾಧಿ ಜಾಮೀನಿಗೆ ಅರ್ಹ. ಇಷ್ಟೇ ಅಲ್ಲದೆ, ಪುರುಷನೊಬ್ಬನು ಮೊದಲನೆಯ ಪತ್ನಿ ಇರುವಾಗಲೇ, ಅವಳಿಗೆ ವಿಚ್ಛೇದನ ಕೊಡದೆ ಮತ್ತೊಬ್ಬಳನ್ನು ಮದುವೆಯಾದರೆ ಆ ‘ನೊಂದ ಮಹಿಳೆ’ ಅಂದರೆ ಮೊದಲ ಪತ್ನಿ ಅಥವಾ ಅವಳ ರಕ್ತಸಂಬಂಧಿಗಳಾದ ತಂದೆ, ತಾಯಿ, ಸಹೋದರ, ಸಹೋದರಿ, ಮಗ, ಮಗಳು ಮಾತ್ರ ದೂರು ಕೊಡಬಹುದು. ಹೆಚ್ಚಿನ ಭಾರತೀಯ ಮಹಿಳೆಯರು ಅಶಿಕ್ಷಿತರಾಗಿರುವುದರಿಂದ ಅಥವಾ ಆರ್ಥಿಕವಾಗಿ ದುರ್ಬಲರಾಗಿರುವುದರಿಂದ ಅವರಿಗೆ ನ್ಯಾಯಾಲಯಗಳಲ್ಲಿ ಹೋರಾಡುವುದು ಅಸಾಧ್ಯವಾಗುತ್ತದೆ. ಅರ್ಥಾತ್, ಯುಸಿಸಿಯು ಹಿಂದೂಗಳಲ್ಲಿರುವ ದ್ವಿಪತ್ನಿತ್ವವು ಸಂಜ್ಞೇಯ ಅಪರಾಧವೆಂದು ಸೆಕ್ಷನ್ 494ಕ್ಕೆ ತಿದ್ದುಪಡಿ ಮಾಡಬೇಕಾಗುತ್ತದೆ.

2. ಆರ್ಥಿಕ ಹಕ್ಕುಗಳು: ಸದ್ಯ ಹಿಂದೂ ಮಹಿಳೆಗೆ ಪುರುಷನಿಗೆ ಸಮಾನವಾಗಿ ಆಸ್ತಿಯ ಹಕ್ಕು ಇದೆ. ಆಸ್ತಿಯು ಪಿತ್ರಾರ್ಜಿತ ಆಗಿರಬಹುದು ಅಥವಾ ಸ್ವಯಾರ್ಜಿತ ಆಗಿರಬಹುದು. ಆದರೆ, ಮಾತೃಮೂಲೀಯ ವ್ಯವಸ್ಥೆ ಇರುವಲ್ಲಿ ಆಸ್ತಿಯ ಹಕ್ಕು ಮಹಿಳೆಗೆ ಇದ್ದು, ಅದು ತಾಯಿಯಿಂದ ಮಗಳಿಗೆ ದೊರಕುತ್ತದೆ. ಯುಸಿಸಿ ಈ ಪದ್ಧತಿಯನ್ನು ತಿರಸ್ಕರಿಸಬೇಕು ಅಥವಾ ತಿದ್ದುಪಡಿ ಮಾಡಬೇಕಾಗುತ್ತದೆ.

ಕ್ರೈಸ್ತ ಧರ್ಮಾನುಯಾಯಿಗಳಲ್ಲಿ, ಪುರುಷನೊಬ್ಬನು ಉಯಿಲು ಅಥವಾ ವಿಲ್ ಬರೆಯದೆ ಮೃತನಾದರೆ ಮತ್ತು ಅವನ ಮಗ ಅವನಿಗಿಂತ ಮೊದಲೇ ಮೃತನಾಗಿದ್ದರೆ, ಆತನ ಪತ್ನಿಗೆ ಆಸ್ತಿಯಲ್ಲಿ ಯಾವ ಪಾಲೂ ಸಿಗುವುದಿಲ್ಲ. ಯುಸಿಸಿಯು ಕ್ರೈಸ್ತ ಧರ್ಮಾನುಯಾಯಿಗಳಿಗೆ ಅನ್ವಯವಾಗುವ ಈ ಕಾನೂನನ್ನು ರದ್ದು ಮಾಡಬೇಕಾಗುತ್ತದೆ ಅಥವಾ ತಿದ್ದುಪಡಿ ಮಾಡಬೇಕಾಗುತ್ತದೆ.

ಇನ್ನು ಪಾರ್ಸಿ ಸಮುದಾಯಕ್ಕೆ ಬಂದರೆ, ಪಾರ್ಸಿ ಪುರುಷನೊಬ್ಬನು ಪಾರ್ಸಿಯಲ್ಲದ ಮಹಿಳೆಯನ್ನು ಮದುವೆಯಾದರೆ, ಅವನ ಪತ್ನಿಗೆ ಗಂಡನ ಆಸ್ತಿಯಲ್ಲಿ ಯಾವ ಪಾಲೂ ಇರುವುದಿಲ್ಲ (ಅವರಿಬ್ಬರ ಮಕ್ಕಳಿಗೆ ಮಾತ್ರ ತಂದೆಯ ಆಸ್ತಿಯ ಮೇಲೆ ಹಕ್ಕಿದೆ). ಅಲ್ಲದೆ, ಮೃತ ವ್ಯಕ್ತಿಯ ಮಗನು ಆ ವ್ಯಕ್ತಿಗಿಂತ ಮೊದಲೇ ಸತ್ತಿದ್ದರೆ, ಆ ಮಗನ ಪತ್ನಿಗೆ ಆಸ್ತಿಯಲ್ಲಿ ಯಾವ ಪಾಲೂ ದೊರೆಯುವುದಿಲ್ಲ. ಯುಸಿಸಿಯು ಪಾರ್ಸಿ ಸಮುದಾಯಕ್ಕೆ ಅನ್ವಯಿಸುವ ಈ ಕಾನೂನನ್ನು ರದ್ದು ಅಥವಾ ತಿದ್ದುಪಡಿ ಮಾಡಬೇಕಾಗುತ್ತದೆ.

3. ಜೀವನಾಂಶ: ಮುಸ್ಲಿಂ ವಿವಾಹ, ವಿಚ್ಛೇದನ ಹಾಗೂ ಜೀವನಾಂಶ ಕುರಿತ ಒಂದು ಮಹತ್ವದ ಕಾನೂನೆಂದರೆ, ‘ಮುಸ್ಲಿಂ ಮಹಿಳೆಯ (ವೈವಾಹಿಕ ಹಕ್ಕುಗಳ ರಕ್ಷಣೆ) ಕಾಯ್ದೆ, 2019’. ಈ ಕಾಯ್ದೆಯ ಪ್ರಕಾರ, ‘ತ್ರಿವಳಿ ತಲಾಖ್’ ಕೊಡುವವನನ್ನು ಶಿಕ್ಷಾರ್ಹ ಎಂದು ಪರಿಗಣಿಸಿ, ಅವನಿಗೆ ಗರಿಷ್ಠ ಮೂರು ವರ್ಷಗಳ ಕಾರಾಗೃಹ ವಾಸ ಮತ್ತು ಜುಲ್ಮಾನೆಯನ್ನು ವಿಧಿಸಬಹುದು. ಅಂತಹ ಸಂದರ್ಭದಲ್ಲಿ, ಪತಿಯು ಜೈಲಿನಲ್ಲಿರುವಾಗ ಅವನ ಹೆಂಡತಿ ಹಾಗೂ ಮಕ್ಕಳನ್ನು ಸಾಕುವವರು ಯಾರು? ಅಂತಹ ಪತಿಯಿಂದ ಸೂಕ್ತ ಜೀವನಾಂಶವನ್ನು ಪಡೆಯುವ ಹಕ್ಕು ಆ ವಿಚ್ಛೇದಿತ ಪತ್ನಿಗೆ ಇದೆ. ಆದರೆ, ಸ್ಥಿರಾಸ್ತಿ ಏನೂ ಇಲ್ಲದೆ, ದುಡಿದು ಸಂಬಳ ಪಡೆದು ಬದುಕುವ ಪತಿ ಜೈಲಿನಲ್ಲಿದ್ದರೆ ಅವನು ಜೀವನಾಂಶವನ್ನು ಕೊಡುವುದು ಹೇಗೆ? ಪತಿಯನ್ನು ಜೈಲಿಗಟ್ಟಿದ ಪತ್ನಿಯನ್ನು ಅವಳ ತವರುಮನೆಯವರೂ ತಿರಸ್ಕರಿಸುವ ಸಾಧ್ಯತೆ ಇರುತ್ತದೆ. ಆದ್ದರಿಂದ ತ್ರಿವಳಿ ತಲಾಖ್ ಕುರಿತ 2019ರ ಕಾಯ್ದೆಗೆ ತಿದ್ದುಪಡಿಯ ಅವಶ್ಯಕತೆ ಇದೆ.

19ನೆಯ ಶತಮಾನದ ಪ್ರಸಿದ್ಧ ನ್ಯಾಯವಾದಿ ಮೆಂಡೆಲ್ ಫಿಲಿಪ್ಸ್ ಅವರು ಹೇಳಿದಂತೆ, ‘ಕಾನೂನಿಗೆ ಜೊತೆಯಲ್ಲಿ ಪ್ರೀತಿ ತುಂಬಿದ ಹಾಗೂ ಜೀವಂತಿಕೆಯ ಒಂದು ಸಾರ್ವಜನಿಕ ಅಭಿಪ್ರಾಯ ಇಲ್ಲ ಎಂದಾದರೆ, ಆ ಕಾನೂನು ಅರ್ಥಹೀನವಾಗುತ್ತದೆ’.



ಚುರುಮುರಿ



ಜಂಟಿ ಮಂತ್ರ

• ಸುಮಂಗಲಾ

‘ಏನೇ ಹೇಳು… ನಮ್ಮ ಕುಮಾರಣ್ಣ ಕಣಿ ಹೇಳೋ ಗಿಣಿ ಇದ್ದಂಗ’ ಬೆಕ್ಕಣ್ಣ ಬಲು ಅಭಿಮಾನದಿಂದ ನುಡಿಯಿತು. ನಾನು ತಲೆ ಕೆರೆದುಕೊಂಡೆ.

‘ಕರ್ನಾಟಕದಲ್ಲಿ ಯಾವ ಅಜಿತ್ ಪವಾರ್ ಸೃಷ್ಟಿಯಾಗ್ತಾರೋ ಗೊತ್ತಿಲ್ಲ ಅಂತ ಎಷ್ಟ್ ಬರೋಬ್ಬರಿ ಹೇಳ್ಯಾನ. ಕೈಪಕ್ಷದಾಗೆ ಯಾರೋ ಅಜಿತ್ ಪವಾರ್ ಆಗಾಕಹತ್ಯಾರ ಅಂತ ಗೊತ್ತಿದ್ದೇ ಅಂವಾ ಹೀಂಗ ಹೇಳ್ಯಾನ’ ಬೆಕ್ಕಣ್ಣ ವಿವರಿಸಿತು.

‘ಹ್ಞೂಂ ಮತ್ತ, ಅದ್ರಿದ್ದೂ ಒಂದ್ ಪೆನ್ ಡ್ರೈವ್ ಇರಬಕು ನೋಡು ಅಂವನ ಹತ್ರ’ ನಾನು ಕಿಚಾಯಿಸಿದೆ.

‘ಮತ್ತ ಏನಂದುಕೊಂಡಿ… ಕುಮಾರಣ್ಣ ಸಿ.ಡಿಯಿಂದ ಪೆನ್‌ಡ್ರೈವಿಗೆ ಅಪ್‌ಗ್ರೇಡ್ ಆಗ್ಯಾನ. ಕುಮಾರಣ್ಣನ ಮನಿಮ್ಯಾಗೆ ಇ.ಡಿ ದಾಳಿ ಮಾಡಿದ್ರ ಬರೀ ಪೆನ್‌ಡ್ರೈವೇ ಸಿಗ್ತಾವಂತ’ ಬೆಕ್ಕಣ್ಣನೂ ಕಿಸಕ್ಕನೆ ನಕ್ಕಿತು.

‘ಹಂಗ ಕಣಿ ಹೇಳೋರು ರಗಡ್ ಮಂದಿ ಅದಾರಲೇ. ನಿಮ್ಮ ಈಶೂ ಅಂಕಲ್ಲಂತೂ ಮೂರೇ ತಿಂಗಳದಾಗೆ ಈ ಬಹುಮತದ ಸರ್ಕಾರ ಉರುಳತೈತಿ ಅಂತ ಮುಹೂರ್ತ ಫಿಕ್ಸ್ ಮಾಡಿಕೊಂಡು ಕುತ್ಯಾನ. ಬೊಮ್ಮಾಯಿ ಅಂಕಲ್ಲೂ ಸರ್ಕಾರ ಪತನಗೊಳ್ಳುವ ಕಾಲ ಬರಾಕೆಹತ್ತೈತಿ ಅಂದಾರ’ ಎಂದೆ.

‘ಕಮಲಕ್ಕನ ಮನಿಯವ್ರು ಹೀಂಗ ಬಹುಮತದ ಸರ್ಕಾರ ಉರುಳಿಸೋ ಪ್ಲಾನ್ ಮಾಡ್ತಾರಂದ್ರ ಒಬ್ಬ ಅಜಿತ್ ಪವಾರ್ ಸಾಲಂಗಿಲ್ಲ, ನಾಕಾರು ಅಜಿತ್ ಪವಾರ್ ಸೃಷ್ಟಿಮಾಡಬಕು ಅವ್ರು, ಅದೂ ಕೋಟಗಟ್ಟಲೆ ರೊಕ್ಕ ಬಡದು…’

‘ಅದ್ರ ಅದಕ್ಕಿಂತ ಮದ್ಲು ವಿರೋಧ ಪಕ್ಷದ ನಾಯಕನನ್ನ ಆರಿಸಬೇಕಲ್ಲ. ಹೆಂಗೂ ನಿಮ್ಮ ಕುಮಾರಣ್ಣ ಯಾರ ಜೊತಿಗಾದ್ರೂ ಸರಿ, ಒಟ್ಟು ಮೈತ್ರಿ ಮಾಡಿಕೆಂಡು ಮುಖ್ಯಮಂತ್ರಿ ಆಗೂ ಕನಸು ಕಾಣತಿದ್ದ ಪಾಪ. ಕಮಲಕ್ಕನ ಮನಿಯವ್ರು ಅಂವನ ಜೊತಿಗಿ ಮೈತ್ರಿ ಮಾಡಿಕೆಂಡು, ಅವನನ್ನೇ ವಿರೋಧ ಪಕ್ಷದ ನಾಯಕನನ್ನಾಗಿ ಮಾಡಿದ್ರ ಹೆಂಗಿರತೈತಿ?’

‘ಅದೇ ಬೆಸ್ಟು! ವಿರೋಧಿಯ ವಿರೋಧಿ ಎನಗೆ ಮಿತ್ರ. ಜತೆಗೂಡಿ ವಿರೋಧಿಸೋಣ, ಬಲು ಬೇಗ ಉರುಳಿಸೋಣ ಅಂತ ಇಬ್ರೂ ಜಂಟಿ ಮಂತ್ರ ಜಪಿಸಬೌದು’ ಎಂದು ಬೆಕ್ಕಣ್ಣ ಕೊಂಕುನಗು ಬೀರಿತು.

ಸಂಗತ

ಭೌತಿಕ ಶುಚಿತ್ವ ಮತ್ತು ಬೌದ್ಧಿಕ ವಿಕಸನ

ಭೌತಿಕ ಶುಚಿತ್ವಕ್ಕೆ ಆದ್ಯತೆ ನೀಡುವ ಶೌಚಾಲಯ ಮತ್ತು ಬೌದ್ಧಿಕ ವಿಕಸನಕ್ಕೆ ದಾರಿ ಮಾಡುವ ಗ್ರಂಥಾಲಯಗಳ ಸ್ಥಾಪನೆ, ನಿರ್ವಹಣೆ ಕೊರತೆಯು ಬಹುದೊಡ್ಡ ಸಮಸ್ಯೆಯಾಗಿದೆ

• ರಾಜಕುಮಾರ ಕುಲಕರ್ಣಿ

ಮಿತ್ರರೊಬ್ಬರ ಊರಿನಲ್ಲಿ ಇತ್ತೀಚೆಗೆ ಮುಖ್ಯ ಬಸ್ ನಿಲ್ದಾಣಕ್ಕಿಂತ ಹಿಂದಿನ ನಿಲ್ದಾಣದಲ್ಲಿ ಇಳಿದು, ಮೂತ್ರವಿಸರ್ಜನೆಗಾಗಿ ಸುತ್ತಲೂ ದೃಷ್ಟಿ ಬೀರಿದವನಿಗೆ ಅಲ್ಲೆಲ್ಲೂ ಸಾರ್ವಜನಿಕ ಶೌಚಾಲಯ ಗೋಚರಿಸಲಿಲ್ಲ. ವಸತಿ ಮತ್ತು ವಾಣಿಜ್ಯ ಸಂಕೀರ್ಣಗಳಿಂದ ದಟ್ಟವಾದ ಆ ಪ್ರದೇಶದಲ್ಲಿ ಬಯಲುಭೂಮಿಯನ್ನು ಹುಡುಕಿಕೊಂಡು ಹೋಗುವುದು ಅಸಾಧ್ಯವಾದ ಕೆಲಸವಾಗಿತ್ತು. ಕೊನೆಗೆ ಈ ಸಮಸ್ಯೆಗೆ ಪರಿಹಾರ ಸ್ನೇಹಿತರ ಮನೆ ತಲುಪಿದ ನಂತರವೇ ಪ್ರಾಪ್ತವಾಯಿತು. ಮನೆ ತಲುಪುವವರೆಗೂ ನನಗಾದ ಸಂಕಟ ವರ್ಣಿಸಲು ಅಸಾಧ್ಯವಾಗಿತ್ತು. ‘ಸಾರ್ವಜನಿಕರ ಅನುಕೂಲಕ್ಕೆಂದು ಈ ಊರಿನಲ್ಲಿ ರಸ್ತೆಬದಿ ಶೌಚಾಲಯಗಳಿಲ್ಲ ನೋಡಿ’ ಎಂದ ಸ್ನೇಹಿತರ ಮಾತಿನಲ್ಲಿ ಸ್ಥಳೀಯ ಆಡಳಿತದ ವೈಫಲ್ಯ ಢಾಳಾಗಿ ಎದ್ದು ಕಾಣುತ್ತಿತ್ತು.

ಇದೇ ಸಮಯದಲ್ಲಿ ನನ್ನ ಸ್ನೇಹಿತರ ಮನೆಗೆ ಅತಿಥಿಯಾಗಿ ಬಂದಿದ್ದ ಹಿರಿಯರೊಬ್ಬರು ಸಾರ್ವಜನಿಕ ಗ್ರಂಥಾಲಯಕ್ಕೆ ಭೇಟಿ ನೀಡುವ ಇಂಗಿತ ವ್ಯಕ್ತಪಡಿಸಿದರು. ಮನೆಯಿಂದ ಸಾರ್ವಜನಿಕ ಗ್ರಂಥಾಲಯ ಬಹಳ ದೂರದಲ್ಲಿ ಇರುವುದರಿಂದ ಸ್ನೇಹಿತರು ತಮ್ಮ ಅಸಹಾಯಕತೆ ತೋಡಿಕೊಂಡರು. ಹಿರಿಯರು ಸಮೀಪದಲ್ಲಿ ಶಾಖಾ ಗ್ರಂಥಾಲಯ ಇದೆಯೇ ಎಂದು ಕೇಳಿದರು. ಆಗ ಸ್ನೇಹಿತರ ಉತ್ತರ ನಕಾರಾತ್ಮಕವಾಗಿತ್ತು. ಕೊನೆಗೆ ಖಾಸಗಿ ಗ್ರಂಥಾಲಯದ ಬಗ್ಗೆ ಪ್ರಶ್ನಿಸಿದರು. ಈ ಖಾಸಗಿ ಗ್ರಂಥಾಲಯ ಎನ್ನುವ ವ್ಯವಸ್ಥೆ ಬಹುತೇಕ ಮರೆಯಾಗಿ ಹಲವು ದಶಕಗಳೇ ಸಂದಿರುವಾಗ, ಉತ್ತರಿಸಲು ಸ್ನೇಹಿತರಿಗೆ ತುಂಬ ಇರಿಸುಮುರಿಸಾಯಿತು. ಪುಸ್ತಕಗಳ ಓದಿನ ಸಂಸ್ಕೃತಿಯೇ ನಾಶವಾಗುತ್ತಿದೆಯಲ್ಲ ಎಂದು ಹಿರಿಯರು ಬಹಳ ವೇದನೆಪಟ್ಟುಕೊಂಡರು.

ಶೌಚಾಲಯ ಮತ್ತು ಗ್ರಂಥಾಲಯವು ನಾಗರಿಕ ಸಮಾಜದ ಎರಡು ಬಹುಮುಖ್ಯ ಅಗತ್ಯಗಳಾಗಿವೆ. ಒಂದು ಭೌತಿಕ ಶುಚಿತ್ವಕ್ಕೆ ಆದ್ಯತೆ ನೀಡಿದರೆ ಇನ್ನೊಂದು ಬೌದ್ಧಿಕ ವಿಕಸನಕ್ಕೆ ದಾರಿ ಮಾಡಿಕೊಡುತ್ತದೆ. ಮನುಷ್ಯನು ಭೌತಿಕವಾಗಿ ಮತ್ತು ಬೌದ್ಧಿಕವಾಗಿ ಎರಡೂ ಸ್ತರಗಳಲ್ಲಿ ಪ್ರಗತಿ ಸಾಧಿಸಬೇಕಿರುವುದರಿಂದ ಇವೆರಡೂ ಅತಿ ಅಗತ್ಯದ ಬೇಡಿಕೆಗಳಾಗಿವೆ. ಈ ದಿಸೆಯಲ್ಲಿ ಸರ್ಕಾರವು ಸಾರ್ವಜನಿಕ ಶೌಚಾಲಯಗಳನ್ನು ಮತ್ತು ಗ್ರಂಥಾಲಯಗಳನ್ನು ಸ್ಥಾಪಿಸಿದೆ. ಆದರೆ ಸ್ಥಾಪನೆಯಲ್ಲಿರುವ ಆಸಕ್ತಿ ನಂತರದ ದಿನಗಳಲ್ಲಿ ಅವುಗಳ ನಿರ್ವಹಣೆಯಲ್ಲಿ ಕಾಣಿಸುತ್ತಿಲ್ಲದಿರುವುದು ಬಹುದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ.

ನಗರ ಪ್ರದೇಶಗಳಲ್ಲಿ ಸಾರ್ವಜನಿಕ ಶೌಚಾಲಯ ಮತ್ತು ಗ್ರಂಥಾಲಯಗಳ ನಿರ್ವಹಣೆ ಸಮರ್ಪಕವಾಗಿ ಆಗುತ್ತಿಲ್ಲ. ಬಸ್ ನಿಲ್ದಾಣ, ಸರ್ಕಾರಿ ಕಚೇರಿಗಳು, ಜನನಿಬಿಡ ಪ್ರದೇಶಗಳಲ್ಲಿನ ಶೌಚಾಲಯಗಳು ಅವ್ಯವಸ್ಥೆಯ ಆಗರಗಳಾಗಿವೆ. ‘ಶುಚಿತ್ವವಿದ್ದಲ್ಲಿ ದೈವತ್ವವಿದೆ’ ಎಂಬ ಮಹಾತ್ಮ ಗಾಂಧಿಯವರ ಮಾತನ್ನು ಸರ್ಕಾರ ಮತ್ತು ಸಾರ್ವಜನಿಕರು ಅರ್ಥಮಾಡಿಕೊಂಡಿಲ್ಲ.

ಇನ್ನು ಸಾರ್ವಜನಿಕ ಗ್ರಂಥಾಲಯಗಳಲ್ಲಿಯೂ ಅನೇಕ ಸಮಸ್ಯೆಗಳಿವೆ. ಪುಸ್ತಕ, ಪೀಠೋಪಕರಣ ಮತ್ತು ಸಿಬ್ಬಂದಿಯ ಕೊರತೆಯಿಂದ ಅವು ಓದುಗರನ್ನು ಆಕರ್ಷಿಸುವಲ್ಲಿ ವಿಫಲವಾಗುತ್ತಿವೆ. ಅಗತ್ಯದ ಪುಸ್ತಕಗಳಿಗಿಂತ ಅನಗತ್ಯದ ಪುಸ್ತಕಗಳ ಸಂಖ್ಯೆಯೇ ಅಲ್ಲಿ ಹೆಚ್ಚು. ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯದ ಪರಿಕಲ್ಪನೆ ಪೂರ್ಣಪ್ರಮಾಣದಲ್ಲಿ ಕಾರ್ಯರೂಪಕ್ಕೆ ಬಂದಿಲ್ಲ. ಅದೆಷ್ಟೋ ಹಳ್ಳಿಗಳಲ್ಲಿ ಸರ್ಕಾರದ ಅನುದಾನದಲ್ಲಿ ಕಟ್ಟಿದ ಶೌಚಾಲಯಗಳನ್ನು ಮನೆಯ ಅನುಪಯುಕ್ತ ವಸ್ತುಗಳನ್ನು ಶೇಖರಿಸಿಡಲು ಜನರು ಉಪಯೋಗಿಸುತ್ತಿದ್ದಾರೆ. ಪರಿಣಾಮವಾಗಿ, ‘ಬಯಲುಶೌಚ ಮುಕ್ತ’ ಎನ್ನುವುದು ಸರ್ಕಾರದ ದಸ್ತಾವೇಜುಗಳಲ್ಲಿ ಮಾತ್ರ ದಾಖಲಾಗುತ್ತಿದೆ ವಿನಾ ಪ್ರಾಯೋಗಿಕವಾಗಿ ಸಾಕಾರಗೊಂಡಿಲ್ಲ.

ಇದೇ ಮಾತು ಗ್ರಾಮೀಣ ಗ್ರಂಥಾಲಯಗಳಿಗೂ ಅನ್ವಯಿಸುತ್ತದೆ. ಕಾಟಾಚಾರಕ್ಕೆ ಎನ್ನುವಂತೆ ಗ್ರಾಮೀಣ ಗ್ರಂಥಾಲಯಗಳನ್ನು ಸ್ಥಾಪಿಸಲಾಗಿದ್ದು, ಅವುಗಳ ನಿರ್ವಹಣೆ ಸಮರ್ಪಕವಾಗಿಲ್ಲ. ಸ್ಥಳೀಯರನ್ನೇ ಗ್ರಂಥಾಲಯಗಳ ಮೇಲ್ವಿಚಾರಕರನ್ನಾಗಿ ನೇಮಿಸುತ್ತಿರುವುದರಿಂದ ಅವರ ಕಾರ್ಯನಿರ್ವಹಣೆ ಕುರಿತು ಪ್ರಶ್ನಿಸುವಂತಿಲ್ಲ. ಸರ್ಕಾರಿ ಶಾಲೆಗಳಲ್ಲಿ ಗ್ರಂಥಾಲಯ, ಶೌಚಾಲಯದ ಕೊರತೆ ಬಹುಮುಖ್ಯ ಸಮಸ್ಯೆಯಾಗಿದೆ. ನಗರಗಳಲ್ಲಿನ ಸರ್ಕಾರಿ ಶಾಲೆಗಳಲ್ಲಿಯೂ ಗ್ರಂಥಾಲಯ ಮತ್ತು ಶೌಚಾಲಯಗಳಿಲ್ಲ. ಶೌಚಾಲಯದ ಕೊರತೆಯಿಂದ ಮಕ್ಕಳು ದೈಹಿಕ ಒತ್ತಡವನ್ನು ಸಹಿಸಿಕೊಂಡು ಪಾಠದತ್ತ ಗಮನ ಕೇಂದ್ರೀಕರಿಸುವುದು ಕಷ್ಟಸಾಧ್ಯ. ವಿಶೇಷವಾಗಿ ವಿದ್ಯಾರ್ಥಿನಿಯರು ಹೆಚ್ಚಾಗಿ ಈ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.



ಮುಖ್ಯೋಪಾಧ್ಯಾಯರ ಕೋಣೆಯಲ್ಲಿ ಕಾಟಾಚಾರಕ್ಕೆ ಎನ್ನುವಂತೆ ಕೆಲವು ಪುಸ್ತಕಗಳನ್ನು ಅಲ್ಮೆರಾದಲ್ಲಿ ಜೋಡಿಸಿಟ್ಟು, ಗ್ರಂಥಾಲಯವೆಂದು ಮಕ್ಕಳಿಗೆ ತೋರಿಸಲಾಗುತ್ತಿದೆ. ಪಠ್ಯಪುಸ್ತಕಗಳ ಪೂರೈಕೆಯಲ್ಲೇ ಅನೇಕ ಸಮಸ್ಯೆಗಳಿರುವಾಗ ಇನ್ನು ಶಾಲಾ ಗ್ರಂಥಾಲಯಗಳಿಗೆ ಸಾಹಿತ್ಯದಂತಹ ಪಠ್ಯೇತರ ಪುಸ್ತಕಗಳನ್ನು ಪೂರೈಸುವುದು ದೂರದ ಮಾತು. ಶಿಕ್ಷಕರಲ್ಲಿನ ಓದಿನ ಅಭಿರುಚಿಯ ಕೊರತೆ ಕೂಡ ಶಾಲೆಗಳಲ್ಲಿ ಗ್ರಂಥಾಲಯ ಸ್ಥಾಪನೆಯ ಹಿನ್ನಡೆಗೆ ಕಾರಣವಾಗುತ್ತಿದೆ. ಶಾಲಾ ಹಂತದಲ್ಲೇ ಮಕ್ಕಳಲ್ಲಿ ಓದಿನ ಹವ್ಯಾಸವನ್ನು ಬೆಳೆಸುವಲ್ಲಿ ವಿಫಲವಾಗುತ್ತಿರುವುದರಿಂದ ಸಹಜವಾಗಿಯೇ ಪುಸ್ತಕಗಳ ಓದುಗರ ಸಂಖ್ಯೆ ಕಡಿಮೆಯಾಗುತ್ತಿದೆ.

ನಾಗರಿಕ ಸಮಾಜದ ಈ ಎರಡು ಅಗತ್ಯದ ಬೇಡಿಕೆಗಳನ್ನು ಅನುಷ್ಠಾನಕ್ಕೆ ತಂದು, ಅವುಗಳನ್ನು ನಿರ್ವಹಿಸಬೇಕಾದ ಹೊಣೆಗಾರಿಕೆ ಸರ್ಕಾರದ್ದಾಗಿದೆ. ಜೊತೆಗೆ ಅವುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಜವಾಬ್ದಾರಿ ನಾಗರಿಕ ಸಮಾಜದ ಮೇಲಿದೆ ಎನ್ನುವುದನ್ನು ಮರೆಯಬಾರದು.

ವಾಚಕರ ವಾಣಿ

ಬಯಲಾಗಿದೆ ಭದ್ರತಾ ಲೋಪ

ವಿಧಾನಸಭೆಯಲ್ಲಿ ಇತ್ತೀಚೆಗೆ ಬಜೆಟ್ ಮಂಡನೆ ವೇಳೆ, ಅನಧಿಕೃತ ವ್ಯಕ್ತಿಯೊಬ್ಬರು ತಾವು ಶಾಸಕ ಎಂದು ಹೇಳಿಕೊಂಡು ಭದ್ರತಾ ಸಿಬ್ಬಂದಿಗೆ ದಬಾಯಿಸಿ, ಶಾಸಕರ ಸೀಟಿನಲ್ಲಿ ಬಂದು ಕುಳಿತಿದ್ದುದು ವರದಿಯಾಗಿದೆ (ಪ್ರ.ವಾ., ಜುಲೈ 8). ಇದರಿಂದ ವಿಧಾನಸೌಧದಲ್ಲಿನ ಭದ್ರತಾ ಲೋಪ ಬಯಲಾಗಿದೆ. ಇದಕ್ಕೆ ಕಡಿವಾಣ ಹಾಕಬೇಕೆಂದರೆ, ವಿಧಾನಸೌಧದ ಪ್ರವೇಶ ದ್ವಾರದಲ್ಲಿ ಪ್ರತಿಯೊಬ್ಬ ಶಾಸಕ, ಸಿಬ್ಬಂದಿಗೆ ಆಧಾರ್ ಆಧಾರಿತ ಮುಖ ಅಥವಾ ಬೆರಳಚ್ಚಿನ ಬಯೊಮೆಟ್ರಿಕ್ ವ್ಯವಸ್ಥೆ ಮಾಡಬೇಕು. ಅದಕ್ಕೆ ಪೂರಕವಾದ ಸಾಧನ ಅಳವಡಿಸಿ, ಪ್ರತಿಯೊಬ್ಬರೂ ಕಡ್ಡಾಯವಾಗಿ ಹಾಜರಾತಿ ಹಾಕುವ ವ್ಯವಸ್ಥೆ ಜಾರಿಗೆ ತರಬೇಕು. ಇದರಿಂದ ಶಾಸಕರು ಅಧಿವೇಶನದಲ್ಲಿ ಭಾಗವಹಿಸಿದ ದಾಖಲೆಯೂ ದೊರೆಯುತ್ತದೆ, ಭದ್ರತೆಯೂ ಬಿಗಿಯಾಗುತ್ತದೆ.

ಮುಳ್ಳೂರು ಪ್ರಕಾಶ್, ಮೈಸೂರು

ಸಾಧು ಸಂತನಿಗೆ ಇದೆಂಥ ಸಾವು?

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಹಿರೇಕೋಡಿಯ ನಂದಿಪರ್ವತ ಆಶ್ರಮದ ಜೈನ ಮುನಿಗಳ ದೇಹವನ್ನು ಕತ್ತರಿಸಿ ಬರ್ಬರವಾಗಿ ಹತ್ಯೆ ಮಾಡಿರುವುದು ತೀವ್ರ ಖಂಡನೀಯ. ದಿನಕ್ಕೆ ಒಂದೇ ಬಾರಿ ಉಪಾಹಾರ, ಒಣಹುಲ್ಲಿನ ಮೇಲೆ ನಿದ್ರಿಸುವಂತಹ ಹತ್ತು ಹಲವು ಕಠಿಣ ಜೀವನಶೈಲಿಯನ್ನು ಪಾಲಿಸುವವರು ಜೈನ ಮುನಿಗಳು. ಅಹಿಂಸಾ ತತ್ವ, ಸಿದ್ಧಾಂತಗಳನ್ನೇ ಪಾಲಿಸಿ, ಎಲ್ಲರಿಗೂ ಅದನ್ನು ಪಾಲಿಸಲು ಪ್ರೇರೇಪಿಸುತ್ತಿದ್ದ ಸಾಧು ಸಂತನಿಗೇ ಈ ರೀತಿಯ ಸಾವೇ? ಇದಕ್ಕೆ ಕಾರಣರಾದ ನೀಚರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಬೇಕು.

ಮಂಜುನಾಥ್ ಜೈನ್ ಎಂ.ಪಿ., ಮಂಡ್ಯ

ಪ್ರಾಮಾಣಿಕರಿಗೆ ಸಾಂಸ್ಕೃತಿಕ ಅನ್ಯಾಯ?

‘ಸರ್ಕಾರವು ಅಕಾಡೆಮಿ, ಪ್ರಾಧಿಕಾರ ಸೇರಿದಂತೆ ವಿವಿಧ ಗುರುತರ ಸ್ಥಾನಗಳಿಗೆ ನೇಮಕ ಮಾಡುವಾಗ ಪ್ರಾದೇಶಿಕ ಪ್ರಾತಿನಿಧ್ಯ ಇರಬೇಕು’ ಎಂದು ಟಿ.ಆರ್.ಚಂದ್ರಶೇಖರ ಹೇಳಿದ್ದಾರೆ (ವಾ.ವಾ., ಜುಲೈ 6). ಉತ್ತರ ಕರ್ನಾಟಕಕ್ಕೆ, ವಿಶೇಷವಾಗಿ ಕಲ್ಯಾಣ ಕರ್ನಾಟಕಕ್ಕೆ ಆದ್ಯತೆ ನೀಡಬೇಕು ಎಂಬ ಡಾ. ಡಿ.ಎಂ.ನಂಜುಂಡಪ್ಪ ಸಮಿತಿಯ ಶಿಫಾರಸಿನ ಪಾಲನೆಯಾಗುತ್ತಿಲ್ಲ ಎಂಬ ಅವರ ಆಕ್ಷೇಪ ಸರಿಯಾಗಿದೆ. ಆದರೆ, ಬೆಂಗಳೂರಿನಲ್ಲಿ ನೆಲೆಸಿರುವ ಕೆಲವರು ತಮ್ಮ ಮೂಲ ಜನನ ಸ್ಥಳದ ದಾಖಲೆ ಕೊಟ್ಟು ಅವಕಾಶ ಗಿಟ್ಟಿಸಿಕೊಳ್ಳುತ್ತಾರೆ. ಅದಕ್ಕೆ ಅನುಗುಣವಾಗಿ ಭತ್ಯೆಗಳನ್ನು ಪಡೆದುಕೊಳ್ಳುತ್ತಾರೆ. ಇದರಿಂದ ಅರ್ಹ ಜಿಲ್ಲಾ ಪ್ರಾತಿನಿಧ್ಯ ದೊರಕದೆ, ಪ್ರಾಮಾಣಿಕರಿಗೆ ಸಾಂಸ್ಕೃತಿಕ ಅನ್ಯಾಯ ಆಗುತ್ತದೆ.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬೆಂಗಳೂರಿಗೆ ವಲಸೆ ಬಂದಿರುವ ಅನೇಕರಿಗೆ ತಮ್ಮ ಅಸ್ಮಿತೆಗೆ ಬೆಂಗಳೂರು ಬೇಕು, ಆದ್ಯತೆ ಮಾತ್ರ ಹುಟ್ಟೂರಿಗೆ ಸೀಮಿತ. ಈ ಸ್ವಾರ್ಥ ಪ್ರವಾಹದಲ್ಲಿ ಮೊದಲು ಮುಳುಗಿಹೋಗುತ್ತಿರುವವರು ಮೂಲತಃ ಬೆಂಗಳೂರಿನಲ್ಲಿ ಹುಟ್ಟಿ, ಬೆಳೆದು, ಬದುಕುತ್ತಿರುವವರು.

ಆರ್.ವೆಂಕಟರಾಜು, ಬೆಂಗಳೂರು

ಗೃಹಜ್ಯೋತಿ: ಗೊಂದಲ ನಿವಾರಿಸಿ

‘ಗೃಹಜ್ಯೋತಿ’ ಉಚಿತ ವಿದ್ಯುತ್ ಯೋಜನೆಯ ಸೌಲಭ್ಯ ಪಡೆಯಲು ಸಾರ್ವಜನಿಕರು ಸಲ್ಲಿಸಿದ ಅರ್ಜಿಯ ಸ್ಥಿತಿ ಪರಿಶೀಲಿಸಲು ಸರ್ಕಾರವು ಪ್ರತ್ಯೇಕ ವೆಬ್‌ಸೈಟ್ ಲಿಂಕೊಂದನ್ನು ಬಿಡುಗಡೆ ಮಾಡಿದೆ. ಆದರೆ ಈ ಲಿಂಕ್ ಮೂಲಕ ಅರ್ಜಿಯ ಸ್ಥಿತಿಗತಿ ತಿಳಿಯಲು ಬೇಕಾದ ಮಾಹಿತಿಯನ್ನು ನೀಡಿದರೂ ‘ಮಾಹಿತಿ ಲಭ್ಯವಿಲ್ಲ. ಗೃಹಜ್ಯೋತಿ ಯೋಜನೆಗೆ ನೋಂದಾಯಿಸಿಕೊಳ್ಳಿ’ ಎಂಬ ಸಂದೇಶ ಮೂಡಿಬರುತ್ತಿದೆ. ಹಾಗೆಂದು ಮತ್ತೊಮ್ಮೆ ನೋಂದಾಯಿಸಲು ಮುಂದಾದರೆ, ‘ಈ ಆಧಾರ್ ಸಂಖ್ಯೆ ಈಗಾಗಲೇ ಗೃಹಜ್ಯೋತಿ ಯೋಜನೆಗೆ ನೋಂದಣಿಯಾಗಿದೆ’ ಎಂಬ ಸಂದೇಶ ಬರುತ್ತದೆ. ಇದರಿಂದ ಅರ್ಜಿ ಸಲ್ಲಿಸಿದವರು ಗೊಂದಲಕ್ಕೆ ಈಡಾಗುತ್ತಿದ್ದಾರೆ. ವಿಪರ್ಯಾಸವೆಂದರೆ, ಅರ್ಜಿ ಸಲ್ಲಿಸಿದ ನಂತರ ಸ್ವೀಕೃತಿ ಪತ್ರ ಲಭಿಸಿದ್ದು, ಪರಿಶೀಲನೆಗಾಗಿ ಸಂಬಂಧಿತ ಎಸ್ಕಾಂಗೆ ಕಳುಹಿಸಲಾಗಿದೆ ಎಂಬ ಸಂದೇಶ ಬರುತ್ತದೆ. ಆದರೂ ಸಲ್ಲಿಸಿದ ಅರ್ಜಿಯ ಸ್ಥಿತಿ ತಿಳಿಯಲಾಗುತ್ತಿಲ್ಲ. ಜುಲೈ ತಿಂಗಳ ಉಚಿತ ವಿದ್ಯುತ್‌ಗಾಗಿ ಅರ್ಜಿ ಸಲ್ಲಿಸಲು ಕೊನೇ ದಿನಾಂಕ ಸಮೀಪಿಸುತ್ತಿದೆ. ಸರ್ಕಾರವು ಕೂಡಲೇ ಎಚ್ಚೆತ್ತು ಈ ಸಮಸ್ಯೆ ನಿವಾರಿಸಲು ಕಾರ್ಯಪ್ರವೃತ್ತ ಆಗಬೇಕಿದೆ.

ಜಿ.ನಾಗೇಂದ್ರ ಕಾವೂರು, ಸಂಡೂರು

ಹಿಂಸಾಚಾರ: ಪ್ರಜಾಪ್ರಭುತ್ವಕ್ಕೆ ಸವಾಲು

ಪಶ್ಚಿಮ ಬಂಗಾಳದಲ್ಲಿ ಪಂಚಾಯಿತಿ ಚುನಾವಣೆ ಸಂದರ್ಭದಲ್ಲಿ ನಡೆದಿರುವ ಹಿಂಸಾಚಾರ ಹಾಗೂ ಅದಕ್ಕೆ ಬಲಿಯಾದವರ ಸಂಖ್ಯೆಯನ್ನು ನೋಡಿ ದೇಶವೇ ಬೆಚ್ಚಿಬಿದ್ದಿದೆ. ಕರ್ನಾಟಕದಲ್ಲಿ ಇತ್ತೀಚೆಗಷ್ಟೇ ವಿಧಾನಸಭಾ ಚುನಾವಣೆಯು ಬಹುತೇಕ ಯಾವುದೇ ಹಿಂಸಾಚಾರ, ಸಾವು ನೋವು ಇಲ್ಲದೆ ಸುಗಮವಾಗಿ ನಡೆಯಿತು. ಪಶ್ಚಿಮ ಬಂಗಾಳದಲ್ಲಿ ಮತಪೆಟ್ಟಿಗೆ ಹೊತ್ತೊಯ್ಯುವುದು, ಬೆದರಿಸಿ ಮತ ಹಾಕಿಸಿಕೊಳ್ಳುವುದು ಎಲ್ಲವನ್ನೂ ನೋಡುತ್ತಿದ್ದರೆ, ನಾವು ಯಾವ ಕಾಲಘಟ್ಟದಲ್ಲಿ ಇದ್ದೇವೆ, ಅಭಿವ್ಯಕ್ತಿ ಸ್ವಾತಂತ್ರ್ಯ ಎನ್ನುವುದು ಇದೆಯೇ ಎಂಬಂಥ ಪ್ರಶ್ನೆಗಳು ಮೂಡುತ್ತವೆ. ಈ ಬಗೆಯ ಸಮಾಜಘಾತುಕ ಚಟುವಟಿಕೆಗಳನ್ನು ಕೂಡಲೇ ಮಟ್ಟ ಹಾಕದಿದ್ದರೆ ಪ್ರಜಾಪ್ರಭುತ್ವ ಅರ್ಥ ಕಳೆದುಕೊಳ್ಳುತ್ತದೆ.

ಎಂ.ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು

ಅಭಿವೃದ್ಧಿಗೆ ದಾನಿಗಳ ಸಹಕಾರ ಇರಲಿ

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಬಹಳ ಹಿಂದಿನಿಂದಲೂ ದಾನ ಚಿಂತಾಮಣಿ ಅತ್ತಿಮಬ್ಬೆಯಂತಹ ಮಹಾದಾನಿಗಳಿದ್ದಾರೆ. ಆ ದಾನಿಗಳು ಕೆರೆ ಕಟ್ಟಿಸಿದ, ಬಾವಿ ತೋಡಿಸಿದ, ಅಣೆಕಟ್ಟು ನಿರ್ಮಿಸಿದ ಎಷ್ಟೋ ಉದಾಹರಣೆಗಳು ಇತಿಹಾಸದಲ್ಲಿ ಲಭ್ಯವಿವೆ. ಅಂತಹ ಉದಾರಿ ಶಕ್ತಿವಂತ ಜನ ಈಗಲೂ ಇದ್ದಾರೆ. ಜೊತೆಗೆ ಸರ್ಕಾರದಿಂದ ಅನೇಕ ರೀತಿಯ ಸಹಾಯ ಪಡೆದು ಬೆಳೆದಿರುವ ಕಾರ್ಪೊರೇಟ್ ಸಂಸ್ಥೆಗಳಿದ್ದು, ಪ್ರತಿಯಾಗಿ ಈ ಸಮಾಜಕ್ಕೆ ಏನನ್ನಾದರೂ ದಾನದ ರೂಪದಲ್ಲಿ ಸಹಾಯ ಮಾಡಿ ಸಮಾಜದ ಋಣ ತೀರಿಸಬೇಕೆಂಬ ಮನಸ್ಸೂ ಅವುಗಳಿಗೆ ಇದೆ.

ತೀರಾ ಅಗತ್ಯವಿರುವ ಶಾಲೆ, ಕಾಲೇಜು, ಆಸ್ಪತ್ರೆ ಕಟ್ಟಡ, ಶೌಚಾಲಯಗಳ ನಿರ್ಮಾಣ, ಕೆರೆ ಕಲ್ಯಾಣಿಗಳ ಹೂಳು ತೆಗೆಸಿ ನೀರು ನಿಲ್ಲಿಸುವಂತಹ ಅಭಿವೃದ್ಧಿ ಕೆಲಸಗಳಿಗೆ ಅಂತಹವರಿಂದ ಸಹಾಯ ಪಡೆದುಕೊಳ್ಳಬಾರದೇಕೆ? ಅಂತಹ ದಾನಿಗಳ ಹೆಸರನ್ನು ಬಜೆಟ್ ಪ್ರತಿಯಲ್ಲಿ ಮುದ್ರಿಸಿ ಬೆಳಕಿಗೆ ತರುವ ಹಾಗೂ ಧರ್ಮಾರ್ಥ ದಾನಿಗಳಿಗೆ ಉತ್ತೇಜನ ಕೊಡುವ ಯೋಜನೆಯನ್ನು ಸರ್ಕಾರ ಜಾರಿಗೆ ತರುವುದು ಒಳ್ಳೆಯದು.

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವೈಯಕ್ತಿಕ ಕಾನೂನು ಗತಿ ಏನು?



ದೇಶದಲ್ಲೀಗ 'ಏಕರೂಪ ನಾಗರಿಕ ಸಂಹಿತೆ'ಯನ್ನು ಜಾರಿಗೆ ತರುವ ಬಗ್ಗೆ ಕೇಂದ್ರ ಸರ್ಕಾರ ಉತ್ಸುಕತೆ ತೋರಿದೆ. ಕೇಂದ್ರದ ಆಡಳಿತಾರೂಢ ಬಿಜೆಪಿಯ ಚುನಾವಣಾ ಪ್ರಣಾಳಿಕೆಯಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಯ ವಿಚಾರ ಇತ್ತು. ಅದನ್ನು ಜಾರಿಗೆ ತರುವ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಈಚೆಗೆ ಮಾತನಾಡಿದ್ದಾರೆ. ದೇಶದಲ್ಲಿ ಕೆಲವು ವೈಯಕ್ತಿಕ ಕಾನೂನುಗಳನ್ನು ಹೊರತುಪಡಿಸಿ, ಉಳಿದೆಲ್ಲಾ ಕಾನೂನುಗಳು ದೇಶದ ಎಲ್ಲಾ ಜನರಿಗೂ ಸಮಾನವಾಗಿ ಅನ್ವಯವಾಗುತ್ತವೆ. ಏಕರೂಪ ನಾಗರಿಕ ಸಂಹಿತೆ ಜಾರಿಗೆ ತಂದರೆ, ದೇಶದ ಜನರ ಜೀವನವನ್ನು ನಿರ್ದೇಶಿಸುವ ವೈಯಕ್ತಿಕ ಕಾನೂನುಗಳನ್ನು ರದ್ದುಪಡಿಸಬೇಕಾಗುತ್ತದೆ

ಪ್ರಜಾವಾಣಿ ವಾರ್ತೆ

ವೈಯಕ್ತಿಕ ಕಾನೂನುಗಳು ಎಂದರೆ ಯಾವುದೇ ಇಬ್ಬರು ವ್ಯಕ್ತಿಗಳ ನಡುವಣ ಕೌಟುಂಬಿಕ ಸಂಬಂಧವನ್ನು ವಿವರಿಸುವ ಕಾನೂನುಗಳು ಎಂದು ಸ್ಥೂಲವಾಗಿ ಅರ್ಥೈಸಬಹುದು. ವಿವರವಾಗಿ ನೋಡಿದರೆ ಹೆಣ್ಣು-ಗಂಡಿನ ನಡುವಣ ವೈವಾಹಿಕ ಸಂಬಂಧ, ಆಸ್ತಿಯ ಹಕ್ಕು ಮತ್ತು ಉತ್ತರಾಧಿಕಾರವನ್ನು ಈ ವೈಯಕ್ತಿಕ ಕಾನೂನುಗಳು ನಿರ್ದೇಶಿಸುತ್ತವೆ. ಏಕರೂಪ ನಾಗರಿಕ ಸಂಹಿತೆ ಜಾರಿಯಾಗುವುದಾದರೆ, ಈ ವೈಯಕ್ತಿಕ ಕಾನೂನುಗಳನ್ನು ತೆಗೆದುಹಾಕಬೇಕಾಗುತ್ತದೆ.

ಹೆಣ್ಣು ಮತ್ತು ಗಂಡಿನ ನಡುವಣ ವೈವಾಹಿಕ ಸಂಬಂಧವನ್ನು ನಿರ್ದೇಶಿಸುವ ಅಥವಾ ಅದು ಇದೇ ರೀತಿ ಇರಬೇಕು ಎಂದು ಹೇಳುವ ವೈಯಕ್ತಿಕ ಕಾನೂನುಗಳನ್ನು ವಿವಾಹ ಕಾನೂನು ಎಂದು ವರ್ಗೀಕರಿಸಲಾಗಿದೆ. ಇವು ಒಂದು ಧರ್ಮದಿಂದ ಬೇರೊಂದು ಧರ್ಮಕ್ಕೆ, ಒಂದು ಸಮುದಾಯದಿಂದ ಬೇರೊಂದು ಸಮುದಾಯಕ್ಕೆ ಭಿನ್ನವಾಗಿವೆ. ಧರ್ಮ ಮತ್ತು ಸಮುದಾಯದ ಸಂಸ್ಕೃತಿಗೆ ಅನುಗುಣವಾಗಿ ವಿವಾಹ ಕಾನೂನುಗಳನ್ನು ರೂಪಿಸಲಾಗಿದೆ. ಸ್ವಾತಂತ್ರ್ಯಪೂರ್ವದ ಬ್ರಿಟಿಷ್ ಭಾರತದಲ್ಲೇ ಈ ಧಾರ್ಮಿಕ ಕಟ್ಟಳೆಗಳಿಗೆ ಕಾಯ್ದೆಯ ರೂಪ ನೀಡಲಾಗಿತ್ತು. ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಅವನ್ನು ಮುಂದುವರಿಸಲಾಗಿದೆ. ಆನಂತರ ಹಲವು ಬಾರಿ ಈ ಕಾನೂನುಗಳಿಗೆ ತಿದ್ದುಪಡಿ ತರಲಾಗಿದೆ.

ವೈವಾಹಿಕ ಸಂಬಂಧ ಹೇಗೆ ನಡೆಯಬೇಕು ಎಂಬುದನ್ನು ಈ ಕಾನೂನುಗಳು ವಿವರಿಸುವುದರ ಜತೆಗೆ, ವಿಚ್ಛೇದನದ ಮೂಲಕ ವೈವಾಹಿಕ ಸಂಬಂಧದಿಂದ ಬೇರೆಯಾಗುವುದು ಹೇಗೆ ಎಂಬುದನ್ನೂ ಈ ಕಾನೂನುಗಳು ವಿವರಿಸುತ್ತವೆ. ವಿಚ್ಛೇದನದ ನಂತರ ಪರಿಹಾರ, ಮಕ್ಕಳ ನಿರ್ವಹಣೆಯ ಹಕ್ಕು ಮತ್ತು ಕರ್ತವ್ಯಗಳು, ಎರಡನೇ ವಿವಾಹ... ಹೀಗೆ ವಿವಾಹಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನೂ ಈ ಕಾನೂನುಗಳು ನಿರ್ವಹಿಸುತ್ತವೆ.

ಆಸ್ತಿ ಮತ್ತು ಉತ್ತರಾಧಿಕಾರದ ಹಕ್ಕನ್ನೂ ಈ ವೈಯಕ್ತಿಕ ಕಾನೂನುಗಳು ನಿರ್ದೇಶಿಸುತ್ತವೆ. ಎಲ್ಲಾ ಭಾರತೀಯರಿಗೂ ಆಸ್ತಿ ಮತ್ತು ಉತ್ತರಾಧಿಕಾರದ ಹಕ್ಕು ಏಕಪ್ರಕಾರವಾಗಿ ಅನ್ವಯವಾಗುವುದಿಲ್ಲ. ಧರ್ಮದಿಂದ ಧರ್ಮಕ್ಕೆ ಇವು ಬದಲಾಗುತ್ತವೆ. ಒಂದೇ ಧರ್ಮದಲ್ಲಿನ ಕೆಲವು ಸಮುದಾಯಗಳು ಭಿನ್ನವಾದ ಆಸ್ತಿ ಮತ್ತು ಉತ್ತರಾಧಿಕಾರದ ನಿಯಮಗಳನ್ನು ಪಾಲಿಸುತ್ತವೆ. ಇವನ್ನೂ ವೈಯಕ್ತಿಕ ಕಾನೂನುಗಳು ಎಂದು ಪರಿಗಣಿಸಲಾಗಿದೆ.

ಏಕರೂಪ ನಾಗರಿಕ ಸಂಹಿತೆಯ ಚರ್ಚೆ

ಇವು ವೈಯಕ್ತಿಕ ಕಾನೂನುಗಳು ಆಗಿರುವ ಕಾರಣದಿಂದ ಇವು ಒಂದೇ ಧರ್ಮದ ಎಲ್ಲಾ ಜನರಿಗೂ ಏಕಪ್ರಕಾರವಾಗಿ ಅನ್ವಯವಾಗುವುದಿಲ್ಲ. ಆಸ್ತಿ ಮತ್ತು ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ ಹಿಂದೂ ಧರ್ಮದಲ್ಲಿ ಕೆಲವು ಸಮುದಾಯಗಳು ಭಿನ್ನ ನಿಯಮಗಳನ್ನು ಅನುಸರಿಸುತ್ತವೆ. ಕೇರಳದ ನಂಬೂದಿರಿ ಸಮುದಾಯ, ಭಾರತದ ಎಲ್ಲೆಡೆ ಇರುವ ಕೆಲವು ಬುಡಕಟ್ಟು ಸಮುದಾಯಗಳಲ್ಲಿ ಮನೆಯ ಯಜಮಾನಿಕೆ ಮತ್ತು ಆಸ್ತಿಯ ಹಕ್ಕು ಭಿನ್ನವಾಗಿವೆ. ಕೇರಳದ ನಂಬೂದಿರಿ ಸಮುದಾಯವು ಭಿನ್ನವಾದ ಕೌಟುಂಬಿಕ ವ್ಯವಸ್ಥೆ ಹೊಂದಿದೆ. ಕರ್ನಾಟಕದ ಬಂಟ ಸಮುದಾಯ, ಮೇಘಾಲಯ ಮತ್ತು ಛತ್ತೀಸಗಡದ ಕೆಲವು ಸಮುದಾಯಗಳು ಮಾತೃಪ್ರಧಾನ ಕೌಟುಂಬಿಕ ವ್ಯವಸ್ಥೆ ಹೊಂದಿವೆ. ಹಿಂದೂ ವಿವಾಹ ಕಾಯ್ದೆ ಮತ್ತು ಹಿಂದೂ ಉತ್ತರಾಧಿಕಾರ ಕಾಯ್ದೆಯ ನಿಯಮಗಳು ಈ ಸಮುದಾಯಗಳಿಗೆ ಅನ್ವಯವಾಗುವುದಿಲ್ಲ.

ಭಾರತದ ಹಲವು ರಾಜ್ಯಗಳಲ್ಲಿ ಇರುವ ಬುಡಕಟ್ಟು ಸಮುದಾಯಗಳಲ್ಲಿ ಹೆಣ್ಣುಮಗಳಿಗೆ ಆಸ್ತಿಯ ಹಕ್ಕು ಇಲ್ಲ. ಹಿಂದೂ ಉತ್ತರಾಧಿಕಾರ ಕಾಯ್ದೆಯ ನಿಯಮಗಳು ಈ ಬುಡಕಟ್ಟು ಸಮುದಾಯಗಳಿಗೆ ಅನ್ವಯವಾಗುವುದಿಲ್ಲ. ವಿವಾಹ, ಆಸ್ತಿ ಮತ್ತು ಉತ್ತರಾಧಿಕಾರಕ್ಕೆ ಈ ಸಮುದಾಯಗಳು ತಮ್ಮದೇ ವೈಯಕ್ತಿಕ ನಿಯಮಗಳನ್ನು ಪಾಲಿಸುತ್ತವೆ. ಭಾರತದ ಸಂವಿಧಾನವು ಈ ವೈಯಕ್ತಿಕ ಕಾನೂನುಗಳನ್ನು ಮಾನ್ಯ ಮಾಡಿದೆ. ವೈಯಕ್ತಿಕ ಕಾನೂನುಗಳಲ್ಲಿನ ಈ ವೈವಿಧ್ಯವನ್ನು ಏಕರೂಪ ನಾಗರಿಕ ಸಂಹಿತೆ ಏಕರೂಪಕ್ಕೆ ತರುತ್ತದೆ.

ವೈಯಕ್ತಿಕ ಕಾನೂನುಗಳ ವೈವಿಧ್ಯ

ದೇಶದಲ್ಲಿ ಹೆಚ್ಚಿನ ಧರ್ಮದವರಿಗೆ ಅವರದ್ದೇ ಆದ ವೈಯಕ್ತಿಕ ಕಾನೂನುಗಳಿವೆ. ಕೆಲವು ಕಾನೂನುಗಳು ಕೆಲವು ಪ್ರದೇಶಕ್ಕಷ್ಟೇ ಅನ್ವಯವಾಗುತ್ತವೆ

ಹಿಂದೂ ವಿವಾಹ ಕಾಯ್ದೆ


ಇದು ದೇಶದ ಬಹುತೇಕ ಹಿಂದೂಗಳಿಗೆ ಅನ್ವಯಾಗುತ್ತದೆ. ಹೆಸರಿನಲ್ಲಿ 'ಹಿಂದೂ ವಿವಾಹ ಕಾಯ್ದೆ' ಎಂದು ಇದೆಯಾದರೂ, ಸಿಖ್, ಜೈನ ಮತ್ತು ಬೌದ್ಧ ಧರ್ಮೀಯರಿಗೂ ಈ ಕಾಯ್ದೆ ಅನ್ವಯವಾಗುತ್ತದೆ. ವಿವಾಹವು ಒಂದು ಪವಿತ್ರ ಸಂಬಂಧ ಎಂದು ಈ ಕಾಯ್ದೆಯು ಪರಿಗಣಿಸುತ್ತದೆ. ವೈವಾಹಿಕ ಸಂಬಂಧ, ವೈವಾಹಿಕ ಸಂಬಂಧದಲ್ಲಿನ ಜವಾಬ್ದಾರಿಗಳು, ವಿಚ್ಛೇದನಕ್ಕೆ ಕಾರಣಗಳು, ವಿಚ್ಛೇದನದ ಪ್ರಕ್ರಿಯೆಗಳು, ವಿಚ್ಛೇದನದ ನಂತರದ ಪರಿಹಾರಗಳು, ಎರಡನೇ ಮದುವೆ ಮೊದಲಾದ ಅಂಶಗಳನ್ನು ಈ ಕಾಯ್ದೆಯು ನಿರ್ದೇಶಿಸುತ್ತದೆ. ಈ ಕಾಯ್ದೆಗೆ ಹಲವು ಬಾರಿ ತಿದ್ದುಪಡಿ ತರಲಾಗಿದೆ.

ಹಿಂದೂ ಉತ್ತರಾಧಿಕಾರ ಕಾಯ್ದೆ

ಇದು ದೇಶದ ಬಹುತೇಕ ಹಿಂದೂಗಳಿಗೆ, ಸಿಖ್, ಜೈನ ಮತ್ತು ಬೌದ್ಧ ಧರ್ಮದವರಿಗೆ ಅನ್ವಯಾಗುತ್ತದೆ. ಈ ಧರ್ಮದ ಜನರಲ್ಲಿ ವಿವಾಹ ಮತ್ತು ಕೌಟುಂಬಿಕ ಸಂಬಂಧದಲ್ಲಿ ಆಸ್ತಿಯ ಹಕ್ಕು ಯಾರಿಗೆಲ್ಲಾ ದೊರೆಯುತ್ತದೆ ಎಂಬುದನ್ನು ಈ ಕಾಯ್ದೆಯು ವಿವರಿಸುತ್ತದೆ. ಯಾವ ಸ್ವರೂಪದ ಆಸ್ತಿಗಳ ಮೇಲೆ ಈ ಕಾಯ್ದೆಯ ಅನ್ವಯ ಹಕ್ಕು ಸಾಧಿಸಬಹುದು ಅಥವಾ ವಾರಸುದಾರಿಕೆ ಸಾಧಿಸಬಹುದು ಎಂಬುದನ್ನು ಇದರಲ್ಲಿ ವಿವರಿಸಲಾಗಿದೆ. ಕುಟುಂಬದಲ್ಲಿನ ವ್ಯಕ್ತಿಗಳ ಸಂಬಂಧದ ಸ್ವರೂಪ, ಆ ಸಂಬಂಧದ ಆಧಾರದ ಮೇಲೆ ಅವರಿಗೆ ದೊರೆಯುವ ಆಸ್ತಿ ಮತ್ತು ಉತ್ತರಾಧಿಕಾರದ ಹಕ್ಕುಗಳು ಎಂಥವು ಎಂಬುದನ್ನು ಇದರಲ್ಲಿ ವಿವರಿಸಲಾಗಿದೆ. ಹೀಗಾಗಿ ಹಿಂದೂ, ಸಿಖ್, ಜೈನ, ಬೌದ್ಧ ಧರ್ಮೀಯರಿಗೆ ಇದು ಅತ್ಯಂತ ಮಹತ್ವದ ವೈಯಕ್ತಿಕ ಕಾನೂನಾಗಿದೆ.

ಹಿಂದೂ ಅಪ್ರಾಪ್ತ ವಯಸ್ಕರು ಮತ್ತು ಪಾಲಕತ್ವ ಕಾಯ್ದೆ

ಹಿಂದೂ ಕುಟುಂಬದಲ್ಲಿನ ಅಪ್ರಾಪ್ತ ವಯಸ್ಕರ ಹೊಣೆಗಾರಿಕೆಯನ್ನು ವಿವರಿಸುವ ಕಾಯ್ದೆ ಇದಾಗಿದೆ. ಇದು ಜೈನ, ಬೌದ್ಧ ಮತ್ತು ಸಿಖ್ ಧರ್ಮದವರಿಗೂ ಅನ್ವಯವಾಗುತ್ತದೆ. ಒಂದು ಕುಟುಂಬದಲ್ಲಿನ ಅಪ್ರಾಪ್ತ ವಯಸ್ಕರ ಹೊಣೆಗಾರಿಕೆ ಯಾರದ್ದು, ಅವರಿಗೆ 18 ವರ್ಷ ತುಂಬುವವರೆಗೆ ಅವರ ಆಸ್ತಿಯ ಹೊಣೆಗಾರಿಕೆ ಯಾರದು ಎಂಬುದನ್ನು ಈ ಕಾಯ್ದೆ ವಿವರಿಸುತ್ತದೆ. ಇದನ್ನೂ ಒಂದು ವೈಯಕ್ತಿಕ ಕಾನೂನು ಎಂದು ಪರಿಗಣಿಸಲಾಗಿದೆ.



ಮುಸ್ಲಿಂ ವಿವಾಹ ಕಾಯ್ದೆ

ಸ್ವಾತಂತ್ರ್ಯಪೂರ್ವದಲ್ಲೇ ಈ ಕಾನೂನು ಜಾರಿಯಲ್ಲಿತ್ತು. ಆನಂತರ ಈ ಕಾಯ್ದೆಗೆ ಹಲವು ಬಾರಿ ತಿದ್ದುಪಡಿ ತರಲಾಗಿದೆ. ಇದು ಮುಸ್ಲಿಂ ವೈಯಕ್ತಿಕ ಕಾನೂನಿನಲ್ಲೇ ಅತ್ಯಂತ ಮಹತ್ವದ ಕಾಯ್ದೆಯಾಗಿದೆ. ವಿವಾಹವು ಒಂದು ಗಂಡು ಮತ್ತು ಹೆಣ್ಣಿನ ನಡುವಣ ಒಪ್ಪಂದ ಎಂದು ಈ ಕಾನೂನು ಪರಿಗಣಿಸುತ್ತದೆ. ಇಬ್ಬರೂ ಒಪ್ಪಿದರೆ ಮಾತ್ರ ಆ ವಿವಾಹ ಏರ್ಪಡುತ್ತದೆ ಮತ್ತು ಇದಕ್ಕೆ ಇಬ್ಬರು ಸಾಕ್ಷಿಗಳು ಇರಲೇಬೇಕು. ವೈವಾಹಿಕ ಸಂಬಂಧದ ಜವಾಬ್ದಾರಿಗಳು, ವೈವಾಹಿಕ ಒಪ್ಪಂದದ ಹೊಣೆಗಾರಿಕೆಗಳನ್ನು ಈ ಕಾನೂನು ವಿವರಿಸುತ್ತದೆ. ವೈವಾಹಿಕ ಸಂಬಂಧದ ಒಪ್ಪಂದವನ್ನು ಯಾರೇ ಮುರಿದರೂ, ಸಂಬಂಧ ಮುಂದುವರಿಸುವುದು ಅಸಾಧ್ಯ ಎನಿಸಿದಾಗ ವಿಚ್ಛೇದನ ಪಡೆಯುವ ಹಕ್ಕನ್ನು ಗಂಡ-ಹೆಂಡತಿ ಇಬ್ಬರಿಗೂ ಈ ಕಾಯ್ದೆ ನೀಡುತ್ತದೆ. ನ್ಯಾಯಾಲಯದ ಮೊರೆ ಹೋಗದೆಯೇ, ತ್ರಿವಳಿ ತಲಾಖ್ ಅಡಿಯಲ್ಲಿ ವಿಚ್ಛೇದನ ಪಡೆಯುವ ಪದ್ಧತಿ ಜಾರಿಯಲ್ಲಿ ಇತ್ತು. ಅದನ್ನು ಈಚೆಗೆ ರದ್ದುಪಡಿಸಲಾಗಿದೆ. ಆಸ್ತಿಯ ಮತ್ತು ಉತ್ತರಾಧಿಕಾರದ ಹಕ್ಕನ್ನೂ ಮುಸ್ಲಿಂ ವೈಯಕ್ತಿಕ ಕಾನೂನಿನಲ್ಲಿ ವಿವರಿಸಲಾಗಿದೆ.

ಆಧಾರ: ಹಿಂದೂ ವಿವಾಹ ಕಾಯ್ದೆ, ಹಿಂದೂ ಉತ್ತರಾಧಿಕಾರ ಕಾಯ್ದೆ, ಹಿಂದೂ ಅಪ್ರಾಪ್ತ ವಯಸ್ಕರು ಮತ್ತು ಪಾಲಕತ್ವ ಕಾಯ್ದೆ, ಕೇಂದ್ರ ಕಾನೂನು ಆಯೋಗದ 'ಕೌಟುಂಬಿಕ ಕಾನೂನುಗಳ ಸುಧಾರಣೆ' ಅಧ್ಯಯನ ವರದಿ, ಪಿಟಿಐ

ಕ್ರೈಸ್ತ ವಿವಾಹ ಕಾಯ್ದೆ

ಭಾರತದಲ್ಲಿರುವ ಕ್ರೈಸ್ತ ಧರ್ಮೀಯರ ವಿವಾಹ ಮತ್ತು ವಿಚ್ಛೇದನವನ್ನು ಈ ಕಾಯ್ದೆ ವಿವರಿಸುತ್ತದೆ. ವಿವಾಹದ ರೂಪುರೇಷೆಗಳು, ಉತ್ತರಾಧಿಕಾರದ ಹಕ್ಕುಗಳು, ವಿಚ್ಛೇದನಕ್ಕೆ ಕಾರಣಗಳು, ವಿಚ್ಛೇದನದ ಪ್ರಕ್ರಿಯೆಗಳು, ಪರಿಹಾರಗಳನ್ನು ಈ ಕಾಯ್ದೆ ವಿವರಿಸುತ್ತದೆ. ಭಾರತೀಯ ಕ್ರೈಸ್ತರಿಗೆ ಇದು ಅನ್ವಯವಾಗುತ್ತದೆ. ಕ್ರೈಸ್ತ ಧರ್ಮಕ್ಕೆ ಮತಾಂತರವಾದ ಇತರ ಭಾರತೀಯರಿಗೂ ಈ ಕಾಯ್ದೆಯ ನಿಯಮಗಳು ಅನ್ವಯವಾಗುತ್ತವೆ.

ಪಾರ್ಸಿ ವಿವಾಹ ಕಾಯ್ದೆ

ಪಾರ್ಸಿ ಧರ್ಮದವರ ವೈವಾಹಿಕ ಸಂಬಂಧ ಮತ್ತು ವಿಚ್ಛೇದನವನ್ನು ನಿರ್ದೇಶಿಸಲು ಪ್ರತ್ಯೇಕ ಕಾನೂನು ರಚಿಸಲಾಗಿದೆ. ಭಾರತದಲ್ಲಿನ ಯಹೂದಿಗಳಿಗೂ ಇದು ಅನ್ವಯವಾಗುತ್ತದೆ.

- ಈಶಾನ್ಯ ಭಾರತದ ರಾಜ್ಯಗಳ ಗುಡ್ಡಗಾಡು ಪ್ರದೇಶ ನಿವಾಸಿಗಳಿಗೆ 371-ಎ, 371-ಬಿ ಮತ್ತು 371-ಐ ವಿಧಿಗಳ ಅಡಿಯಲ್ಲಿ ಸ್ವಾಯತ್ತ ಜಿಲ್ಲೆಗಳ ಅಧಿಕಾರ ನೀಡಲಾಗಿದೆ. ಈ ಜನರು ವಿವಾಹ, ಆಸ್ತಿ, ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ ತಮ್ಮದೇ ಕಾನೂನುಗಳನ್ನು ರಚಿಸಿಕೊಳ್ಳಲು ಮತ್ತು ಅವನ್ನು ಪಾಲಿಸಲು ಅವಕಾಶವಿದೆ
- ನಂಬೂದಿರಿ ಸಮುದಾಯಕ್ಕೆ ಸಂಬಂಧಿಸಿದಂತೆ ಮದ್ರಾಸ್ ನಂಬೂದಿರಿ ಕಾಯ್ದೆ, ಮದ್ರಾಸ್ ಕಾಯ್ದೆ, ಕೊಚ್ಚಿ ನಂಬೂದಿರಿ ಕಾಯ್ದೆಗಳು ಜಾರಿಯಲ್ಲಿವೆ

ಸಿನಿ ಬಿಟ್ಸ್

'ಶೀಲ' ಚಿತ್ರ ಜುಲೈ 28ಕ್ಕೆ ತೆರೆಗೆ

ನಟಿ ರಾಗಿಣಿ ದ್ವಿವೇದಿ ಪ್ರಮುಖ ಪಾತ್ರದಲ್ಲಿ ನಟಿಸಿರುವ 'ಶೀಲ' ಚಿತ್ರ ಜುಲೈ 28ಕ್ಕೆ ತೆರೆಗೆ ಬರಲಿದೆ. ಮಲಯಾಳಂ ಹಾಗೂ ಕನ್ನಡದಲ್ಲಿ ನಿರ್ಮಾಣವಾಗಿರುವ ಚಿತ್ರಕ್ಕೆ ಬಾಲು ನಾರಾಯಣನ್ ಆ್ಯಕ್ಷನ್-ಕಟ್ ಹೇಳಿದ್ದಾರೆ. ಉದ್ಯಮಿ ಡಿ.ಎಂ.ಪಿಳ್ಳೈ ಬಂಡವಾಳ ಹೂಡಿದ್ದಾರೆ.

'ಇದೊಂದು ಮಹಿಳಾ ಪ್ರಧಾನ ಚಿತ್ರ. ಪ್ರಸ್ತುತ ಹೆಣ್ಣುಮಕ್ಕಳು ದಿನನಿತ್ಯ ಸಮಾಜದಲ್ಲಿ ಎದುರಿಸುತ್ತಿರುವ ಹಲವು ಸಮಸ್ಯೆಗಳ ಸುತ್ತ ಕಥೆ ಸಾಗುತ್ತದೆ. ಹೆಣ್ಣು ಮನಸ್ಸು ಮಾಡಿದರೆ, ತನಗೆದುರಾಗುವ ಸಮಸ್ಯೆಯನ್ನು ತಾನೇ ಹೇಗೆ ಬಗೆಹರಿಸಿಕೊಳ್ಳಬಹುದು ಎಂಬುದನ್ನು ಕೂಡ ಈ ಚಿತ್ರದಲ್ಲಿ ತೋರಿಸಿದ್ದೇವೆ. ಹೆಣ್ಣು ಲಕ್ಷ್ಮೀ ಸ್ವರೂಪಿಯೂ ಹೌದು, ಕಾಳಿ ಸ್ವರೂಪಿ ಕೂಡ ಎಂಬುದು ಚಿತ್ರ ನೋಡಿದಾಗ ತಿಳಿಯುತ್ತದೆ' ಎಂದು ರಾಗಿಣಿ ದ್ವಿವೇದಿ ಹೇಳಿದರು. ಕೇರಳ ಹಾಗೂ ಬೆಂಗಳೂರಿನಲ್ಲಿ ಚಿತ್ರೀಕರಣ ನಡೆದಿದೆ. ಚಿತ್ರ ಮೊದಲು ಕನ್ನಡದಲ್ಲಿ ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ಹೇಳಿದೆ. ಅವಿನಾಶ್, ಶೋಭ್ ರಾಜ್, ಚಿತ್ರಾ ಶೆಣೈ ಮುಂತಾದವರಿದ್ದಾರೆ. ❖



ರಾಗಿಣಿ



'ಎವಿಡೆನ್ಸ್' ಕೇಳುತ್ತಿರುವ ಮಾನಸ ಜೋಶಿ

ಮಾನಸ ಜೋಶಿ

ಹೊಸಬರೇ ಸೇರಿ ನಿರ್ಮಿಸಿರುವ 'ಎವಿಡೆನ್ಸ್' ಚಿತ್ರ ಬಿಡುಗಡೆಗೆ ಸಜ್ಜಾಗಿದೆ. ಈ ಹಿಂದೆ 'ಜೋಶ್' ಚಿತ್ರದಲ್ಲಿ ನಟಿಸಿದ್ದ ರೋಬೊ ಗಣೇಶನ್ ನಾಯಕನಾಗಿ, 'ಕಿರಗೂರಿನ ಗಯ್ಯಾಳಿಗಳು' ಖ್ಯಾತಿಯ ಮಾನಸ ಜೋಶಿ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಚಿತ್ರಕ್ಕೆ ಪ್ರವೀಣ್ ರಾಮಕೃಷ್ಣ ಆಕ್ಷನ್ ಕಟ್ ಹೇಳಿದ್ದಾರೆ. ಶ್ರೀನಿವಾಸ್‌ಪ್ರಭು, ಕೆ.ಮಾದೇಶ್, ನಟರಾಜ್ ಸಿ.ಎಸ್. ಚಿತ್ರದ ನಿರ್ಮಾಪಕರು.

'ಈ ತಿಂಗಳ ಅಂತ್ಯದಲ್ಲಿ ಚಿತ್ರದ ಟೀಸರ್ ಬಿಡುಗಡೆ ಮಾಡಲು ಆಲೋಚಿಸಿದ್ದು, ಆಗಸ್ಟ್‌ನಲ್ಲಿ ಚಿತ್ರ ತೆರೆಗೆ ಬರಲಿದೆ. ಕೊಲೆಯೊಂದು ನಡೆದಾಗ ಅದರ ಸಾಕ್ಷ್ಯಾಧಾರಗಳನ್ನು ಹುಡುಕುವ ಪ್ರಕ್ರಿಯೆ ಸುತ್ತ ನಡೆಯುವ ಕ್ರೈಮ್, ಸಸ್ಪೆನ್ಸ್ , ಥ್ರಿಲ್ಲರ್ ಜೊತೆಗೆ ತ್ರಿಕೋನ ಪ್ರೇಮಕಥಾ ಹಂದರ ಹೊಂದಿರುವ ಈ ಚಿತ್ರವಿದು' ಎಂದು ನಿರ್ದೇಶಕ ಪ್ರವೀಣ್ ಹೇಳಿದರು.

ಆಕರ್ಷ್ ಆದಿತ್ಯ, ರಚಿತಾ, ಪೂಜಿತ ಬೋಬೆಗೌಡ, ಶಶಿಧರ ಕೋಟೆ ಮುಂತಾದವರು ತಾರಾಗಣದಲ್ಲಿದ್ದಾರೆ. ಬೆಂಗಳೂರು, ಮಂಗಳೂರು, ಚಿಕ್ಕಮಗಳೂರು ಮತ್ತು ನೆಲಮಂಗಲ ಹೊರವಲಯದಲ್ಲಿ ಚಿತ್ರೀಕರಣ ನಡೆದಿದೆ. ಆರೋನ್ ಕಾರ್ತಿಕ್ ವೆಂಕಟೇಶ್ ಸಂಗೀತ, ರವಿ ಸುವರ್ಣ ಛಾಯಾಗ್ರಹಣ, ಶೇಷಾಚಲ ಕುಲಕರ್ಣಿ ಸಂಕಲನ ಈ ಚಿತ್ರಕ್ಕಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಬಂಗಾಳದಲ್ಲಿ ಗಾಯಗೊಂಡ ಸೇನಾ ಯೋಧನನ್ನು ಆಸ್ಪತ್ರೆಗೆ ಕರೆದೊಯ್ಯುವಾಗ ವಾಹನ ತಡೆದು ನಿಲ್ಲಿಸಿದ ಸ್ಥಿತಿ ಇದು. ನಿಮ್ಮ ಮಕ್ಕಳ ಭವಿಷ್ಯ ನೋಡಿ, ಮುಸ್ಲಿಮರ ಸಂಖ್ಯೆ ಶೇ 30ರಷ್ಟು ಇರುವಾಗಿನ ಸ್ಥಿತಿ ಇದು ಮತ್ತು ಅಲ್ಲಿ ಅವರನ್ನು ಬೆಂಬಲಿಸುವ ಸೆಕ್ಯುಲರ್ ಸರ್ಕಾರವಿದೆ. ಪರಿಸ್ಥಿತಿ ತೀರಾ ಹದಗೆಡುವವರೆಗೆ ಹಿಂದೂಗಳು ಕಣ್ಣುಮುಚ್ಚೇ ಇರುತ್ತಾರೆ ಮತ್ತು ಯೋಗಿ, ಮೋದಿಯವರನ್ನು ಶಪಿಸುತ್ತಲೇ ಇರುತ್ತಾರೆ. ಮುಸ್ಲಿಮರ ಧೈರ್ಯ ನೋಡಿ, ಅವರು ಸೇನೆಯನ್ನೇ ಎದುರಿಸುತ್ತಿದ್ದಾರೆ. ಹಿಂದೂಗಳಿಗೆ ಏನಾಗಿದೆ? ಎದ್ದೇಳಿ ಇನ್ನೂ ಸಮಯವಿದೆ ಇವರನ್ನು ವಿರೋಧಿಸುವುದೋ ಶರಣಾಗುವುದೋ ನಿಮಗೆ ಬಿಟ್ಟಿದ್ದು' ಎಂಬ ವಿವರ ಇರುವ ಪೋಸ್ಟ್ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದರ ಜತೆ ಕೆಲವು ಮುಸ್ಲಿಮರು ಸೇನಾ ವಾಹನವೊಂದನ್ನು ತಡೆದು ನಿಲ್ಲಿಸುವ ವಿಡಿಯೊವನ್ನು ಹಂಚಿಕೊಳ್ಳಲಾಗಿದೆ. ಆದರೆ, ಇದು ಸುಳ್ಳು ಸುದ್ದಿ.



'ಪ್ರಧಾನಿ ನರೇಂದ್ರ ಮೋದಿ ಅವರು 2021ರ ಮಾರ್ಚ್‌ನಲ್ಲಿ ಬಾಂಗ್ಲಾದೇಶಕ್ಕೆ ಭೇಟಿ ನೀಡಿದ್ದರು. ಅವರ ಭೇಟಿಯನ್ನು ವಿರೋಧಿಸಿ ಅಲ್ಲಿನ ಮುಸ್ಲಿಮರು ಪ್ರತಿಭಟನೆ ನಡೆಸಿದ್ದರು ಮತ್ತು ಬಾಂಗ್ಲಾ ಸೇನೆಯ ವಾಹನಗಳನ್ನು ತಡೆದಿದ್ದರು. ಆ ವಿಡಿಯೊವನ್ನು ಪಶ್ಚಿಮ ಬಂಗಾಳದ್ದು ಎಂದು ಸುಳ್ಳು ಮಾಹಿತಿಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ' ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ



ನಿನಗೆ ನೀನೇ ಗುರು

ನಿನಗಾರು ಗುರುವಹರು ? ನೀನೊಬ್ಬ ತಬ್ಬಲಿಗ? |
ಉಣುತ ದಾರಿಯ ಕೆಲದಿ ಸಿಕ್ಕಿದೆಂಜಲನು ||
ದಿನವ ಕಳೆ; ಗುರುಶಿಷ್ಯಪಟ್ಟಗಳು ನಿನಗೇಕೆ ? |
ನಿನಗೆ ನೀನೇ ಗುರುವೊ – ಮಂಕುತಿಮ್ಮ || **923** ||

ಪದ-ಅರ್ಥ: ತಬ್ಬಲಿಗ = ಅನಾಥ, ಕೆಲದಿ = ಪಕ್ಕದಲ್ಲಿ, ಸಿಕ್ಕಿದೆಂಜಲನು = ಸಿಕ್ಕಿದ + ಎಂಜಲನು.

ವಾಚ್ಯಾರ್ಥ: ನಿನಗೆ ಗುರು ಯಾರಿದ್ದಾರೆ? ನೀನೊಬ್ಬ ಗತಿಯಿಲ್ಲದವ. ದಾರಿಯ ಬದಿಯಲ್ಲಿ ಸಿಕ್ಕ ಎಂಜಲನ್ನು ತಿಂದು ದಿನಗಳನ್ನು ಕಳೆ. ಗುರು-ಶಿಷ್ಯ ಎಂಬ ಹಿರಿಮೆಗಳು ನಿನಗೇಕೆ? ನಿನಗೆ ನೀನೇ ಗುರು.

ವಿವರಣೆ: ನಾವು ಹುಟ್ಟಿದಾಗ ನಮಗೆ ಅಕ್ಷರ, ಸಂಖ್ಯೆ, ವಿಚಾರ ಯಾವುದೂ ಗೊತ್ತಿರಲಿಲ್ಲ. ನಿಧಾನವಾಗಿ ಬೆಳೆಯುತ್ತ ಬಂದಂತೆ ಮನೆಯಲ್ಲಿ, ಶಾಲೆಯಲ್ಲಿ, ಕಾಲೇಜುಗಳಲ್ಲಿ, ಸಮಾಜದಲ್ಲಿ, ವ್ಯವಹರಿಸುತ್ತ ಅವೆಲ್ಲ ಒಂದೊAದಾಗಿ ಮೂಡಿ ಬಂದವು. ಅವೆಲ್ಲ ನಮಗೆ ಮತ್ತೊಬ್ಬರು ನೀಡಿದವುಗಳು. ಅದಕ್ಕೇ ಅವು ಎಂಜಲುಗಳು. ಇನ್ನೊಬ್ಬರು ಬಳಸಿ, ನಮಗೆ ನೀಡಿದಂಥವುಗಳು. ಯಾವವೂ ನಮ್ಮ ಸ್ವತಂತ್ರ ಸೃಷ್ಟಿಯಲ್ಲ. ನಮಗೆ ದೊರಕಿದ ಅಕ್ಷರಗಳನ್ನು, ದೊರೆತ ಚಿಂತನೆಯ ಆಧಾರದ ಮೇಲೆ ಬೇರೆ ಬೇರೆ ರೀತಿಯಲ್ಲಿ ಜೋಡಿಸುತ್ತ, ಅದು ನಮ್ಮದೇ ಸಿದ್ಧಾಂತ ಎಂದು ಸಂಭ್ರಮ ಪಟ್ಟೆವು. ಅದಕ್ಕೇ ಕಗ್ಗ ಎಚ್ಚರಿಕೆ ನೀಡುತ್ತದೆ. ನೀನೊಬ್ಬ ತಬ್ಬಲಿ. ನೀನು ಬದುಕಿನ ದಾರಿಯಲ್ಲಿ ನಡೆಯುತ್ತ, ಹಿರಿಯರು, ಮೊದಲು ದಾರಿಯಲ್ಲಿ ಸಾಗಿದವರು ಕೊಟ್ಟ ಜ್ಞಾನವನ್ನು, ಎಂಜಲನ್ನು ಸ್ವೀಕರಿಸಿ ಸಾಗು. ನೀವು ಗುರುವಾಗುವುದೂ ಬೇಡ, ಶಿಷ್ಯನಾಗಿ ಉಳಿಯುವುದೂ ಬೇಡ. ಎಲ್ಲ ಕ್ಷೇತ್ರಗಳಂತೆ ಅಧ್ಯಾತ್ಮಿಕ ಕ್ಷೇತ್ರಗಳಲ್ಲಿಯೂ ಮಾರ್ಗದರ್ಶಿಗಳ ಅಗತ್ಯವಿದೆ. ಆದರೆ ನಮ್ಮ ಅಧ್ಯಾತ್ಮಿಕ ಪರಂಪರೆಯಲ್ಲಿ ಗುರು ಎಂದರೆ ಒಬ್ಬ ವ್ಯಕ್ತಿಯಲ್ಲ. ಅದೊಂದು ತತ್ವ. ಯಾಕೆಂದರೆ ಎಲ್ಲ ಗುರುಗಳೂ ಮನುಷ್ಯರೇ ಆಗಿರುವುದರಿಂದ ಅವರು ಪರಿಪೂರ್ಣರಲ್ಲ. ಅವರಲ್ಲಿಯೂ ಮಾನವ ಸಹಜ ದೌರ್ಬಲ್ಯಗಳಿರುವುದು ಸರಿಯೆ. ಆದ್ದರಿಂದ ಅವರು ತತ್ವವನ್ನು ಸಂಪೂರ್ಣವಾಗಿ ಮೈತಾಳಲಾರರು. ಅದಕ್ಕೇ ಬುದ್ಧ ಹೇಳಿದ, "ಇನ್ನೊಬ್ಬರು ಹೇಳಿದ್ದೆಂದು, ಹಿಂದಿನಿಂದಲೂ ನಡೆದುಕೊಂಡು ಬಂದ ಸಂಪ್ರದಾಯವೆಂದು, ಹಿಂದಿನ ಗ್ರಂಥಗಳಲ್ಲಿ ಉಕ್ತವಾಗಿದೆಯೆಂದು, ಗುರುಗಳು ಹೇಳಿದ ಮಾತು ಎಂದು, ಯಾವುದನ್ನೂ ಒಪ್ಪಿಕೊಳ್ಳಬೇಡ. ನಿಮಗೆ ನೀವೇ ಜ್ಞಾನದೇವಿಗೆಗಳಾಗಿ – ಅತ್ತಾಹಿ ಅತ್ತನೋ ನಾಥೋ (ನಿನಗೆ ನೀನೇ ಗುರು)". ಶರಣರು ಗುರು-ಶಿಷ್ಯರು ಅರಿವಿನ ಎರಡು ವಿಭಿನ್ನ ಸ್ಥಿತಿಗಳು ಎಂದು ಗುರುತಿಸಿದರು. ಪಾಠ ಹೇಳಿದವನು ಗುರುವಲ್ಲ, ನನ್ನ ಮನಸ್ಸನ್ನು ಜಾಗ್ರತಗೊಳಿಸಿದವನು ಗುರು ಎನ್ನುತ್ತಾಳೆ ಶರಣೆ ಮಸಣಮ್ಮ. ಅಲ್ಲಮ ಪ್ರಭುವಂತೂ, "ನೀನೇ ಸ್ವಯಂಜ್ಯೋತಿ ಪ್ರಕಾಶವೆಂದರಿಯಲು, ನಿನಗೆ ನೀನೇ ಗುರುವಲ್ಲದೆ, ನಿನ್ನಿಂಧಿಕವಪ್ಪ ಗುರುವುಂಟೇ?" ಎಂದು ಪ್ರಶ್ನಿಸುತ್ತಾನೆ. "ಉದ್ಧರೇತ್ ಆತ್ಮನಾತ್ಮಾನಂ" ಎನ್ನುವ ಮಾತು, ನಿನ್ನ ಉದ್ಧಾರಕ್ಕೆ ನೀನೇ ಕಾರಣ, ಇನ್ನೊಬ್ಬರನ್ನು ಹುಡುಕಿಕೊಂಡು ಹೋಗಬೇಡ ಎನ್ನುತ್ತದೆ. ಬುದ್ಧ ಹೇಳಿದ ಮಾತು, "ಓ ಆನಂದ, ನಿಮಗೆ ನೀವೇ ದೀವಿಗೆಗಳಾಗಿ. ಆ ಯಾರೊಬ್ಬರ ಆಶ್ರಯಬೇಡ, ಸತ್ಯವನ್ನೇ ಧೃಢವಾಗಿ ನಂಬಿ, ನಿಮ್ಮ ನಿರ್ವಾಣವನ್ನು ನೀವೇ ಸಾಧಿಸಿಕೊಳ್ಳಿ". ಅದೇ ಕಗ್ಗದ ಆಶಯ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಸೋಮವಾರ ಜುಲೈ 10, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಅಷ್ಟಮಿ ಗಂ. 18-45 ನಕ್ಷತ್ರ: ರೇವತಿ ಗಂ. 18-59 ಯೋಗ: ಅತಿಗಂಡ ಗಂ. 12-33 ಕರಣ: ಬಾಲವ ಗಂ. 07-18, ಮಿಥುನ ಮಾಸದ 25 ನೇ ದಿನ, ಮಳೆನಕ್ಷತ್ರ: ಪುನರ್ವಸು 2. ರಾಹುಕಾಲ : ಬೆಳಿಗ್ಗೆ 07-30 - 09-00,
ಸೂರ್ಯೋದಯ : 06-14 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 21 ಜುಲ್‌ಹಿಜಾ , ಅದೃಷ್ಟ ಸಂಖ್ಯೆ : 12, 8

ಮೇಷ: ವೃತ್ತಿ ಜೀವನದಲ್ಲಿ ಹಣಕಾಸಿನ ಪರಿಸ್ಥಿತಿ ಉತ್ತಮಪಡಿಸಿಕೊಳ್ಳುವ ಸನ್ನಿವೇಶಗಳು ನಡೆಯುವುದು. ಖಾದಿ ಉದ್ಯಮದವರಿಗೆ ಸಹಾಯ ಸೌಲಭ್ಯಗಳು ದೊರೆಯಲಿದೆ. ಮಿತ್ರರಿಂದ ಸಂತಸ ಹೊಂದುವಿರಿ.

ವೃಷಭ: ಭಾಷಾ ಅಧ್ಯಾಪಕರಿಗೆ ಉದ್ಯೋಗದಲ್ಲಿ ಅಸ್ಥಿರತೆ ಉಂಟಾಗುವುದು. ಯುವ ಕಲಾವಿದರಿಗೆ ಹೆಚ್ಚು ಪ್ರೋತ್ಸಾಹ ಅವಕಾಶಗಳು ಲಭಿಸುವುದು. ವೃತ್ತಿ ಸಂಬಂಧ ವಿದೇಶಯಾನದ ಅವಕಾಶ ಸಿಗಲಿದೆ.

ಮಿಥುನ: ಎತ್ತರದಲ್ಲಿ ಹತ್ತಿ ಕೆಲಸ ಮಾಡುವವರು, ಸಾಹಸಿ ಪ್ರವೃತ್ತಿಯವರು ಜಾಗ್ರತರಾಗಿರಿ. ಚಿನ್ನ ಬೆಳ್ಳಿ ವ್ಯಾಪಾರಸ್ಥರಿಗೆ ವ್ಯವಹಾರದಲ್ಲಿ ಅಧಿಕ ಲಾಭ ಇರಲಿದೆ. ಅಚ್ಚರಿಯ ಸುದ್ದಿಯೊಂದನ್ನು ಕೇಳಲಿರುವಿರಿ.

ಕರ್ಕಾಟಕ: ವೃತ್ತಿರಂಗದಲ್ಲಿ ಅನವಶ್ಯಕವಾಗಿ ಇತರರ ಕೋಪಕ್ಕೆ ಗುರಿಯಾಗುವುದನ್ನು ಸ್ನೇಹಿತರು ತಪ್ಪಿಸುವರು. ಸಹೋದರರ ಬಗ್ಗೆ ನಿಮ್ಮಲ್ಲಿರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿಕೊಳ್ಳುವ ಪ್ರಯತ್ನಮಾಡಿ.

ಸಿಂಹ: ಬಹು ನಿರೀಕ್ಷೆಯ ವಿಚಾರಗಳು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿದಲ್ಲಿ ಲಾಭ ಕಾಣುವಿರಿ.ಗೃಹದಲ್ಲಿ ಮಂಗಳ ಕಾರ್ಯಗಳು ತೋರಿ ಬರುವವು. ಉನ್ನತ ವ್ಯಾಸಂಗದವರಿಗೆ ನೇರ ಆಯ್ಕೆಗೊಳ್ಳುವ ಸಂಭವವಿದೆ.

ಕನ್ಯಾ: ಜೀವನದಲ್ಲಿ ಕೆಲವು ವಿಚಾರಕ್ಕೆ ಆತಂಕ ಮೂಡಿ ಮನೋಧೈರ್ಯವನ್ನು ಕಟ್ಟಿಹಾಕಿಕೊಳ್ಳುತ್ತದೆ. ಅಭಿವೃದ್ಧಿಯಲ್ಲಿ ಹಿನ್ನಡೆ ಕಾಣಲಿದ್ದೀರಿ. ಸಹೋದ್ಯೋಗಿಗಳ ಮಾತಿನಂತೆ ನಡೆದುಕೊಳ್ಳುವುದು ಉತ್ತಮ.

ತುಲಾ: ಗೊಂದಲಕ್ಕೆ ಕಾರಣ ತಿಳಿದುಕೊಳ್ಳುವ ಪ್ರಯತ್ನ ಮಾಡುವುದು ಒಳ್ಳೆಯದು. ಧರ್ಮ ಕಾರ್ಯಗಳಲ್ಲಿ ಭಾಗವಹಿಸುವುದು, ಅಥವಾ ಆಸಕ್ತಿ ಬೆಳೆಸಿಕೊಳ್ಳುವುದು ಅಗತ್ಯ. ಉತ್ತಮ ಪರಿಶ್ರಮಕ್ಕೆ ಲಾಭ ಸಿಗುತ್ತದೆ.

ವೃಶ್ಚಿಕ: ಈ ದಿನ ನೀವು ಮಾಡುವ ಕೆಲಸವನ್ನು ಸಮಯೋಚಿತ ಬುದ್ಧಿಯಿಂದ ಯೋಚಿಸಿ ಮಾಡುವುದು ಉತ್ತಮ. ಹೋಟೆಲ್ ಉದ್ಯಮದವರಿಗೆ ಇಂದು ಅತ್ಯಧಿಕ ಲಾಭ ಪ್ರಾಪ್ತಿ. ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸಿರಿ.

ಧನು: ಹೋಟೆಲ್ ಉದ್ಯಮದವರಿಗೆ ಅತ್ಯಧಿಕ ಲಾಭ ಪ್ರಾಪ್ತಿ. ಸಹೋದ್ಯೋಗಿಗಳಿಂದ ಕಾರ್ಯಾನುಕೂಲ ಆಗುತ್ತದೆ. ತಿಂಡಿ ತಿನಿಸು ಪದಾರ್ಥಗಳ ಮಾರಾಟಗಾರರಿಗೆ ಹೆಚ್ಚಿನ ಲಾಭ ಸಿಗುವುದು.

ಮಕರ: ಹೊಸ ಯೋಜನೆಗಳಿಗೆ ಚಾಲನೆ ನೀಡುವ ವಿಚಾರವನ್ನು ಸ್ವಲ್ಪ ದಿನ ಮುಂದಕ್ಕೆ ತಳ್ಳುವುದು ಸೂಕ್ತವೆನಿಸುವುದು. ಅನಿವಾರ್ಯ ಪ್ರಯಾಣ ಹೆಚ್ಚಾಗಲಿದೆ. ಸಂಸಾರದ ವಿಷಯಗಳತ್ತ ಗಮನ ಹರಿಸುವಿರಿ.

ಕುಂಭ: ಸಮಾನ ಮನಸ್ಕರಲ್ಲಿ, ಒಪ್ಪಂದದಲ್ಲಿ ವ್ಯವಹಾರಗಳನ್ನು ಮಾಡುತ್ತಿರುವವರ ಸಂಘದಲ್ಲಿ ಹಣಕಾಸಿನ ಬಗ್ಗೆ ಸಣ್ಣಪುಟ್ಟ ಮಾನಸಿಕ ಭಿನ್ನಾಭಿಪ್ರಾಯಗಳು ಉದ್ಭವವಾಗಲಿವೆ. ಕಬ್ಬಿಣ ವ್ಯಾಪಾರಸ್ಥರಿಗೆ ಆಶಾದಾಯಕ ದಿನ.


ಮೀನ: ಕೆಲಸದಲ್ಲಿ ಒತ್ತಡ ಹೆಚ್ಚಿರುವುದರಿಂದ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಿ. ಮನೆಯಲ್ಲಿನ ಭಿನ್ನಾಭಿಪ್ರಾಯ ದೂರಾಗುವುದು. ಔದಾರ್ಯ ಬುದ್ಧಿ ತೋರಿದಲ್ಲಿ ವಂಚನೆಗೆ ಒಳಗಾಗುವ ಸನ್ನಿವೇಶಗಳಿವೆ.

ಪದಬಂಧ 5375

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬರದಲ್ಲಿ ಹೊರದೂಡುವಿಕೆ (4)
3.ಪುಂಗವರು ಮೂಸುತ್ತಿರುವ ಸುವಾಸನೆ (4)
5.ಸರದ ದರ ಹೇಳುತ್ತಾ ತೋರಿದ ಸಲಿಗೆ (3)
7.ಪದರದೊಳಗೆ ಕಾಣಿಸಿದ ಮೋಕ್ಷ! (2)
9.ವಿದ್ಯೆಯನ್ನು ಕಲಿಸುವವನು (2)
12.ಅಕ್ಷರದಲ್ಲೇ ನಶ್ವರವಾದುದು ಇದೆ (2)
13.ಕವಿತೆ ಬರೆಯುವವನು (2)
15.ಆನೆಯ ಮೇಲಿರುವ ಭದ್ರಾಸನ (3)
17.ಹೊಗಳಿಕೆಯ ವಿರುದ್ಧ ಪದ (4)
18.ಸದಾ ಒಳ್ಳೆಯ ಆಶಯ (4)

ಮೇಲಿಂದ ಕೆಳಕ್ಕೆ
1.ಸ್ಲೇಟಿನ ಬರೆಯುವ ಸಾಧನ (3)
2.ರಸನದಲ್ಲಿರುವ ದ್ರವ (2)
3.ನಗರದಲ್ಲಿರುವ ಮನುಷ್ಯ (2)
4.ಪುರದ ತುಂಬಾ ಹಬ್ಬಿದ ಸುಳ್ಳು ಸುದ್ದಿ (3)
6.ದಡಿಯ ಹಿಡಿದಿರುವ ವಾದ್ಯ (3)
8.ನೆತ್ತರು ಹರಿಯುವಿಕೆ (5)
9.ವ್ಯಾಕರಣದಲ್ಲಿ ಗುಣವನ್ನು ಸೂಚಿಸುವ ಶಬ್ದ (5)
11.ಹುಡುಗನಿಲ್ಲಿ ಉಲ್ಟಾ ನಿಂತಿದ್ದಾನಲ್ಲಾ? (3)
12.ಯೋಗ್ಯತೆ ಅಥವಾ ಅರ್ಹತೆ ಎಂದರೂ ಸರಿಯೇ (3)
14.ನಯವಾಗಿ ತೋರುತ್ತಿರುವ ನಮ್ರತೆ (3)
15.ಹತೋಟಿ ಎಂಬರ್ಥ ಆಗುವ ಸಂಖ್ಯೆ! (2)
16.ಸದರಿಯಲ್ಲಿನ ಸೂಕ್ತವಾದುದು ತಿರುವುಮುರುವಾಗಿದೆ (2)



5374ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸರಸ 3.ವನಸ್ಪತಿ
5.ನಯನ 7.ನಮಸ್ಕಾರ
9.ಗಿರಾ 10.ಐಜಾ
11.ಜಯಶಾಲಿ 14.ಹರಿತ
16.ಹಲಧರ 17.ನಪ್ರಾಣಿ

ಮೇಲಿಂದ ಕೆಳಕ್ಕೆ:
1.ಸನ್ಮಾನ 2.ಸದನ
3.ವನಸುಮ 4.ತಿಜೋರಿ
6.ಯಮರಾಜ 7.ನಕಲಿ
8.ರಣಭೇರಿ 12.ಶಾಕಾಹಾರ
13.ವಿರಹ 14.ಹವನ
15.ತರುಣಿ

ಸುಡೊಕು 5761

			4		3		6	
	9				2			5
			5		8	7	2	
		9		3				7
	3				6		5	
8		6		4		2		3
		5		2				4
3						5		
	8	2		5			7	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5760 ಸುಡೊಕು

5	7	2	9	3	4	1	8	6
4	6	9	8	5	1	7	3	2
3	1	8	7	6	2	9	5	4
7	2	3	5	8	6	4	9	1
8	4	1	3	2	9	5	6	7
6	9	5	1	4	7	3	2	8
1	8	7	6	9	5	2	4	3
2	5	6	4	1	3	8	7	9
9	3	4	2	7	8	6	1	5

ಬ್ರೆಂಟ್ ತೈಲದ ದರಕ್ಕಿಂತ ಬ್ಯಾರಲ್‌ಗೆ 4 ಡಾಲರ್‌ಗೆ ಇಳಿಕೆ

ರಷ್ಯಾ ತೈಲ: ತಗ್ಗಿದ ರಿಯಾಯಿತಿ



ನವದೆಹಲಿ (ಪಿಟಿಐ): ರಷ್ಯಾದಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲಕ್ಕೆ ಭಾರತದ ಕಂಪನಿಗಳಿಗೆ ಸಿಗುವ ರಿಯಾಯಿತಿ ಕಡಿಮೆ ಆಗಿದೆ. ಆದರೆ, ಆಮದು ಕಚ್ಚಾ ತೈಲದ ಸಾಗಣೆಗೆ ಮಾಡುವ ವೆಚ್ಚವು ಹೆಚ್ಚಾಗಿದೆ ಎಂದು ಮೂಲಗಳು ತಿಳಿಸಿವೆ.

ರಷ್ಯಾವು ಭಾರತದ ಕಂಪನಿಗಳಿಗೆ ಮಾರಾಟ ಮಾಡುವ ಕಚ್ಚಾ ತೈಲಕ್ಕೆ ಪ್ರತಿ ಬ್ಯಾರಲ್‌ಗೆ 60 ಡಾಲರ್‌ಗಿಂತ ಕಡಿಮೆ ದರ ನಿಗದಿ ಮಾಡಿದೆ. ಆದರೆ ಬಾಲ್ಟಿಕ್ ಸಮುದ್ರ, ಕಪ್ಪು ಸಮುದ್ರ ಮೂಲಕ ಭಾರತದ ಪಶ್ಚಿಮ ಕರಾವಳಿಗೆ ರವಾನಿಸುವ ಕಚ್ಚಾ ತೈಲಕ್ಕೆ ಬ್ಯಾರಲ್‌ಗೆ ಗರಿಷ್ಠ 19 ಡಾಲರ್ ಸಾಗಣೆ ವೆಚ್ಚ ಪಡೆಯುತ್ತಿದೆ. ಇದು ಮಾಮೂಲಿಗಿಂತ ಎರಡು ಪಟ್ಟು ಹೆಚ್ಚಿನ ದರ ಎಂದು ಮೂಲಗಳು ಹೇಳಿವೆ.

ಕಳೆದ ವರ್ಷದ ಮಧ್ಯ ಭಾಗದಲ್ಲಿ ರಷ್ಯಾವು ಭಾರತದ ಕಂಪನಿಗಳಿಗೆ ಮಾರಾಟ ಮಾಡುವ ಕಚ್ಚಾ ತೈಲಕ್ಕೆ ಬ್ರೆಂಟ್ ಕಚ್ಚಾ ತೈಲದ ಬೆಲೆಗಿಂತ 30 ಡಾಲರ್‌ವರೆಗೆ ರಿಯಾಯಿತಿ ನೀಡುತ್ತಿತ್ತು. ಈಗ ರಿಯಾಯಿತಿಯನ್ನು ಬ್ಯಾರಲ್‌ಗೆ 4 ಡಾಲರ್‌ಗೆ ತಗ್ಗಿಸಿದೆ.

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳಾದ ಇಂಡಿಯನ್ ಆಯಿಲ್ ಕಾರ್ಪೊರೇಷನ್, ಹಿಂದೂಸ್ಥಾನ್ ಪೆಟ್ರೋಲಿಯಂ ಕಾರ್ಪೊರೇಷನ್, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್, ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೊಕೆಮಿಕಲ್ಸ್ ಲಿ, ಖಾಸಗಿ ಕಂಪನಿಗಳಾದ ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ನಯಾರಾ ಎನರ್ಜಿ ಪ್ರತ್ಯೇಕವಾಗಿ ಖರೀದಿ ಮಾತುಕತೆ ನಡೆಸುತ್ತಿರುವ ಕಾರಣ ರಿಯಾಯಿತಿ ಪ್ರಮಾಣ ಕಡಿಮೆ ಆಗುತ್ತಿದೆ ಎನ್ನಲಾಗಿದೆ. ರಷ್ಯಾದಿಂದ ಆಮದು ಮಾಡಿಕೊಳ್ಳುತ್ತಿರುವ ಕಚ್ಚಾ ತೈಲದಲ್ಲಿ ಸರ್ಕಾರಿ ಸ್ವಾಮ್ಯದ ಕಂಪನಿಗಳ ಪಾಲು ಹೆಚ್ಚು ಇದೆ. ಈ ಕಂಪನಿಗಳು ಒಟ್ಟಾಗಿ ಖರೀದಿ ಮಾತುಕತೆ ನಡೆಸಿದಲ್ಲಿ ರಿಯಾಯಿತಿ ಇನ್ನಷ್ಟು ಹೆಚ್ಚಬಹುದು ಎಂದು ಮೂಲಗಳು ಹೇಳಿವೆ.

ರಷ್ಯಾ ಸಮುದ್ರಮಾರ್ಗದ ಮೂಲಕ ರಫ್ತು ಮಾಡುವ ಕಚ್ಚಾ ತೈಲವನ್ನು ಅತಿಹೆಚ್ಚಿನ ಪ್ರಮಾಣದಲ್ಲಿ ಖರೀದಿಸುತ್ತಿರುವ ದೇಶಗಳ ಸಾಲಿನಲ್ಲಿ ಈಗ ಭಾರತವೇ ಮೊದಲ ಸ್ಥಾನದಲ್ಲಿದೆ.

ನವೋದ್ಯಮಗಳಲ್ಲಿ ತಗ್ಗಿದ ಹೂಡಿಕೆ

ನವದೆಹಲಿ (ಪಿಟಿಐ): ಭಾರತದ ನವೋದ್ಯಮಗಳಲ್ಲಿ ಬಂಡವಾಳ ಹೂಡಿಕೆಯು ಈ ವರ್ಷದ ಜನವರಿ–ಜೂನ್ ಅವಧಿಯಲ್ಲಿ ಶೇಕಡ 36ರಷ್ಟು ಇಳಿಕೆ ಕಂಡಿದ್ದು, ₹31,160 ಕೋಟಿಗೆ ತಲುಪಿದೆ. ನಾಲ್ಕೂವರೆ ವರ್ಷಗಳಲ್ಲಿ ಆಗಿರುವ ಕನಿಷ್ಠ ಹೂಡಿಕೆ ಇದಾಗಿದೆ ಎಂದು ಪಿಡಬ್ಲ್ಯುಸಿ ಇಂಡಿಯಾ ವರದಿ ತಿಳಿಸಿದೆ.

ಫಿನ್‌ಟೆಕ್, ಎಸ್‌ಎಎಎಸ್ ಮತ್ತು ಡಿ2ಸಿ ಹೆಚ್ಚು ಬಂಡವಾಳ ಆಕರ್ಷಿಸಿದ ವಲಯಗಳಾಗಿವೆ.

2022ನೇ ಕ್ಯಾಲೆಂಡರ್ ವರ್ಷದ ಜನವರಿ–ಜೂನ್ ಅವಧಿಯಲ್ಲಿ ₹48,380 ಕೋಟಿ ಬಂಡವಾಳ ಹೂಡಿಕೆ ಆಗಿತ್ತು.

ದೇಶದ ಪ್ರಮುಖ ನವೋದ್ಯಮ ನಗರಗಳ ಪೈಕಿ ಬೆಂಗಳೂರು, ಎನ್‌ಸಿಆರ್ ಮತ್ತು ಮುಂಬೈ ಮುಂಚೂಣಿಯಲ್ಲಿ ಇವೆ. ಈ ವರ್ಷದ ಜನವರಿ–ಜೂನ್ ಅವಧಿಯಲ್ಲಿ ಆಗಿರುವ ಒಟ್ಟು ಹೂಡಿಕೆಯಲ್ಲಿ ಈ ನಗರಗಳ ಪಾಲು ಶೇ 83ರಷ್ಟು ಇದೆ ಎಂದು ವರದಿ ತಿಳಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	100 ಮೊಟ್ಟೆಗೆ	₹460
	12 ಮೊಟ್ಟೆಗೆ	₹65
ಮೈಸೂರು	100 ಮೊಟ್ಟೆಗೆ	₹460

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹212-409
ದ್ವಿತಳಿ (ಬಿ.ವಿ)	₹305-745

ಪರ್ಯಾಯ ಹೂಡಿಕೆಗೆ ಆರ್‌ಇಐಟಿ



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ರಿಯಲ್ ಎಸ್ಟೇಟ್ ಹೂಡಿಕೆ ಎಂದಾಕ್ಷಣ ಬಹುತೇಕರು 'ಅದು ನಮಗಲ್ಲ, ಶ್ರೀಮಂತರಿಗೆ ಮಾತ್ರ' ಎಂದು ಮೂಗು ಮುರಿಯುತ್ತಾರೆ. ಆದರೆ ಜನಸಾಮಾನ್ಯರೂ ದಕ್ಷವಾಗಿ ರಿಯಲ್ ಎಸ್ಟೇಟ್ ಹೂಡಿಕೆ ಮಾಡಬಹುದಾದ ಆಯ್ಕೆಯೊಂದು ಭಾರತದಲ್ಲಿ ಪ್ರಚಲಿತವಾಗುತ್ತಿದೆ. ಆ ಪರ್ಯಾಯ ಹೂಡಿಕೆ ಆಯ್ಕೆ 'ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್'(ಆರ್‌ಇಐಟಿ). ಇದು ಏನು? ಇದರಲ್ಲಿ ಹೂಡಿಕೆ ಮಾಡುವುದು ಹೇಗೆ? ಇದರ ಸಾಧಕ-ಬಾಧಕಗಳೇನು? ಈ ಎಲ್ಲವುಗಳ ಬಗ್ಗೆ ಪರಿಶೀಲಿಸೋಣ.

ಆರ್‌ಇಐಟಿ ಹಿನ್ನೆಲೆ: ಕಷ್ಟ ಆದರೂ ಸರಿ ತಲೆ ಮೇಲೆ ಒಂದು ಸ್ವಂತ ಸೂರು ಹೊಂದಬೇಕು ಎನ್ನುವುದು ಶ್ರೀಸಾಮಾನ್ಯರ ಕನಸು. ಆದರೆ ಮನೆ ಖರೀದಿಸಲು ದೊಡ್ಡ ಮೊತ್ತ ಬೇಕು. ಬೆಂಗಳೂರಿನಂತಹ ಮಹಾನಗರಗಳಲ್ಲಿ ಹೆಚ್ಚುತ್ತಿರುವ ರಿಯಲ್ ಎಸ್ಟೇಟ್ ದರ ನೋಡಿದಾಗ ಜನ ಸಾಮಾನ್ಯರ ಪಾಲಿಗೆ ಸ್ವಂತ ಸೂರು ಅನ್ನುವುದು ಗಗನಕುಸುಮವೇ ಸರಿ ಅನ್ನಿಸಿಬಿಡುವುದಿದೆ. ಆದರೆ ಸಣ್ಣ ಪ್ರಮಾಣದಲ್ಲಿ ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಲು ಈಗ ಪರ್ಯಾಯ ಆಯ್ಕೆಯೊಂದು ಇದೆ. ಅದೇ ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್. ಕೇವಲ ₹300ರಿಂದ ₹400ರಷ್ಟು ತೊಡಗಿಸುವ ಮೂಲಕ ಈ ಹೂಡಿಕೆ ಮಾಡಬಹುದು.

ಅಮೆರಿಕದಲ್ಲಿ ಈ ಮಾದರಿಯ ಹೂಡಿಕೆ 1960ರಿಂದಲೇ ಚಾಲ್ತಿಯಲ್ಲಿ ಇದೆ. ಭಾರತಕ್ಕೆ ಈ ಮಾದರಿಯ ಹೂಡಿಕೆ ಬಂದು ಸುಮಾರು ಒಂಬತ್ತು ವರ್ಷಗಳು ಮಾತ್ರ ಆಗಿವೆ.

ಏನಿದು ಆರ್‌ಇಐಟಿ?: ಮ್ಯೂಚುವಲ್ ಫಂಡ್ ಹೂಡಿಕೆ ಮತ್ತು ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್ ಹೂಡಿಕೆಗಳ ನಡುವೆ ಸಾಕಷ್ಟು ಸಾಮ್ಯತೆ ಇದೆ. ಮ್ಯೂಚುವಲ್ ಫಂಡ್‌ಗಳಲ್ಲಿ ಎಸ್‌ಐಪಿ ಮೂಲಕ ಹೂಡಿಕೆ ಮಾಡುವಾಗ ಪ್ರತಿ ತಿಂಗಳು ₹500, ₹1000, ₹10,000... ಹೀಗೆ ನಮ್ಮ ಶಕ್ತಿಗೆ ಅನುಗುಣವಾಗಿ ಹಣ ತೊಡಗಿಸುತ್ತೇವೆ. ಆ ಹಣವನ್ನು ಯಾವ ಷೇರುಗಳಲ್ಲಿ ತೊಡಗಿಸಿ ನಿರ್ವಹಣೆ ಮಾಡಬೇಕು ಎನ್ನುವುದನ್ನು ಫಂಡ್ ಮ್ಯಾನೇಜರ್ ನಿರ್ಧರಿಸುತ್ತಾರೆ. ಬಂದ ಲಾಭಕ್ಕೆ ನಿಗದಿತ ಕಮಿಷನ್ ಪಡೆದು ಉಳಿದ ಹಣವನ್ನು ಹೂಡಿಕೆದಾರನಿಗೆ ಮ್ಯೂಚುವಲ್ ಫಂಡ್ ಕಂಪನಿಯವರು ನೀಡುತ್ತಾರೆ.

ಇದೇ ಮಾದರಿಯಲ್ಲಿ ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್‌ನಲ್ಲಿ ಹೂಡಿಕೆ ಮಾಡಬಹುದು. ಷೇರು ಮಾರುಕಟ್ಟೆಯಲ್ಲಿ ಲಿಸ್ಟ್ ಆಗಿರುವ ಆರ್‌ಇಐಟಿಗಳಲ್ಲಿ ₹5,000, ₹10,000... ಹೀಗೆ ನಿಮ್ಮ ಹಣಕಾಸಿನ ಸ್ಥಿತಿಗೆ ಅನುಗುಣವಾಗಿ ಹೂಡಿಕೆ ಮಾಡಬಹುದು. ಸದ್ಯ ಭಾರತದಲ್ಲಿರುವ ಪ್ರಮುಖ ಟ್ರಸ್ಟ್‌ಗಳ ಬೆಲೆ ₹260ರಿಂದ ₹300ರ ಆಸುಪಾಸಿನಲ್ಲಿವೆ. ಅವುಗಳಲ್ಲಿ ಹೂಡಿಕೆ ಮಾಡಿ ವಾರ್ಷಿಕ ಶೇ 6ರಿಂದ ಶೇ 7ರಷ್ಟು ಲಾಭಾಂಶ (ಡಿವಿಡೆಂಡ್) ಮತ್ತು ಆರ್‌ಇಐಟಿ ಮಾರುಕಟ್ಟೆ ಬೆಲೆಯಲ್ಲಿ ಆಗುವ ಸಂಭಾವ್ಯ ಹೆಚ್ಚಳದ ಲಾಭ ಪಡೆಯಬಹುದು. ಆರ್‌ಇಐಟಿಗಳು ಹಣವನ್ನು ವಾಣಿಜ್ಯ ಉದ್ದೇಶದ ರಿಯಲ್ ಎಸ್ಟೇಟ್‌ಗಳಲ್ಲಿ ಹೂಡಿಕೆ ಮಾಡಿ ಅದರಿಂದ ಬಂದ ಲಾಭವನ್ನು ಹೂಡಿಕೆದಾರರಿಗೆ ಹಂಚಿಕೆ ಮಾಡುತ್ತವೆ. ಇಲ್ಲಿ ಹೂಡಿಕೆ ಮಾಡುವವರಿಗೆ ಸ್ವತ್ತಿನ ಭಾಗಶಃ ಮಾಲೀಕತ್ವ ಲಭಿಸುತ್ತದೆ.

ಆರ್‌ಇಐಟಿ ನಿಯಂತ್ರಿಸುವವರು ಯಾರು?: ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಇದನ್ನು ನಿಯಂತ್ರಿಸುತ್ತದೆ. ಸೆಬಿ ನಿಯಮದ ಪ್ರಕಾರ ಆರ್‌ಇಐಟಿಗಳು ತಾವು ಹೂಡಿಕೆದಾರರಿಂದ ಪಡೆದ ಶೇ 80ರಷ್ಟು ಹಣವನ್ನು ಈಗಾಗಲೇ ಪೂರ್ಣಗೊಂಡಿರುವ ರಿಯಲ್ ಎಸ್ಟೇಟ್ ಯೋಜನೆಗಳಲ್ಲಿ ತೊಡಗಿಸಬೇಕು. ಇನ್ನುಳಿದ ಶೇ 20ರಷ್ಟು ಹಣವನ್ನು ಹೊಸ ಯೋಜನೆಗಳಲ್ಲಿ ತೊಡಗಿಸಬಹುದು. ಇಷ್ಟೇ ಅಲ್ಲ, ಹೂಡಿಕೆದಾರರಿಂದ ಪಡೆದ ಹಣದಿಂದ ಬಂದ ಲಾಭದಲ್ಲಿ ಶೇ 90ರಷ್ಟನ್ನು ಲಾಭಾಂಶ (ಡಿವಿಡೆಂಡ್) ರೂಪದಲ್ಲಿ ಹೂಡಿಕೆದಾರರಿಗೆ ಹಿಂದಿರುಗಿಸಬೇಕು ಎನ್ನುವ ನಿಯಮವನ್ನೂ ಸೆಬಿ ಮಾಡಿದೆ.

ಭಾರತದ ಪ್ರಮುಖ ಆರ್‌ಇಐಟಿಗಳು: ಭಾರತದಲ್ಲಿ ಈಗಷ್ಟೇ ಆರ್‌ಇಐಟಿಗಳು ಮುನ್ನೆಲೆಗೆ ಬರುತ್ತಿವೆ. ಎಂಬೆಸಿ ಆಫೀಸ್ ಪಾರ್ಕ್ಸ್ ಆರ್‌ಇಐಟಿ, ಮೈಂಡ್ ಸ್ಪೇಸ್ ಬಿಸಿನೆಸ್ ಪಾರ್ಕ್ ಆರ್‌ಇಐಟಿ, ಬ್ರೂಕ್ ಫೀಲ್ಡ್ ಇಂಡಿಯಾ ರಿಯಲ್ ಎಸ್ಟೇಟ್ ಟ್ರಸ್ಟ್ ಆರ್‌ಇಐಟಿ ಹೀಗೆ ಪ್ರಮುಖ ಕಂಪನಿಗಳು ಈ ಹೂಡಿಕೆಗೆ ಲಭ್ಯ ಇವೆ. ಇವುಗಳು ಷೇರು ಮಾರುಕಟ್ಟೆಯಲ್ಲಿ ಲಿಸ್ಟ್ ಆಗಿದ್ದು, ಷೇರು ಖರೀದಿಸುವ ಮಾದರಿಯಲ್ಲೇ ಇವನ್ನು ಖರೀದಿಸಬಹುದು.

ಅನುಕೂಲ: ದೊಡ್ಡ ಮಟ್ಟದಲ್ಲಿ ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಲು ಸಾಧ್ಯವಾಗದವರಿಗೆ ಇದೊಂದು ಪರ್ಯಾಯ ಆಯ್ಕೆ. ಇಲ್ಲಿ ಹೂಡಿಕೆ ಮಾಡುವುದರಿಂದ ಹೂಡಿಕೆ ವೈವಿಧ್ಯತೆ ಕಾಯ್ದುಕೊಳ್ಳಬಹುದು. ಈ ಹೂಡಿಕೆಯು ಹಣದುಬ್ಬರ ಹೆಚ್ಚಿರುವ ಕಾಲದಲ್ಲಿ ಹೆಚ್ಚು ಲಾಭ ಕೊಡುವ ಸಾಧ್ಯತೆಯಿದೆ. ಹಣದ ಅಗತ್ಯವಿದ್ದಾಗ ಹೂಡಿಕೆಯನ್ನು ನಗದಿ ಮಾಡಿಕೊಳ್ಳಬಹುದು.

ಅನನುಕೂಲ: ಭಾರತದಲ್ಲಿ ಈಗಷ್ಟೇ ಈ ಹೂಡಿಕೆ ಪ್ರವರ್ಧಮಾನಕ್ಕೆ ಬರುತ್ತಿದೆ. ಈ ಹೂಡಿಕೆಯಲ್ಲಿ ಶೇ 2ರಿಂದ ಶೇ 3ರಷ್ಟು ಕಮಿಷನ್ ಕೊಡಬೇಕಾಗುತ್ತದೆ. ಹೂಡಿಕೆಗೆ ಸಿಗುವ ಲಾಭಾಂಶವು ರಿಯಲ್ ಎಸ್ಟೇಟ್ ಆಸ್ತಿಗಳ ಬಾಡಿಗೆ ಆದಾಯದ ಮೇಲೆ ಅವಲಂಬಿತವಾಗಿರುವುದರಿಂದ ಲಭ್ಯವಿರುವ ಕಟ್ಟಡಗಳನ್ನು ಜನರು ಬಾಡಿಗೆಗೆ ಎಷ್ಟರ ಮಟ್ಟಿಗೆ ಪಡೆದುಕೊಂಡಿದ್ದಾರೆ ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)



ಷೇರುಪೇಟೆ

ಸತತ ಎರಡನೇ ವಾರ ಜಿಗಿತ

ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ವಾರ ಗಳಿಕೆ ದಾಖಲಿಸಿವೆ. ಜುಲೈ 7ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಉತ್ತಮ ಗಳಿಕೆ ಕಂಡಿವೆ. 65,280 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.86ರಷ್ಟು ಗಳಿಸಿಕೊಂಡಿದೆ. 19,331 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಸೂಚ್ಯಂಕ ಶೇ 0.74ರಷ್ಟು ಜಿಗಿದಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಖರೀದಿ ಭರಾಟೆ, ಕಂಪನಿಗಳ ತ್ರೈಮಾಸಿಕ ಸಾಧನೆ ಉತ್ತಮವಾಗಿರುವ ನಿರೀಕ್ಷೆ, ದೇಶಾದ್ಯಂತ ಮುಂಗಾರು ಚುರುಕಾಗಿರುವುದು ಸೇರಿ ಹಲವು ಅಂಶಗಳು ಷೇರುಪೇಟೆ ಜಿಗಿತಕ್ಕೆ ಕಾರಣ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ತೈಲ ಮತ್ತು ಅನಿಲ ಸೂಚ್ಯಂಕ ಶೇ 4.6ರಷ್ಟು, ಬಿಎಸ್‌ಇ ರಿಯಲ್ ಎಸ್ಟೇಟ್ ಮತ್ತು ವಾಹನ ಸೂಚ್ಯಂಕ ತಲಾ ಶೇ 2ರಷ್ಟು ಮತ್ತು ಬಿಎಸ್‌ಇ ಎಫ್‌ಎಂಸಿಜಿ ಸೂಚ್ಯಂಕ ಶೇ 1.5ರಷ್ಟು ಜಿಗಿದಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹9,164.86 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹6,878.21 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್, ಹಿಂದೂಸ್ತಾನ್ ಜಿಂಕ್, ಬ್ಯಾಂಕ್ ಆಫ್ ಬರೋಡ, ಇಂಡಿಯನ್ ಆಯಿಲ್ ಕಾರ್ಪೊರೇಷನ್ ಮತ್ತು ಹೀರೊ ಮೋಟೊ ಕಾರ್ಪ್ ಉತ್ತಮ ಗಳಿಕೆ ದಾಖಲಿಸಿವೆ. ಬಿಎಸ್‌ಇ ಮಿಡ್ ಕ್ಯಾಪ್‌ನಲ್ಲಿ ಜೀ ಎಂಟರ್‌ಟೇನ್ಮೆಂಟ್, ಜೆಎಸ್‌ಡಬ್ಲ್ಯು ಎನರ್ಜಿ, ಹಿಂದೂಸ್ತಾನ್ ಪೆಟ್ರೋಲಿಯಂ, ಯೂನಿಯನ್ ಬ್ಯಾಂಕ್, ಕೆನರಾ ಬ್ಯಾಂಕ್ ಗಳಿಸಿಕೊಂಡಿವೆ.

ಮುನ್ನೋಟ: ಈ ವಾರ ಎಚ್‌ಸಿಎಲ್ ಟೆಕ್, ಟಿಸಿಎಸ್, ವಿಪ್ರೊ, ಫೈ ಪೈಸೇ, ಆನಂದ್ ರಾಠಿ ವೆಲ್ತ್, ಬಂಧನ್ ಬ್ಯಾಂಕ್, ಜೆಎಸ್‌ಡಬ್ಲ್ಯು ಎನರ್ಜಿ, ಡಿ ಮಾರ್ಟ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಜಾಗತಿಕ ವಿದ್ಯಮಾನಗಳು ಮತ್ತು ದೇಶಿ ಮಾರುಕಟ್ಟೆಯಲ್ಲಾಗುವ ಬೆಳವಣಿಗೆಗಳು ಷೇರುಪೇಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ಸಂಕ್ಷಿಪ್ತ ಸುದ್ದಿ

ನಿರಾಶ್ರಿತರು ವಾಸವಿದ್ದ ಕಟ್ಟಡ ಕುಸಿದು 14 ಸಾವು

ಪೆರ್ನಂಬುಕೊ (ಬ್ರೆಜಿಲ್) (ಎ.ಪಿ): ನಿರಾಶ್ರಿತರು ವಾಸವಿದ್ದ ಶಿಥಿಲ ಕಟ್ಟಡವೊಂದು ಬ್ರೆಜಿಲ್‌ನ ಪೆರ್ನಂಬುಕೊ ರಾಜ್ಯದ ಪೌಲಿಸ್ತಾದಲ್ಲಿ ಶುಕ್ರವಾರ ಕುಸಿದುಬಿದ್ದಿದ್ದು, 6 ಮಕ್ಕಳು ಸೇರಿದಂತೆ ಒಟ್ಟು 14 ಜನರು ಮೃತಪಟ್ಟಿದ್ದಾರೆ.

ಅವಶೇಷಗಳಡಿ ಸಿಕ್ಕಿಬಿದ್ದಿದ್ದ 15 ವರ್ಷದ ಇಬ್ಬರು ಬಾಲಕಿಯರು, 65 ವರ್ಷದ ವೃದ್ಧೆಯನ್ನು ರಕ್ಷಣಾ ಸಿಬ್ಬಂದಿ ರಕ್ಷಿಸಿದ್ದಾರೆ. 18 ವರ್ಷದ ಬಾಲಕನೊಬ್ಬನನ್ನು ರಕ್ಷಿಸಿದೂ ನಂತರ ಆತ ಚಿಕಿತ್ಸೆಗೆ ಸ್ಪಂದಿಸದೇ ಆಸ್ಪತ್ರೆಯಲ್ಲಿ ಮೃತಪಟ್ಟ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಕಟ್ಟಡ 2010ರಿಂದ ಪಾಳುಬಿದ್ದಿತ್ತು. ಕೆಲ ವರ್ಷಗಳಿಂದ ನಿರಾಶ್ರಿತರು ವಾಸವಿದ್ದರು ಎಂದು ಪೌಲಿಸ್ತಾದ ಸ್ಥಳೀಯ ಆಡಳಿತ ಹೇಳಿಕೆ ನೀಡಿದೆ.

ವಿಮಾನ ಅಪಘಾತ: 6 ಸಾವು

ಮುರ್ರೈಟಾ, ಅಮೆರಿಕ (ಎಪಿ): ಇಲ್ಲಿನ ಕ್ಯಾಲಿಫೋರ್ನಿಯ ವಿಮಾನನಿಲ್ದಾಣದ ಸಮೀಪ ಮಂಜುಕವಿದ ವಾತಾವರಣದಲ್ಲಿ ಕಿರು ವಿಮಾನವೊಂದು ಲ್ಯಾಂಡಿಂಗ್ ಆಗುವ ಯತ್ನದಲ್ಲಿ ಅಪಘಾತಕ್ಕೀಡಾಗಿ, ಬೆಂಕಿ ಹೊತ್ತಿಕೊಂಡಿದ್ದು ಇದರ ಪರಿಣಾಮ ಆರು ಮಂದಿ ಮೃತಪಟ್ಟರು.

ಲಾಸ್‌ವೆಗಾಸ್‌ನ ಹ್ಯಾರಿ ರೀಡ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೊರಟಿದ್ದ ಸೆಸ್ನಾ ಸಿ550 ವಿಮಾನ ಶನಿವಾರ ಬೆಳಿಗ್ಗೆ 4.15ರ ವೇಳೆಗೆ ಅಪಘಾತಕ್ಕೆ ಗುರಿಯಾಯಿತು ಎಂದು ಒಕ್ಕೂಟದ ವೈಮಾನಿಕ ಆಡಳಿತದ ಮೂಲಗಳು ತಿಳಿಸಿವೆ.

ಒಂದು ಗಂಟೆ ಕಸರತ್ತಿನ ಬಳಿಕ ಬೆಂಕಿ ನಂದಿಸಲಾಗಿದೆ. ವಿಮಾನನಿಲ್ದಾಣ ಹೊರವಲಯದ ಜಮೀನಿನಲ್ಲಿ ವಿಮಾನ ಪತನಗೊಂಡಿದೆ. ವಿಮಾನದಲ್ಲಿದ್ದ ಆರು ಮಂದಿ ಮೃತಪಟ್ಟಿದ್ದು, ಅವರ ಗುರುತು ತಕ್ಷಣಕ್ಕೆ ಪತ್ತೆಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚೀನಾದಲ್ಲಿ ಭೂಕುಸಿತ: 9 ಮಂದಿ ನಾಪತ್ತೆ

ಬೀಜಿಂಗ್ (ಎಪಿ): ಚೀನಾದ ಕೇಂದ್ರ ಭಾಗದಲ್ಲಿ ಭಾನುವಾರ ಧಾರಾಕಾರ ಮಳೆಯಾಗಿದೆ. ಕೆಲವೆಡೆ ಭೂಕುಸಿತವಾಗಿದ್ದು, ಒಟ್ಟು 9 ಮಂದಿ ನಾಪತ್ತೆಯಾಗಿದ್ದಾರೆ. ಹುಬೈ ಪ್ರದೇಶದಲ್ಲಿ ಹೆದ್ದಾರಿ ನಿರ್ಮಾಣದ ಅವಶೇಷಗಳಡಿ ಸಿಕ್ಕಿಕೊಂಡಿದ್ದ ಐವರನ್ನು ರಕ್ಷಿಸಲಾಗಿದೆ.

ಅವಶೇಷಗಳಡಿ ಸಿಕ್ಕಿರುವವರ ರಕ್ಷಣೆಗೆ ಕಾರ್ಯಾಚರಣೆ ನಡೆದಿದೆ. ಮಳೆ ಹಿನ್ನೆಲೆಯಲ್ಲಿ ಜನರು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಗೊಂಡಿದ್ದಾರೆ. ಈ ಋತುವಿನಲ್ಲಿ ಚೀನಾದಲ್ಲಿ ಮಳೆ ನಿರೀಕ್ಷಿತವಾಗಿದ್ದರೂ ಈ ಬಾರಿ ಮಳೆ ಪ್ರಮಾಣ ಅಧಿಕವಾಗಿದೆ.

ಚೀನಾ ನಿರಂತರವಾಗಿ ಬಿಸಿಗಾಳಿ ವಾತಾವರಣ, ಪ್ರವಾಹ ಸ್ಥಿತಿ ಮತ್ತು ಬರ ಪರಿಸ್ಥಿತಿಗೆ ಗುರಿಯಾಗಿದೆ. ಕಳೆದ ವಾರ ಬೀಜಿಂಗ್‌ನಲ್ಲಿ ಸತತವಾಗಿ 35 ಡಿಗ್ರಿ ಸೆಲ್ಸಿಯಸ್ ತಾಪಮಾನವಿತ್ತು. ಈ ಹಿಂದೆ 1961ರಲ್ಲಿ ಇಂತಹ ಸ್ಥಿತಿ ಎದುರಾಗಿತ್ತು.

'ಅಸಭ್ಯ ಚಿತ್ರ'ಕ್ಕಾಗಿ 17 ವರ್ಷದ ಬಾಲಕನಿಗೆ ಹಣ ನೀಡಿದ ಆರೋಪ

'ಬಿಬಿಸಿ' ನಿರೂಪಕನ ಅಮಾನತು

ಲಂಡನ್ (ಎಪಿ): ಪ್ರಚೋದನಾತ್ಮಕ ಹಾಗೂ ಅಸಭ್ಯ ಚಿತ್ರ ತೆಗೆಯಿಸಿಕೊಳ್ಳಲು ಬಾಲಕನಿಗೆ ಹಣ ನೀಡಿದ್ದ ಆರೋಪದಿಂದಾಗಿ ಬಿಬಿಸಿ ಸುದ್ದಿಸಂಸ್ಥೆ ಪ್ರಮುಖ ನಿರೂಪಕನನ್ನು ಅಮಾನತುಮಾಡಿದೆ.

ಸುದ್ದಿಸಂಸ್ಥೆಯ ಪುರುಷ ನಿರೂಪಕರೊಬ್ಬರು 17 ವರ್ಷದ ಬಾಲಕನಿಗೆ 35 ಸಾವಿರ ಪೌಂಡ್ (₹36.80 ಲಕ್ಷ) ನೀಡಿದ್ದರು ಎಂದು ಸ್ಥಳೀಯ 'ಸನ್' ದಿನಪತ್ರಿಕೆಯು ವರದಿ ಮಾಡಿತ್ತು. ಈ ವರದಿಯಿಂದಾಗಿ ಬಿಬಿಸಿ ಸಂಸ್ಥೆಯು ತೀವ್ರ ಇರಿಸುಮುರಿಸಿಗೆ ಒಳಗಾಗಿತ್ತು.

ಅಲ್ಲದೆ, ಹಣ ನೀಡಿದ್ದ ಆರೋಪ ಕುರಿತಂತೆ ತನಿಖೆ ನಡೆಸಬೇಕು ಎಂದು ಬ್ರಿಟನ್‌ನ ಹಲವು ಹಿರಿಯ ರಾಜಕಾರಣಿಗಳು ಸುದ್ದಿಸಂಸ್ಥೆಗೆ ಒತ್ತಾಯಿಸಿದ್ದರು.

'ಮೇ ತಿಂಗಳಲ್ಲಿ ಈ ಬಗ್ಗೆ ಮೊದಲಿಗೆ ದೂರು ಬಂದಿತ್ತು. ಗುರುವಾರ ನೀಡಿದ ದೂರು ಭಿನ್ನವಾಗಿದ್ದು, ಹೊಸ ಆರೋಪಗಳನ್ನು ಒಳಗೊಂಡಿದೆ. ಆದರೆ, ಸಂಸ್ಥೆಯು ನಿರೂಪಕನನ್ನು ಅಮಾನತುಪಡಿಸಿದೆ ಎಂದು ದೃಢಪಡಿಸುತ್ತೇವೆ' ಎಂದು ಬಿಬಿಸಿ ಹೇಳಿಕೆ ನೀಡಿದೆ.

ಆದರೆ, ಆ ನಿರೂಪಕನ ಗುರುತು ಬಹಿರಂಗವಾಗಿಲ್ಲ. ಇದಕ್ಕೂ ಮೊದಲು ನಿರೂಪಕ ಯಾರಿರಬಹುದು ಎಂಬ ಬಗ್ಗೆ ಜಾಲತಾಣಗಳಲ್ಲಿ ವದಂತಿ, ಚರ್ಚೆ ನಡೆದಿತ್ತು. ಹೀಗಾಗಿ, ಬಿಬಿಸಿಯ ಹಲವು ನಿರೂಪಕರು ಸ್ವಯಂಪ್ರೇರಿತವಾಗಿ 'ಆ ನಿರೂಪಕ ನಾನಲ್ಲ' ಎಂದು ಸ್ಪಷ್ಟನೆ ನೀಡಿದ್ದರು.

ಬ್ರಿಟನ್‌ನಲ್ಲಿ ಲೈಂಗಿಕತೆಗೆ ಸಮ್ಮತಿ ನೀಡಲು ಕಾನೂನು ಪ್ರಕಾರ ಗರಿಷ್ಠ ವಯೋಮಾನ 16 ವರ್ಷವಾಗಿದೆ. ಆದರೆ, 18 ವರ್ಷದೊಳಗಿನವರನ್ನು ಅಸಭ್ಯ ರೀತಿಯಲ್ಲಿ ಚಿತ್ರ ತೆಗೆಯಿಸಿಕೊಳ್ಳುವಂತೆ ಪ್ರಚೋದಿಸುವುದು ಅಪರಾಧವಾಗಿದೆ.

ಈ ಬೆಳವಣಿಗೆ ಕುರಿತು ನೀಡಿರುವ ಹೇಳಿಕೆಯಲ್ಲಿ ಬಿಬಿಸಿಯು, 'ಸಂಸ್ಥೆಯು ಯಾವುದೇ ರೀತಿಯ ಆರೋಪಗಳನ್ನು ಗಂಭೀರವಾಗಿ ಪರಿಗಣಿಸಲಿದೆ ಹಾಗೂ ಅಂತಹ ಆರೋಪಗಳನ್ನು ಸಕಾರಾತ್ಮಕವಾಗಿ ನಿರ್ವಹಿಸಲಾಗುತ್ತದೆ' ಎಂದು ಸ್ಪಷ್ಟಪಡಿಸಿದೆ.

ಸಚಿವೆ ವಿಕ್ಟೋರಿಯ ಅಕಿನ್ಸ್ ಅವರು, 'ಬಿಬಿಸಿ ವಿರುದ್ಧದ ಆರೋಪಗಳು ಗಂಭೀರವಾದುದು. ಸಾರ್ವಜನಿಕವಾಗಿ ಈ ಬಗ್ಗೆ ಕಳವಳ ಹೆಚ್ಚುತ್ತಿರುವ ಕಾರಣ ಸುದ್ದಿಸಂಸ್ಥೆಯು ತ್ವರಿತವಾಗಿ ಕ್ರಮಕೈಗೊಳ್ಳಬೇಕು. ಅಗತ್ಯ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದ್ದರು.

21ರಂದು ಭಾರತಕ್ಕೆ ಶ್ರೀಲಂಕಾ ಅಧ್ಯಕ್ಷ

ಭಾರತದ ಯೋಜನೆಗಳ ಜಾರಿಗೆ ವಿಕ್ರಮಸಿಂಘೆ ಒತ್ತು: ಅಧಿಕಾರಿಗಳ ಮಾಹಿತಿ

ಕೊಲಂಬೊ (ಪಿಟಿಐ): ಶ್ರೀಲಂಕಾದ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಜುಲೈ 21ರಿಂದ ಎರಡು ದಿನ ಭಾರತ ಪ್ರವಾಸ ಕೈಗೊಳ್ಳುವರು. ಈ ಅವಧಿಯಲ್ಲಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗುವ ನಿರೀಕ್ಷೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ರಾನಿಲ್ ವಿಕ್ರಮಸಿಂಘೆ

ಅಧ್ಯಕ್ಷರಾಗಿ ನೇಮಕಗೊಂಡ ಬಳಿಕ ಇದು ವಿಕ್ರಮಸಿಂಘೆ ಅವರ ಮೊದಲ ಭಾರತ ಭೇಟಿ. ದ್ವೀಪರಾಷ್ಟ್ರವು ಆರ್ಥಿಕ ಸಂಕಷ್ಟಕ್ಕೀಡಾದ ನಂತರ ಗೊಟಬಯ ರಾಜಪಕ್ಸ ಪದಚ್ಯುತಿಗೊಂಡಿದ್ದು, ತೆರವಾದ ಸ್ಥಾನದಲ್ಲಿ ವಿಕ್ರಮಸಿಂಘೆ ಅಧ್ಯಕ್ಷರಾಗಿ ನೇಮಕವಾಗಿದ್ದರು.

ಭೇಟಿ ಅವಧಿಯಲ್ಲಿ ವಿಕ್ರಮಸಿಂಘೆ ಅವರು ಇಂಧನ, ವಿದ್ಯುತ್, ಕೃಷಿ ಸೇರಿದಂತೆ ದ್ವೀಪರಾಷ್ಟ್ರಕ್ಕೆ ಸಂಬಂಧಿಸಿದ ಅನೇಕ ಭಾರತೀಯ ಯೋಜನೆಗಳ ಜಾರಿಗೆ ಒತ್ತು ನೀಡಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತದ ವಿದೇಶಾಂಗ ಕಾರ್ಯದರ್ಶಿ ವಿನಯ್ ಮೋಹನ್ ಕ್ವಾತ್ರಾ ಅವರು ವಿಕ್ರಮಸಿಂಘೆ ಅವರ ಭೇಟಿಗೆ ಸಂಬಂಧಿಸಿದ ಸಿದ್ಧತೆಗಳಿಗೆ ಅಂತಿಮ ರೂಪ ನೀಡಲು ಮುಂದಿನ ವಾರ ಕೊಲಂಬೊಕ್ಕೆ ಭೇಟಿ ನೀಡುವರು ಎಂದು ಸ್ಥಳೀಯ ದಿನಪತ್ರಿಕೆ ಡೈಲಿ ಮಿರರ್ ವರದಿ ಮಾಡಿದೆ.

ಮೀನುಗಾರಿಕೆ ಸಚಿವ ಡೌಗ್ಲಸ್ ದೇವಾನಂದ, ಇಂಧನ ಸಚಿವ ಕಂಚನ ವಿಜೇಶೇಖರ, ವಿದೇಶಾಂಗ ವ್ಯವಹಾರಗಳ ಸಚಿವ ಅಲಿ ಸಾಬ್ರಿ, ಅಧ್ಯಕ್ಷರ ಸಿಬ್ಬಂದಿಯ ಮುಖ್ಯಸ್ಥ ಸಗಲ ರತ್ನಾಯಕೆ ಅವರೂ ಅಧ್ಯಕ್ಷರ ಜೊತೆಗೆ ಭಾರತ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ವರದಿ ತಿಳಿಸಿದೆ.

ಆರ್ಥಿಕ ನೆರವಿನಲ್ಲಿ ನಿರ್ಣಾಯಕ ಪಾತ್ರ: ಭಾರತ

ಶ್ರೀಲಂಕಾವು ಆರ್ಥಿಕ ಸಂಕಷ್ಟದಿಂದ ಹೊರಬರಲು ಅಗತ್ಯ ನೆರವು ನೀಡಲಿದ್ದು, ಈ ಪ್ರಕ್ರಿಯೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ ಎಂದು ಭಾರತ ಪುನರುಚ್ಚರಿಸಿದೆ.

ಇಲ್ಲಿ ನಡೆದ ನಿರ್ಮಾಣ, ಇಂಧನ ಮತ್ತು ವಿದ್ಯುತ್ ಕ್ಷೇತ್ರದ ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಭಾರತದ ಡೆಪ್ಯುಟಿ ಹೈ ಕಮಿಷನರ್ ವಿನೋದ್ ಕೆ. ಜೇಕಬ್ ಈ ಭರವಸೆ ನೀಡಿದರು.

ಉಭಯ ದೇಶಗಳ ನಡುವಣ ಮೈತ್ರಿ ಕುರಿತ ಬೆಳವಣಿಗೆಗಳು ಬಾಂಧವ್ಯ ಗಟ್ಟಿಗೊಳಿಸಿವೆ. ಶ್ರೀಲಂಕಾಕ್ಕೆ ಆರ್ಥಿಕ ನೆರವು ನೀಡಿದ ಮೊದಲ ರಾಷ್ಟ್ರ ಭಾರತ. ಐಎಂಎಫ್ ನೆರವು ದೊರಕಿಸುವಲ್ಲಿಯೂ ಪ್ರಧಾನ ಪಾತ್ರ ವಹಿಸಲಿದೆ ಎಂದು ಹೇಳಿದರು.

15 ಭಾರತೀಯ ಮೀನುಗಾರರ ಬಂಧನ

ಶ್ರೀಲಂಕಾದ ನೌಕಾಪಡೆ ಸಿಬ್ಬಂದಿಯು ದೇಶದ ಕಡಲಗಡಿಯಲ್ಲಿ ಮೀನುಗಾರಿಕೆಯಲ್ಲಿ ತೊಡಗಿದ್ದ ಆರೋಪದಡಿ 15 ಮಂದಿ ಭಾರತೀಯ ಮೀನುಗಾರರನ್ನು ಬಂಧಿಸಿದ್ದಾರೆ.

ನೌಕಾಪಡೆ ಮತ್ತು ಕರಾವಳಿ ಕಾವಲು ಪಡೆಯು ವಿಶೇಷ ಕಾರ್ಯಾಚರಣೆ ನಡೆಸಿ, ಅಕ್ರಮವಾಗಿ ಮೀನುಗಾರಿಕೆಯಲ್ಲಿ ತೊಡಗಿದ್ದ ಮೀನುಗಾರರನ್ನು ಜುಲೈ 8ರ ರಾತ್ರಿ ಬಂಧಿಸಿತು ಎಂದು ನೌಕಾಪಡೆಯು ಹೇಳಿಕೆಯಲ್ಲಿ ತಿಳಿಸಿತು.

ಮೀನುಗಾರಿಕೆಗೆ ಬಳಸಿದ್ದ ಬಲೆಯನ್ನು ಜಪ್ತಿ ಮಾಡಿದ್ದು, ಬಂಧಿತ ಮೀನುಗಾರರನ್ನು ಕಂಕೆಸಂತೂರೈ ಹಡಗು ನೆಲೆಗೆ ಕರೆತಂದಿದ್ದು, ಮೈಲಾಡಿ ಮೀನುಗಾರಿಕೆ ಇನ್‌ಸ್ಪೆಕ್ಟರ್ ಅವರ ಸುಪರ್ದಿಗೆ ಒಪ್ಪಿಸಲಾಗಿದೆ.

ಉಜ್ಜಯಿನಿ: ಚುಡಾಯಿಸಿದವರು ವಶಕ್ಕೆ, ಥಳಿಸಿದವರ ಬಂಧನ

ಉಜ್ಜಯಿನಿ (ಪಿಟಿಐ): ಮಧ್ಯ ಪ್ರದೇಶದ ಉಜ್ಜಯಿನಿ ಜಿಲ್ಲೆಯ ಗುರ್ಲಾ ಗ್ರಾಮದಲ್ಲಿ ಪರಿಶಿಷ್ಟ ಜಾತಿಯ ಬಾಲಕರ ಗುಂಪೊಂದು ಪ್ರಬಲ ಜಾತಿಯ ಬಾಲಕಿಯರನ್ನು ಚುಡಾಯಿಸಿದ್ದು, ಎರಡು ಜಾತಿಗಳ ನಡುವೆ ಸಂಘರ್ಷದ ವಾತಾವರಣ ನಿರ್ಮಾಣಗೊಂಡಿದೆ. ಕಾನೂನು ಸುವ್ಯವಸ್ಥೆ ಕಾಪಾಡಲು ಹೆಚ್ಚುವರಿ ಭದ್ರತಾ ಪಡೆಗಳನ್ನು ನಿಯೋಜಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

'ಬಾಲಕಿಯರು ನೀಡಿದ ದೂರಿನನ್ವಯ ಪರಿಶಿಷ್ಟ ಜಾತಿಯ ಐವರು ಬಾಲಕರನ್ನು ವಶಕ್ಕೆ ಪಡೆಯಲಾಗಿದ್ದು; ಇವರಿಗೆ ಥಳಿಸಿದ ಪ್ರಬಲ ಜಾತಿಯ ಆರು ಜನರನ್ನು ಬಂಧಿಸಲಾಗಿದೆ. ಗ್ರಾಮದಲ್ಲಿ ಪರಿಸ್ಥಿತಿ ನಿಯಂತ್ರಣದಲ್ಲಿದೆ' ಎಂದು ಉನ್ಹೇಲ್ ಪೊಲೀಸ್ ಠಾಣಾಧಿಕಾರಿ ಕೃಷ್ಣ ಲಾಲ್‌ಚಂದಾನಿ ಸುದ್ದಿಸಂಸ್ಥೆಗೆ ಮಾಹಿತಿ ನೀಡಿದರು.

ಪರಿಶಿಷ್ಟ ಜಾತಿಯ ಹುಡುಗರು ಶುಕ್ರವಾರ ಸಂಜೆ ಪ್ರಬಲ ಜಾತಿಯ ಹುಡುಗಿಯರನ್ನು ಅಸಭ್ಯವಾಗಿ ನಿಂದಿಸಿದ್ದಾರೆ ಎಂದು ಆರೋಪಿಸಲಾಗಿದೆ. ಅನುಚಿತವಾಗಿ ವರ್ತಿಸಿದ್ದ ಬಾಲಕರಿಗೆ ಥಳಿಸಿದ ಪ್ರಬಲ ಸಮುದಾಯದ ಜನರು, ಅವರನ್ನು ಶನಿವಾರ ಠಾಣೆಗೆ ಕರೆತಂದಿದ್ದಾರೆ. ಬಾಲಕಿಯರು ದೂರು ನೀಡಿದ್ದಾರೆ. ಇದರನ್ವಯ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.


ತಮಗೆ ಥಳಿಸಿದವರ ವಿರುದ್ಧ ಬಾಲಕರು ದೂರು ನೀಡಿದ್ದಾರೆ. ಇವರ ವೈದ್ಯಕೀಯ ಪರೀಕ್ಷೆ ನಡೆಸಿ, ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡದ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಬಲ ಸಮುದಾಯದ ಆರು ಜನರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದೇವೆ ಎಂದು ಲಾಲ್‌ಚಂದಾನಿ ಹೇಳಿದರು.

ಗುರ್ಲಾ ಗ್ರಾಮದಲ್ಲಿ ರಜಪೂತ ಹಾಗೂ ಪರಿಶಿಷ್ಟ ಜಾತಿಯ ಜನರೇ ಹೆಚ್ಚಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಪ್ಪಲಿ ನೆಕ್ಕುವಂತೆ ಆಗ್ರಹಿಸಿದ್ದವನ ಬಂಧನ

ಸೋನ್‌ಭದ್ರ, ಉತ್ತರಪ್ರದೇಶ (ಪಿಟಿಐ): ಪರಿಶಿಷ್ಟ ಜಾತಿಯ ವ್ಯಕ್ತಿಗೆ ಥಳಿಸಿ, ಚಪ್ಪಲಿ ನೆಕ್ಕುವಂತೆ ಒತ್ತಾಯಿಸಿದ್ದ ವಿದ್ಯುತ್ ಇಲಾಖೆಯ ಗುತ್ತಿಗೆ ನೌಕರನೊಬ್ಬನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದು, ನೌಕರನನ್ನು ಸೇವೆಯಿಂದ ಅಮಾನತು ಮಾಡಲಾಗಿದೆ. 'ಜುಲೈ 6ರಂದು ನನ್ನ ತಾಯಿಯ ಚಿಕ್ಕಪ್ಪ ಇರುವೆಡೆಗೆ ಹೋಗಿದ್ದೆ. ಅಲ್ಲಿ ವಿದ್ಯುತ್ ಸಮಸ್ಯೆ ಎದುರಾಗಿತ್ತು. ದೋಷ ಪತ್ತೆ ಹಚ್ಚುವಾಗ, ಗುತ್ತಿಗೆ ನೌಕರ ತೇಜ್‌ಬಾಲಿ ಸಿಂಗ್ ಪಟೇಲ್ ನನ್ನ ಮೇಲೆ ದೌರ್ಜನ್ಯ ಎಸಗಿದ್ದಾರೆ' ಎಂದು ಪರಿಶಿಷ್ಟ ಜಾತಿಯ ರಾಜೇಂದ್ರ ಚಮಾರ್ ಶನಿವಾರ ಪೊಲೀಸರಿಗೆ ದೂರು ನೀಡಿದ್ದರು.



ತಿಪಟೂರು ಕೊಬ್ಬರಿ

(ಕ್ವಿಂಟಲ್‌ಗೆ)

ಕನಿಷ್ಠ	₹6800
ಗರಿಷ್ಠ	₹8600
ಮಾದರಿ	₹8000
ಒಟ್ಟು ಆವಕ	986.42

ದೇಗುಲದ ಬಳಿ ಮಾಂಸದ ತ್ಯಾಜ್ಯ; ಸೆರೆಯಾದ ಇ–ರಿಕ್ಷಾ ಚಾಲಕ

ಶಹಜಹಾನ್‌ಪುರ (ಉತ್ತರ ಪ್ರದೇಶ) (ಪಿಟಿಐ): ಇಲ್ಲಿನ ರಾಧಾ ರಾಣಿ ದೇಗುಲದ ಸಮೀಪ ಶುಕ್ರವಾರ ರಾತ್ರಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣಗೊಂಡಿದ್ದ (ಮಾಂಸದ ತ್ಯಾಜ್ಯ ತುಂಬಿದ್ದ ಗೋಣಿಚೀಲ ಪತ್ತೆ) ಪ್ರಕರಣಕ್ಕೆ ಸಂಬಂಧಿಸಿದಂತೆ ಇ–ರಿಕ್ಷಾ ಚಾಲಕ ವಾಸಿಂನನ್ನು ಬಂಧಿಸಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಕುಮಾರ್ ಮೀನಾ ಭಾನುವಾರ ತಿಳಿಸಿದ್ದಾರೆ.

ವಾಸಿಂನ ನಿರ್ಲಕ್ಷ್ಯದಿಂದಲೇ ಮಾಂಸದ ತ್ಯಾಜ್ಯವಿದ್ದ ಗೋಣಿಚೀಲವೊಂದು ದೇಗುಲದ ಬಳಿ ಬಿದ್ದಿದೆ ಎಂದು ಅವರು ಹೇಳಿದ್ದಾರೆ.

ಮಾಂಸದ ತ್ಯಾಜ್ಯ ತುಂಬಿದ್ದ ಗೋಣಿಚೀಲ ದೇಗುಲದ ಸಮೀಪ ಪತ್ತೆಯಾಗುತ್ತಿದ್ದಂತೆ, ವಿಶ್ವ ಹಿಂದೂ ಪರಿಷತ್‌ನ ಸ್ಥಳೀಯ ಕಾರ್ಯಕರ್ತರು ಪ್ರತಿಭಟಿಸಿದ್ದರು. ಪೊಲೀಸರು ಆರೋಪಿಗಳ ಪತ್ತೆಗಾಗಿ ಮೂರು ತನಿಖಾ ತಂಡ ರಚಿಸಿದ್ದರು. ಕರ್ತವ್ಯಲೋಪ ಎಸಗಿದ್ದಾರೆ ಎಂದು ಔಟ್‌ಪೋಸ್ಟ್ ಅಧಿಕಾರಿಯನ್ನು ಆ ಹುದ್ದೆಯಿಂದ ಬಿಡುಗಡೆ ಮಾಡಿ ಬೇರೆಡೆ ಕಳುಹಿಸಿದ್ದರು.

ಮುಖ್ಯಾಂಶಗಳು
- ರಿಕ್ಷಾ ಚಾಲಕನ ನಿರ್ಲಕ್ಷ್ಯವೇ ಕಾರಣ: ಪೊಲೀಸ್
- ಸಿ.ಸಿ.ಟಿ.ವಿ ಕ್ಯಾಮೆರಾದ ದೃಶ್ಯಾವಳಿಗಳಿಂದ ಪ್ರಕರಣ ಪತ್ತೆ

ಪೊಲೀಸರು ಸಿ.ಸಿ.ಟಿ.ವಿ ಕ್ಯಾಮೆರಾದ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ, ವಾಸಿಂ ತನ್ನ ಇ–ರಿಕ್ಷಾದಲ್ಲಿ ಮಾಂಸದ ತ್ಯಾಜ್ಯ ಸಾಗಿಸುವಾಗ ಒಂದು ಚೀಲ ದೇಗುಲದ ಬಳಿ ಕೆಳಗೆ ಬಿದ್ದಿರುವುದು ಗಮನಕ್ಕೆ ಬಂದಿದೆ. ಇದನ್ನು ಗಮನಿಸದೆ ವಾಸಿಂ ಮುಂದೆ ಚಲಿಸಿರುವುದು ಗೊತ್ತಾಗಿದೆ.

'ದೇಗುಲದ ಬಳಿ ಚೀಲ ಬಿದ್ದಿದ್ದು ಗೊತ್ತಾಗಿಲ್ಲ. ವಿಲೇವಾರಿ ಸ್ಥಳದಲ್ಲಿ ನೋಡಿದಾಗ ಮೂರರ ಬದಲು ಎರಡಷ್ಟೇ ಕಂಡವು. ತಕ್ಷಣವೇ ಮರಳಿದಾಗ ದೇವಾಲಯದ ಬಳಿ ಪ್ರತಿಭಟನೆ ನಡೆಯುತ್ತಿದ್ದುದನ್ನು ಗಮನಿಸಿ, ಮನೆಗೆ ಮರಳಿದೆ' ಎಂದು ವಾಸಿಂ ವಿಚಾರಣೆ ವೇಳೆ ತಿಳಿಸಿದ್ದಾರೆ ಎಂದು ಎಸ್‌ಪಿ ಮೀನಾ ಹೇಳಿದ್ದಾರೆ.

ಇಂಗ್ಲೆಂಡ್ 'ಕನಸು' ಜೀವಂತ

ಆ್ಯಷಸ್: ಮೂರನೇ ಟೆಸ್ಟ್‌ನಲ್ಲಿ ಮೂರು ವಿಕೆಟ್ ಗೆಲುವು; ಹ್ಯಾರಿ ಬ್ರೂಕ್ಸ್‌–ವೋಕ್ಸ್ ಜೊತೆಯಾಟ

ಲೀಡ್ಸ್ (ಎಪಿ): ಆ್ಯಷಸ್ ಸರಣಿಯನ್ನು ಕೈವಶ ಮಾಡಿಕೊಳ್ಳುವ ಆಸ್ಟ್ರೇಲಿಯಾದ ಗುರಿಗೆ ಇಂಗ್ಲೆಂಡ್ ತಂಡದ ಬ್ಯಾಟರ್‌ಗಳು ಅಡ್ಡಿಯಾದರು.

ಹ್ಯಾರಿ ಬ್ರೂಕ್ ಮತ್ತು ಕ್ರಿಸ್ ವೋಕ್ಸ್ (ಔಟಾಗದೆ 32) ಅವರು ಏಳನೇ ವಿಕೆಟ್ ಜೊತೆಯಾಟದಲ್ಲಿ ಸೇರಿಸಿದ 59 ರನ್‌ಗಳಿಂದಾಗಿ ಇಂಗ್ಲೆಂಡ್ ತಂಡವು 3 ವಿಕೆಟ್‌ಗಳ ರೋಚಕ ಜಯ ಸಾಧಿಸಿತು. ಇದರೊಂದಿಗೆ ಸರಣಿ ಜಯದ ಕನಸನ್ನು ಜೀವಂತವಾಗಿ ಉಳಿಸಿಕೊಂಡಿತು. ಮೊದಲ ಎರಡು ಪಂದ್ಯಗಳಲ್ಲಿ ಗೆದ್ದಿದ್ದ ಆಸ್ಟ್ರೇಲಿಯಾ ಇಲ್ಲಿಯೂ ಕಠಿಣ ಪೈಪೋಟಿಯೊಡ್ಡಿತು.

251 ರನ್‌ಗಳ ಜಯದ ಗುರಿ ಬೆನ್ನಟ್ಟಿದ್ದ ಇಂಗ್ಲೆಂಡ್ ತಂಡಕ್ಕೆ ಹಾದಿ ಸುಲಭವಾಗಿರಲಿಲ್ಲ. ಬ್ರೂಕ್ (75; 93ಎ, 4X9) ಮತ್ತು ಕ್ರಿಸ್ (ಅಜೇಯ 32) ಅವರಿಬ್ಬರ ಆಟದಿಂದ ತಂಡವು ಜಯದ ಸನಿಹ ಸಾಗಿತ್ತು. ತಂಡವು 131 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತ್ತು. ಆದರೆ ನಂತರದ 99 ರನ್‌ಗಳನ್ನು ಗಳಿಸುವಷ್ಟರಲ್ಲಿ ಮತ್ತೆ ಮೂರು ವಿಕೆಟ್‌ಗಳನ್ನು ಕಳೆದುಕೊಂಡಿತು. ಆದರೆ ಈ ಹಂತದಲ್ಲಿ ಬ್ರೂಕ್ ಆತ್ಮವಿಶ್ವಾಸದಿಂದ ಆಡಿದರು. ಜಾನಿ ಬೆಸ್ಟೊ (5 ರನ್) ಕೂಡ ಹೆಚ್ಚು ಹೊತ್ತು ನಿಲ್ಲಲು ಸ್ಟಾರ್ಕ್ ಬಿಡಲಿಲ್ಲ. 48ನೇ ಓವರ್‌ನಲ್ಲಿ ಹ್ಯಾರಿ ಬ್ರೂಕ್ ವಿಕೆಟ್ ಗಳಿಸಿದ ಸ್ಟಾರ್ಕ್ ಕೇಕೆ ಹಾಕಿದರು. ಆಗ ತಂಡದ ಮೊತ್ತವು 7 ವಿಕೆಟ್‌ಗಳಿಗೆ 230 ರನ್‌ಗಳಾಗಿದ್ದವು.



ಇಂಗ್ಲೆಂಡ್ ತಂಡವನ್ನು ಗೆಲುವಿನ ದಡ ಸೇರಿಸಿದ ಮಾರ್ಕ್ ವುಡ್ ಹಾಗೂ ಕ್ರಿಸ್ ವೋಕ್ಸ್ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- ಮಾರ್ಕ್ ವುಡ್ ಮಿಂಚಿನ ಬ್ಯಾಟಿಂಗ್
- ಕಮಿನ್ಸ್ ಬಳಗಕ್ಕೆ ನಿರಾಸೆ
- ಸರಣಿಯಲ್ಲಿ 2–1 ರಿಂದ ಮುನ್ನಡೆಯಲ್ಲಿರುವ ಆಸ್ಟ್ರೇಲಿಯಾ

ಈ ಹಂತದಲ್ಲಿ ಕ್ರಿಸ್ ಅವರೊಂದಿಗೆ ಸೇರಿಕೊಂಡ ಮಾರ್ಕ್ ವುಡ್ (ಅಜೇಯ 16, 8ಎಸೆತ) ಆತಂಕ ದೂರ ಮಾಡಿದರು. ಒಂದು ಸಿಕ್ಸರ್ ಮತ್ತು ಒಂದು ಬೌಂಡರಿ ಬಾರಿಸಿದ ಮಾರ್ಕ್ ರನ್ ಗಳಿಕೆಯ ವೇಗ ಹೆಚ್ಚಿಸಿದರು. ಆದರೆ ಈ ಧಾವಂತದಲ್ಲಿ ಒಂದು ಬಾರಿ ವಿಕೆಟ್‌ಕೀಪರ್ ಅಲೆಕ್ಸ್ ಕ್ಯಾರಿಯಿಂದ ಜೀವದಾನ ಕೂಡ ಲಭಿಸಿತು.

ಮಾರ್ಕ್ ವುಡ್ ಮೊದಲ ಇನಿಂಗ್ಸ್‌ನಲ್ಲಿ ಐದು ವಿಕೆಟ್‌ಗಳನ್ನು ಗಳಿಸಿದ್ದರು. ಬ್ಯಾಟಿಂಗ್‌ನಲ್ಲಿಯೂ ತಮ್ಮ ಪ್ರತಿಭೆ ಮೆರೆದು ಇಂಗ್ಲೆಂಡ್ ತಂಡವನ್ನು ಗೆಲುವಿನ ದಡ ಸೇರಿಸಿದರು. ಆಸ್ಟ್ರೇಲಿಯಾದ ಬೌಲರ್‌ಗಳ ಶಾರ್ಟ್ ಪಿಚ್ ಎಸೆತಗಳನ್ನು ಆಡುವುದು ಸುಲಭವಾಗಿರಲಿಲ್ಲ. ಸ್ಟಾರ್ಕ್, ಬೊಲಾಂಡ್ ಮತ್ತು ಕಮಿನ್ಸ್ ಅವರ ಬೌನ್ಸರ್‌ಗಳ ಮುಂದೆ ಅಗ್ರಕ್ರಮಾಂಕದ ಬ್ಯಾಟರ್‌ಗಳು ಬೇಗನೆ ಔಟಾಗಿದ್ದರು. ಆದರೂ ಛಲದಿಂದ ಆಡಿದ ಕ್ರಿಸ್ ಮತ್ತು ವುಡ್ ಗಮನ ಸೆಳೆದರು.

ಸರಣಿ ಜಯಿಸಲು ಇಂಗ್ಲೆಂಡ್ ಇನ್ನುಳಿದಿರುವ ಎರಡೂ ಪಂದ್ಯಗಳನ್ನು ಗೆಲ್ಲಬೇಕು. 2–1ರಿಂದ ಮುನ್ನಡೆಯಲ್ಲಿರುವ ಆಸ್ಟ್ರೇಲಿಯಾ ಒಂದು ಗೆದ್ದರೂ ಸಾಕು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 60.4 ಓವರ್‌ಗಳಲ್ಲಿ 263. ಇಂಗ್ಲೆಂಡ್: 52.3 ಓವರ್‌ಗಳಲ್ಲಿ 237. ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 67.1 ಓವರ್‌ಗಳಲ್ಲಿ 224. ಇಂಗ್ಲೆಂಡ್: 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 254 (ಹ್ಯಾರಿ ಬ್ರೂಕ್ 75, ಕ್ರಿಸ್ ವೋಕ್ಸ್ ಅಜೇಯ 32, ಮಾರ್ಕ್ ವುಡ್ ಅಜೇಯ 16, ಮಿಚೆಲ್ ಸ್ಟಾರ್ಕ್ 78ಕ್ಕೆ5, ಪ್ಯಾಟ್ ಕಮಿನ್ಸ್ 77ಕ್ಕೆ1, ಮಿಚೆಲ್ ಮಾರ್ಷ್ 23ಕ್ಕೆ1) ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ 3 ವಿಕೆಟ್‌ಗಳ ಜಯ. ಪಂದ್ಯಶ್ರೇಷ್ಠ: ಮಾರ್ಕ್ ವುಡ್. ಸರಣಿ 2–1.

ಬ್ರೂಕ್ಸ್ ದಾಖಲೆ

ಇಂಗ್ಲೆಂಡ್‌ನ ಹ್ಯಾರಿ ಬ್ರೂಕ್ಸ್ ಅವರು ಟೆಸ್ಟ್‌ನಲ್ಲಿ ಅತಿಕಡಿಮೆ ಎಸೆತಗಳಲ್ಲಿ 1000 ರನ್ ಪೂರೈಸಿದ ಆಟಗಾರ ಎಂಬ ದಾಖಲೆ ತಮ್ಮದಾಗಿಸಿಕೊಂಡರು. ಬ್ರೂಕ್ಸ್, 1,058 ಎಸೆತಗಳಲ್ಲಿ ಸಾವಿರ ರನ್‌ಗಳ ಗಡಿ ತಲುಪಿದರು.

ನ್ಯೂಜಿಲೆಂಡ್‌ನ ಕಾಲಿನ್ ಡಿ ಗ್ರಾಂಡ್‌ಹೋಮ್ (1,140 ಎಸೆತ) ಹೆಸರಿನಲ್ಲಿದ್ದ ದಾಖಲೆಯನ್ನು ಅವರು ಮುರಿದರು. ನ್ಯೂಜಿಲೆಂಡ್‌ನ ಟಿಮ್ ಸೌಥಿ (1,167) ಮತ್ತು ಇಂಗ್ಲೆಂಡ್‌ನ ಬೆನ್ ಡಕೆಟ್ (1,168) ಬಳಿಕದ ಸ್ಥಾನಗಳಲ್ಲಿದ್ದಾರೆ.

ಹರ್ಮನ್ ಬಳಗಕ್ಕೆ ಜಯ

ಮಹಿಳಾ ಟಿ20 ಕ್ರಿಕೆಟ್: ಬಾಂಗ್ಲಾ ಎದುರು ಶುಭಾರಂಭ

ಮೀರ್‌ಪುರ (ಪಿಟಿಐ): ನಾಯಕಿ ಹರ್ಮನ್‌ಪ್ರೀತ್ ಕೌರ್ ಅರ್ಧಶತಕದ ಬಲದಿಂದ ಭಾರತ ತಂಡವು ಭಾನುವಾರ ಬಾಂಗ್ಲಾದೇಶ ವಿರುದ್ಧ ನಡೆದ ಮಹಿಳಾ ಟಿ20 ಪಂದ್ಯದಲ್ಲಿ ಜಯಿಸಿತು. ಇದರೊಂದಿಗೆ ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಭಾರತದ ಎದುರು ಆತಿಥೇಯ ಬಾಂಗ್ಲಾ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 114 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಭಾರತ ತಂಡವು ಹರ್ಮನ್ (ಔಟಾಗದೆ 54, 35ಎ, 4X6, 6X2) ಅವರ ಬಿರುಸಿನ ಬ್ಯಾಟಿಂಗ್ ಬಲದಿಂದ 16.2 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 118 ರನ್ ಗಳಿಸಿತು.

ಭಾರತ ತಂಡಕ್ಕೆ ಮೊದಲ ಓವರ್‌ನಲ್ಲಿಯೇ ಆಘಾತ ಎದುರಾಯಿತು. ಶಫಾಲಿ ವರ್ಮಾ ಅವರು ಖಾತೆ ತೆರೆಯುವ ಮುನ್ನವೇ ಮರೂಫಾ ಅಖ್ತರ್ ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಇನ್ನೊಂದು ಬದಿಯಲ್ಲಿದ್ದ ಸ್ಮೃತಿ ಮಂದಾನ (38; 34ಎ, 4X5) ಮತ್ತು ಜೆಮಿಮಾ ರಾಡ್ರಿಗಸ್ (11; 14ಎ) ಸ್ವಲ್ಪ ಹೊತ್ತು ಪ್ರತಿರೋಧ ಒಡ್ಡಿದರು. ಆದರೆ, ಸುಲ್ತಾನ ಖಾತೂನ್ ಬೌಲಿಂಗ್‌ನಲ್ಲಿ ಜೆಮಿಮಾ ರಾಡ್ರಿಗಸ್ ಕ್ಲೀನ್‌ಬೌಲ್ಡ್ ಆದರು.

ಕ್ರೀಸ್‌ಗೆ ಬಂದ ಹರ್ಮನ್ ಅವರು ಸ್ಮೃತಿಯೊಂದಿಗೆ ಸೇರಿ ಎದುರಾಳಿ ಬೌಲರ್‌ಗಳಿಗೆ ತಿರುಗೇಟು ನೀಡಿದರು. 154.29ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದ ಹರ್ಮನ್ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಸ್ಮೃತಿ ಜೊತೆಗೆ ಮೂರನೇ ವಿಕೆಟ್ ಜೊತೆಯಾಟದಲ್ಲಿ 70 ರನ್ ಸೇರಿಸಿದರು. ಇದು ತಂಡದ ಗೆಲುವಿಗೆ ಪ್ರಮುಖ ಮೆಟ್ಟಿಲಾಯಿತು. ಇದರಿಂದಾಗಿ ಭಾರತದ ಬೌಲರ್‌ಗಳ ಉತ್ತಮ ಬೌಲಿಂಗ್ ವ್ಯರ್ಥವಾಗುವುದೂ ತಪ್ಪಿತು.

ಮೊದಲ ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶ ತಂಡಕ್ಕೆ ಶತಿ ರಾಣಿ ಮತ್ತು ಶಮಿಮಾ ಸುಲ್ತಾನ ಉತ್ತಮ ಆರಂಭ ನೀಡಿದರು. ಶೋಭನಾ, ಶೋಮಾ ಅಖ್ತರ್ ಅವರು ಉತ್ತಮ ಕಾಣಿಕೆ ನೀಡಿದರು. ಆದರೆ ಉಳಿದ ಬ್ಯಾಟರ್‌ಗಳು ದೊಡ್ಡ ಇನಿಂಗ್ಸ್ ಆಡಲಿಲ್ಲ. ಭಾರತ ತಂಡದ ಬೌಲರ್‌ಗಳಾದ ಪೂಜಾ ವಸ್ತ್ರಕರ್, ಮಿನು ಮಣಿ ಮತ್ತು ಶಫಾಲಿ ವರ್ಮಾ ಅವರು ತಲಾ ಒಂದು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 114 (ಶತಿ ರಾಣಿ 22, ಶೋಭನಾ ಮೊಸ್ತಾರಿ 23, ಶೋಮಾ ಅಖ್ತರ್ ಔಟಾಗದೆ 28, ಪೂಜಾ ವಸ್ತ್ರಕರ್ 16ಕ್ಕೆ1, ಮಿನು ಮಣಿ 21ಕ್ಕೆ1, ಶಫಾಲಿ ವರ್ಮಾ 18ಕ್ಕೆ1) ಭಾರತ: 16.2 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 118 (ಸ್ಮೃತಿ ಮಂದಾನ 38, ಹರ್ಮನ್‌ಪ್ರೀತ್ ಕೌರ್ ಔಟಾಗದೆ 54, ಸುಲ್ತಾನ ಖಾತೂನ್ 25ಕ್ಕೆ2, ಮರೂಫಾ ಅಖ್ತರ್ 18ಕ್ಕೆ1) ಫಲಿತಾಂಶ: ಭಾರತ ತಂಡಕ್ಕೆ 7 ವಿಕೆಟ್‌ಗಳ ಜಯ. ಸರಣಿಯಲ್ಲಿ 1–0 ಮುನ್ನಡೆ



ಹರ್ಮನ್‌ಪ್ರೀತ್ ಕೌರ್ ಬ್ಯಾಟಿಂಗ್ –ಎಎಫ್‌ಪಿ ಚಿತ್ರ

ಕೆನಡಾ ಓಪನ್ ಬ್ಯಾಡ್ಮಿಂಟನ್: ಸಿಂಧುಗೆ ನಿರಾಸೆ

ಫೈನಲ್ ಪ್ರವೇಶಿಸಿದ ಸೇನ್

ಕ್ಯಾಲ್ಗರಿ, ಕೆನಡಾ (ಪಿಟಿಐ): ಗೆಲುವಿನ ಓಟ ಮುಂದುವರಿಸಿದ ಭಾರತದ ಲಕ್ಷ್ಯ ಸೇನ್, ಕೆನಡಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್ ಪ್ರವೇಶಿಸಿದರು. ಆದರೆ ಪಿ.ವಿ.ಸಿಂಧು ಅವರು ಸೆಮಿಫೈನಲ್ ತಡೆ ದಾಟಲು ವಿಫಲರಾದರು.

ಶನಿವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ನಾಲ್ಕರಘಟ್ಟದ ಪಂದ್ಯದಲ್ಲಿ ಸೇನ್ 21–17, 21–14 ರಲ್ಲಿ ಜಪಾನ್‌ನ ಕೆಂಟಾ ನಿಶಿಮೊಟೊ ವಿರುದ್ಧ ಗೆದ್ದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ 19ನೇ ಸ್ಥಾನದಲ್ಲಿರುವ ಸೇನ್, 11ನೇ ರ‍್ಯಾಂಕ್‌ನ ಎದುರಾಳಿಯ ವಿರುದ್ಧ ಶಿಸ್ತಿನ ಆಟವಾಡಿದರು.

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ.ಸಿಂಧು, ಮಹಿಳೆಯರ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ 14–21, 15–21 ರಲ್ಲಿ ಜಪಾನ್‌ನ ಅಕಾನೆ ಯಮಗುಚಿ ಎದುರು ಪರಾಭವಗೊಂಡರು.

21 ವರ್ಷದ ಸೇನ್, ಫೈನಲ್‌ನಲ್ಲಿ ಚೀನಾದ ಲಿ ಶಿ ಫೆಂಗ್ ಅವರ ಸವಾಲು ಎದುರಿಸುವರು. ಭಾರತದ ಆಟಗಾರ ಚೀನಾದ ಎದುರಾಳಿಯ ವಿರುದ್ಧ 4–2ರ ಗೆಲುವು–ಸೋಲಿನ ದಾಖಲೆ ಹೊಂದಿದ್ದಾರೆ. ಈಚೆಗೆ ನಡೆದ ಥಾಯ್ಲೆಂಡ್ ಓಪನ್ ಟೂರ್ನಿಯಲ್ಲಿ ಸೇನ್, ಫೆಂಗ್ ವಿರುದ್ಧ ಗೆದ್ದಿದ್ದರು.

2021 ರ ವಿಶ್ವ ಚಾಂಪಿಯನ್‌ಷಿಪ್‌ನ ಕಂಚಿನ ಪದಕ ವಿಜೇತ ಸೇನ್‌ಗೆ ಪ್ರಶಸ್ತಿ ಬರಲು ನೀಗಿಸಲು ಉತ್ತಮ ಅವಕಾಶ ಲಭಿಸಿದೆ. 2022ರ ಆಗಸ್ಟ್‌ನಲ್ಲಿ ಬರ್ಮಿಂಗ್‌ಹ್ಯಾಂ ಕಾಮನ್‌ವೆಲ್ತ್ ಕೂಟದ ಫೈನಲ್ ಬಳಿಕ ಅವರು ಪ್ರಶಸ್ತಿ ಸುತ್ತು ತಲುಪಿರುವುದು ಇದೇ ಮೊದಲು.

ಈ ವರ್ಷದ ಆರಂಭದಲ್ಲಿ ಹಲವು ಟೂರ್ನಿಗಳಲ್ಲಿ ಆರಂಭಿಕ ಹಂತದಲ್ಲೇ ಹೊರಬಿದ್ದಿದ್ದ ಅವರು ಥಾಯ್ಲೆಂಡ್ ಓಪನ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿ ಲಯಕ್ಕೆ ಮರಳಿದ ಸೂಚನೆ ನೀಡಿದ್ದರು.

ಈ ಹಿಂದೆ ವಿಶ್ವ ರ‍್ಯಾಂಕಿಂಗ್‌ನಲ್ಲಿ ಆರನೇ ಸ್ಥಾನಕ್ಕೇರಿದ್ದ ಸೇನ್, ವಿಶ್ವ ಚಾಂಪಿಯನ್‌ಷಿಪ್ ಬಳಿಕ ಮೂಗಿನ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.



ಫೈನಲ್ ಪ್ರವೇಶಿಸಿದ ಲಕ್ಷ್ಯ ಸೇನ್

ಆರ್ಚರಿ: ಪ್ರಿಯಾಂಶ್ ವಿಶ್ವ ಚಾಂಪಿಯನ್



ಪ್ರಿಯಾಂಶ್

ಲಿಮ್‌ರಿಕ್, ಐರ್ಲೆಂಡ್ (ಪಿಟಿಐ): ಭಾರತದ ಪ್ರಿಯಾಂಶ್ ಅವರು ಕಾಂಪೌಂಡ್ ಆರ್ಚರಿಯ 21 ವರ್ಷದೊಳಗಿನವರ ವಿಭಾಗದಲ್ಲಿ ವಿಶ್ವ ಚಾಂಪಿಯನ್ ಆದರು.

ಇಲ್ಲಿ ನಡೆಯುತ್ತಿರುವ ವಿಶ್ವ ಆರ್ಚರಿ ಯೂತ್ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ನಡೆದ ಫೈನಲ್‌ನಲ್ಲಿ ಪ್ರಿಯಾಂಶ್ 147–141 ರಲ್ಲಿ ಸ್ಲೊವೇನಿಯದ ಅಲ್ಜಾಝ್ ಬ್ರೆಂಕ್ ಅವರನ್ನು ಮಣಿಸಿದರು.

18 ವರ್ಷದೊಳಗಿನ ಮಾಜಿ ವಿಶ್ವ ಚಾಂಪಿಯನ್ ಆಗಿರುವ ಬ್ರೆಂಕ್, ಮೊದಲ ಸುತ್ತಿನಲ್ಲಿ ಪ್ರಿಯಾಂಶ್‌ಗೆ ತಕ್ಕ ಪೈಪೋಟಿ ನೀಡಿದರು. ಆದರೆ ಎರಡನೇ ಸುತ್ತಿನ ಬಳಿಕ ಭಾರತದ ಸ್ಪರ್ಧಿ 3 ಪಾಯಿಂಟ್ಸ್‌ಗಳ ಮುನ್ನಡೆ ಪಡೆದರು. ನಾಲ್ಕನೇ ಸುತ್ತಿನ ಬಳಿಕ ಪ್ರಿಯಾಂಶ್ 118–112 ರಲ್ಲಿ ಮೇಲುಗೈ ಸಾಧಿಸಿದ್ದರು. ಅಂತಿಮ ಸುತ್ತಿನಲ್ಲಿ ಇಬ್ಬರೂ ತಲಾ 29 ಪಾಯಿಂಟ್ಸ್ ಕಲೆಹಾಕಿದರು. ಏಳು ಪಾಯಿಂಟ್ಸ್‌ಗಳ ಅಂತರದಲ್ಲಿ ಗೆದ್ದ ಪ್ರಿಯಾಂಶ್ ಚಿನ್ನ ತಮ್ಮದಾಗಿಸಿಕೊಂಡರು.

ಮಹಿಳೆಯರ 18 ವರ್ಷದೊಳಗಿನವರ ವಿಭಾಗದಲ್ಲಿ ಭಾರತದ ಅದಿತಿ ಸ್ವಾಮಿ ಚಾಂಪಿಯನ್ ಆದರು.

ವಿಂಬಲ್ಡನ್: ನಾಲ್ಕರಘಟ್ಟಕ್ಕೆ ಪೆಗುಲಾ; ಆ್ಯಂಡ್ರೀವಾಗೆ ಗೆಲುವು

ಕ್ವಾರ್ಟರ್ ಫೈನಲ್‌ಗೆ ರುಬ್ಲೆವ್, ಸಿನೆರ್

ಲಂಡನ್ (ಎಎಫ್‌ಪಿ/ ರಾಯಿಟರ್ಸ್): ರಷ್ಯಾದ ಆ್ಯಂಡ್ರೆ ರುಬ್ಲೆವ್ ಮತ್ತು ಇಟಲಿಯ ಯಾನಿಕ್ ಸಿನೆರ್ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಭಾನುವಾರ ನಡೆದ ನಾಲ್ಕನೇ ಸುತ್ತಿನ ಪಂದ್ಯದಲ್ಲಿ ರುಬ್ಲೆವ್ 7–5, 6–3, 6–7, 6–7, 6–4 ರಿಂದ ಕಜಕಸ್ತಾನದ ಅಲೆಕ್ಸಾಂಡರ್ ಬಬ್ಲಿಕ್ ವಿರುದ್ಧ ಪ್ರಯಾಸದ ಗೆಲುವು ಸಾಧಿಸಿದರು.

ಎಂಟನೇ ಶ್ರೇಯಾಂಕದ ಆಟಗಾರ ಸಿನೆರ್ 7–6, 6–4, 6–3 ರಿಂದ ಕೊಲಂಬಿಯದ ಡೇನಿಯಲ್ ಗಲಾನ್ ಅವರನ್ನು ಮಣಿಸಿದರು.

ನಾಲ್ಕನೇ ಸುತ್ತಿಗೆ ದಿಮಿತ್ರೊವ್: ವೇಗದ ಸರ್ವ್‌ಗಳ ಮೂಲಕ ಮಿಂಚಿದ ಬಲ್ಗೇರಿಯದ ಗ್ರಿಗೊರ್ ದಿಮಿತ್ರೊವ್ ಅವರು ನಾಲ್ಕನೇ ಸುತ್ತಿಗೆ ಮುನ್ನಡೆದರು.

ಭಾನುವಾರ ನಡೆದ ಪಂದ್ಯದಲ್ಲಿ 21ನೇ ಶ್ರೇಯಾಂಕದ ದಿಮಿತ್ರೊವ್ 6–2, 6–3, 6–2 ರಿಂದ 10ನೇ ಶ್ರೇಯಾಂಕದ ಆಟಗಾರ ಅಮೆರಿಕದ ಫ್ರಾನ್ಸೆಸ್ ಟೈಫೊ ವಿರುದ್ಧ ಗೆದ್ದರು.

ಕಳೆದ ತಿಂಗಳು ಸ್ಟಟ್‌ಗರ್ಟ್ ಓಪನ್ ಟೂರ್ನಿಯಲ್ಲಿ ಗೆದ್ದ ಆತ್ಮವಿಶ್ವಾಸದೊಂದಿಗೆ ಇಲ್ಲಿಗೆ ಬಂದಿದ್ದ ಟೈಫೊ, ಬಲ್ಗೇರಿಯದ ಆಟಗಾರನ ಅನುಭವದ ಮುಂದೆ ನಿರುತ್ತರರಾದರು. ಪಂದ್ಯದುದ್ದಕ್ಕೂ ದಿಮಿತ್ರೊವ್ ಅವರ ಸರ್ವ್ ಅಮೋಘವಾಗಿತ್ತು. ಒಟ್ಟು 13 ಏಸ್‌ಗಳನ್ನು ಸಿಡಿಸಿದರು. ಬೇಸ್‌ಲೈನ್ ಹೊಡೆತಗಳು ಮತ್ತು ನೆಟ್ ಬಳಿಕ ಪರಿಣಾಮಕಾರಿ ಆಟದಿಂದಲೂ ಅವರು ಎದುರಾಳಿಯನ್ನು ಕಂಗೆಡಿಸಿದರು.

ಎಂಟರಘಟ್ಟಕ್ಕೆ ಪೆಗುಲಾ: ವೈವಿಧ್ಯಮಯ ಹೊಡೆತಗಳ ಮೂಲಕ ಎದುರಾಳಿಯನ್ನು ಕಂಗೆಡಿಸಿದ ಅಮೆರಿಕದ ಜೆಸ್ಸಿಕಾ ಪೆಗುಲಾ ಅವರು ಮಹಿಳೆಯರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ನಾಲ್ಕನೇ ಸುತ್ತಿನ ಪಂದ್ಯದಲ್ಲಿ ಅವರು 6–1, 6–3 ರಿಂದ ಉಕ್ರೇನ್‌ನ ಲೆಸಿಯಾ ಸುರೆಂಕೊ ಅವರನ್ನು ಮಣಿಸಿದರು. 22 ವಿನ್ನರ್‌ಗಳನ್ನು ಸಿಡಿಸಿದ ಅವರು ಇಲ್ಲಿ ಮೊದಲ ಬಾರಿ ಎಂಟರಘಟ್ಟ ಪ್ರವೇಶಿಸಿದ ಸಾಧನೆ ಮಾಡಿದರು.

ರಷ್ಯಾದ 16 ವರ್ಷದ ಆಟಗಾರ್ತಿ ಮಿರಾ ಆ್ಯಂಡ್ರೀವಾ 6–2, 7–5 ರಲ್ಲಿ ಅನಸ್ತೇಸಿಯಾ ಪೊತಪೋವಾ ಅವರನ್ನು ಮಣಿಸಿ ನಾಲ್ಕನೇ ಸುತ್ತು ಪ್ರವೇಶಿಸಿದರು.

ಇಲ್ಲಿ ಅರ್ಹತಾ ಸುತ್ತಿನಲ್ಲಿ ಆಡಿ ಬಂದಿದ್ದ ಆ್ಯಂಡ್ರೀವಾ, 22 ವರ್ಷದ ಆಟಗಾರ್ತಿಯ ವಿರುದ್ಧ ಶಿಸ್ತಿನ ಆಟವಾಡಿದರು. ಫ್ರೆಂಚ್ ಓಪನ್‌ನಲ್ಲಿ ಮೂರನೇ ಸುತ್ತು ಪ್ರವೇಶಿಸಿ ಎಲ್ಲರ ಗಮನ ಸೆಳೆದಿದ್ದ ಅವರು, ಇಲ್ಲಿ ಇನ್ನೂ ಒಂದು ಹೆಜ್ಜೆ ಮುಂದಿಟ್ಟಿದ್ದಾರೆ.

ಜೊಕೊವಿಚ್‌ಗೆ 100ನೇ ಪಂದ್ಯ: ಸರ್ಬಿಯದ ನೊವಾಕ್ ಜೊಕೊವಿಚ್ ಅವರು ಪುರುಷರ ಸಿಂಗಲ್ಸ್ ವಿಭಾಗದ ನಾಲ್ಕನೇ ಸುತ್ತಿನಲ್ಲಿ ಪೋಲೆಂಡ್‌ನ ಹುಬರ್ಟ್ ಹುರ್ಕಜ್ ವಿರುದ್ಧ ಪೈಪೋಟಿ ನಡೆಸುವರು. ಜೊಕೊವಿಚ್ ಅವರಿಗೆ ವಿಂಬಲ್ಡನ್‌ನಲ್ಲಿ ಇದು 100ನೇ ಪಂದ್ಯ ಎನಿಸಿದೆ.

ಸರ್ಬಿಯದ ಆಟಗಾರ ಹುಬರ್ಟ್ ವಿರುದ್ಧ 2019ರ ವಿಂಬಲ್ಡನ್ ಟೂರ್ನಿಯಲ್ಲಿ ದೊರೆತ ಜಯ ಒಳಗೊಂಡಂತೆ 5–0 ಗೆಲುವಿನ ದಾಖಲೆ ಹೊಂದಿದ್ದಾರೆ. ಪೋಲೆಂಡ್‌ನ ಆಟಗಾರ 2021 ರಲ್ಲಿ ಇಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದರು.



ಮಿರಾ ಆ್ಯಂಡ್ರೀವಾ ಆಟದ ವೈಖರಿ –ಎಎಫ್‌ಪಿ ಚಿತ್ರ

ಬೋಪಣ್ಣ, ಯೂಕಿಗೆ ನಿರಾಸೆ

ಭಾರತದ ಯೂಕಿ ಭಾಂಬ್ರಿ–ಸಾಕೇತ್ ಮೈನೇನಿ ಜೋಡಿ ಪುರುಷರ ಡಬಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ 4-6, 6-4, 4-6 ರಿಂದ ಸ್ಪೇನ್‌ನ ಅಲೆಕ್ಸಾಂಡ್ರೊ ಫಾಕಿನಾ ಮತ್ತು ಫ್ರಾನ್ಸ್‌ನ ಅಡ್ರಿಯಾನ್ ಮನಾರಿನೊ ಎದುರು ಮಣಿಯಿತು.

ರೋಹನ್ ಬೋಪಣ್ಣ ಮತ್ತು ಕೆನಡಾದ ಗ್ಯಾಬ್ರಿಯೆಲ್ ದೆಬ್ರೊವ್‌ಸ್ಕಿ ಜೋಡಿ 7–6, 3–6, 4–6 ರಿಂದ ಇವಾನ್ ದೊಡಿಗ್–ಲಿತಿಶಾ ಚಾನ್ ಕೈಯಲ್ಲಿ ಪರಾಭವಗೊಂಡಿತು.

ಮಾನಸ್ ಧಾಮ್ನೆ ಅವರು ಬಾಲಕರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ 47ನೇ ರ‍್ಯಾಂಕ್‌ನ ಆಟಗಾರ ಆಸ್ಟ್ರೇಲಿಯಾದ ಹೇಡನ್ ಜೋನ್ಸ್ ವಿರುದ್ಧ 6–2, 6–4 ಸೆಟ್‌ಗಳಿಂದ ಗೆದ್ದರು.

ವಿಶ್ವಕಪ್ ಕ್ವಾಲಿಫಯರ್ ಫೈನಲ್: ಶ್ರೀಲಂಕಾ ಜಯಭೇರಿ

ಮಧುಶಂಕಾ ದಾಳಿ: ನೆದರ್ಲೆಂಡ್ಸ್ ತತ್ತರ

ಹರಾರೆ (ಪಿಟಿಐ): ವೇಗದ ಬೌಲರ್ ದಿಲ್ಶಾನ್ ಮಧುಶಂಕಾ ಮತ್ತು ಮಹೀಷ್ ತೀಕ್ಷಣ ಅವರ ಅಮೋಘ ದಾಳಿಯ ಮುಂದೆ ನೆದರ್ಲೆಂಡ್ಸ್ ಕುಸಿಯಿತು.

ಇಲ್ಲಿ ಭಾನುವಾರ ನಡೆದ ವಿಶ್ವಕಪ್ ಕ್ವಾಲಿಫಯರ್ ಫೈನಲ್‌ನಲ್ಲಿ ಶ್ರೀಲಂಕಾ ತಂಡವು 128 ರನ್‌ಗಳ ಜಯ ಸಾಧಿಸಿತು.

ಹರಾರೆ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ನಡೆದ ಏಕದಿನ ಪಂದ್ಯದಲ್ಲಿ ಟಾಸ್ ಗೆದ್ದ ನೆದರ್ಲೆಂಡ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ಶ್ರೀಲಂಕಾಗೆ ಉತ್ತಮ ಆರಂಭ ಲಭಿಸಲಿಲ್ಲ. ಆದರೆ, ಸಹನ್ ಅರಾಚಿಗೆ (57; 71ಎ, 4X4) ಮತ್ತು ಕುಶಾಲ ಮೆಂಡಿಸ್ (43; 52ಎ) ಅವರ ಉತ್ತಮ ಬ್ಯಾಟಿಂಗ್‌ನಿಂದಾಗಿ ತಂಡವು 47.5 ಓವರ್‌ಗಳಲ್ಲಿ 233 ರನ್ ಗಳಿಸಿ ಆಲೌಟ್ ಆಯಿತು. ಗುರಿ ಬೆನ್ನಟ್ಟಿದ ನೆದರ್ಲೆಂಡ್ಸ್ ತಂಡವು 23.3 ಓವರ್‌ಗಳಲ್ಲಿ 105 ರನ್ ಗಳಿಸಲು ಮಾತ್ರ ಶಕ್ತವಾಯಿತು.

ಮಧುಶಂಕಾ (18ಕ್ಕೆ3) ಮತ್ತು ತೀಕ್ಷಣ (31ಕ್ಕೆ4) ಎದುರಾಳಿ ತಂಡವನ್ನು ಅಲ್ಪಮೊತ್ತಕ್ಕೆ ಕಟ್ಟಿಹಾಕಿದರು. ಸ್ಪಿನ್ನರ್ ವಣಿಂದು ಹಸರಂಗಾ ಕೂಡ ಎರಡು ವಿಕೆಟ್ ಗಳಿಸಿದರು.

ನೆದರ್ಲೆಂಡ್ಸ್‌ನ ವಿಕ್ರಮಜೀತ್ ಸಿಂಗ್ (13; 14ಎ), ಮ್ಯಾಕ್ ಒಡೌಡ್(33;63ಎ,4X1,6X1)ಮತ್ತುಲೊಗನ್‌ವ್ಯಾನ್‌ಬೀಕ್ (ಔಟಾಗದೆ 20) ಅವರು ಮಾತ್ರ ಎರಡಂಕಿ ತಲುಪಿದರು. ಉಳಿದವರು ವೈಫಲ್ಯ ಅನುಭವಿಸಿದರು.

ಮಧುಶಂಕಾ ದಾಳಿಗೆ ವಿಕ್ರಮಜೀತ್ ಸಿಂಗ್, ವೆಸ್ಲಿ ಬರೆಸಿ ಮತ್ತು ನೊಹ್ ಕ್ರೋಸ್ ವಿಕೆಟ್ ಉರುಳಿದವು. ಇದರಿಂದಾಗಿ ಅಗ್ರಕ್ರಮಾಂಕ ವಿಫಲವಾಯಿತು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 47.5 ಓವರ್‌ಗಳಲ್ಲಿ 233 (ಕುಶಾಲ ಮೆಂಡಿಸ್ 43, ಸಹನ್ ಅರಚಾಚಿಗೆ 57, ಚರಿತ ಅಸಲಂಕಾ 36, ವಿಕ್ರಮಜೀತ್ ಸಿಂಗ್ 12ಕ್ಕೆ2, ಸಕೀಬ್ ಝುಲ್ಫೀಕರ್ 39ಕ್ಕೆ2 ವ್ಯಾನ್ ಬೀಕ್ 40ಕ್ಕೆ2, ರಿಯಾನ್ ಕ್ಲೀನ್ 42ಕ್ಕೆ2) ನೆದರ್ಲೆಂಡ್ಸ್: 23.3 ಓವರ್‌ಗಳಲ್ಲಿ 105 (ವಿಕ್ರಮಜೀತ್ ಸಿಂಗ್ 13, ಮ್ಯಾಕ್ಸ್ ಒದೌಡ್ 33, ಲೊಗನ್ ವ್ಯಾನ್ ಬೀಕ್ ಔಟಾಗದೆ 20, ದಿಲ್ಶಾನ್ ಮಧುಶಂಕಾ 18ಕ್ಕೆ3, ಮಹೀಷ್ ತೀಕ್ಷಣ 31ಕ್ಕೆ4, ವಣಿಂದು ಹಸರಂಗಾ 35ಕ್ಕೆ2) ಫಲಿತಾಂಶ: ಶ್ರೀಲಂಕಾ ತಂಡಕ್ಕೆ 128 ರನ್‌ಗಳ ಜಯ. ಪಂದ್ಯಶ್ರೇಷ್ಠ: ದಿಲ್ಶಾನ್ ಮಧುಶಂಕಾ.



ದಿಲ್ಶಾನ್ ಮಧುಶಂಕಾ ಬೌಲಿಂಗ್ –ಎಎಫ್‌ಪಿ ಚಿತ್ರ

ಏಷ್ಯನ್ ಅಥ್ಲೆಟಿಕ್ಸ್: ಹಿಂದೆ ಸರಿದ ಪ್ರವೀಣ್, ರೋಹಿತ್

ನವದೆಹಲಿ (ಪಿಟಿಐ): ಟ್ರಿಪಲ್ ಜಂಪರ್ ಪ್ರವೀಣ್ ಚಿತ್ರವೇಲ್ ಮತ್ತು ಜಾವೆಲಿನ್ ಥ್ರೋ ಸ್ಪರ್ಧಿ ರೋಹಿತ್ ಯಾದವ್ ಅವರು ಏಷ್ಯನ್ ಅಥ್ಲೆಟಿಕ್ಸ್‌ನಿಂದ ಹಿಂದೆ ಸರಿದಿದ್ದು, ಭಾರತಕ್ಕೆ ಹಿನ್ನಡೆ ಉಂಟುಮಾಡಿದೆ.

ಏಷ್ಯನ್ ಚಾಂಪಿಯನ್‌ಷಿಪ್ ಬ್ಯಾಂಕಾಂಕ್‌ನಲ್ಲಿ ಬುಧವಾರ ಆರಂಭವಾಗಲಿದ್ದು, ಭಾರತ ತಂಡದ ಸದಸ್ಯರು ಶನಿವಾರ ರಾತ್ರಿ ಬ್ಯಾಂಕಾಂಕ್‌ಗೆ ಪ್ರಯಾಣಿಸಿದರು. ಯಾದವ್ ಮತ್ತು ಚಿತ್ರವೇಲ್ ತಂಡದ ಜತೆ ತೆರಳಲಿಲ್ಲ. ಇಬ್ಬರೂ ಗಾಯದಿಂದ ಸಂಪೂರ್ಣವಾಗಿ ಚೇತರಿಸಿಕೊಳ್ಳದ್ದು ಇದಕ್ಕೆ ಕಾರಣ.

ಲಾಂಗ್‌ಜಂಪರ್ ಜೆಸ್ವಿನ್ ಆಲ್ಡ್ರಿನ್ ಕೂಡಾ ಹಿಂದೆ ಸರಿದಿದ್ದಾರೆ. ಜೂನ್ 30 ರಂದು ಲೂಸಾನ್‌ನಲ್ಲಿ ನಡೆದಿದ್ದ ಡೈಮಂಡ್ ಲೀಗ್ ಕೂಟದಲ್ಲಿ ಅವರು ಫಿಟ್‌ನೆಸ್ ಸಮಸ್ಯೆಯಿಂದ ಪಾಲ್ಗೊಂಡಿರಲಿಲ್ಲ. ನೀರಜ್ ಚೋಪ್ರಾ ಅನುಪಸ್ಥಿತಿಯಲ್ಲಿ ಯಾದವ್ ಅವರು ಭಾರತದ ಪದಕದ ಭರವಸೆ ಎನಿಸಿದ್ದರು. ಇದೀಗ ಜಾವೆಲಿನ್ ಥ್ರೋನಲ್ಲಿ ಡಿ.ಪಿ.ಮನು ಮಾತ್ರ ಭಾಗವಹಿಸಲಿದ್ದಾರೆ.

ಐಸಿಸಿ ಆದಾಯ; ಸಿಂಹಪಾಲು ಗಳಿಕೆಗೆ ಬಿಸಿಸಿಐ ಸಿದ್ಧ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಸರ್ವಸದಸ್ಯರ ವಾರ್ಷಿಕ ಸಭೆಯು ಡರ್ಬನ್‌ನಲ್ಲಿ ಸೋಮವಾರ ಆರಂಭವಾಗಲಿದೆ.

ಐಸಿಸಿಯ ಆದಾಯದಲ್ಲಿ ತನ್ನ ಪಾಲಿನ ₹ 1900 ಕೋಟಿಗೆ ಅನುಮೋದನೆ ಪಡೆಯಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸಿದ್ಧವಾಗಿದೆ.

ಇದಲ್ಲದೇ ಸಭೆಯಲ್ಲಿ ಏಕದಿನ ಕ್ರಿಕೆಟ್ ಮಾದರಿಯ ಭವಿಷ್ಯ ಮತ್ತು ಟಿ20 ಫ್ರ್ಯಾಂಚೈಸಿ ಲೀಗ್‌ಗಳಲ್ಲಿ ಆಟಗಾರರ ಸ್ಪರ್ಧೆಯ ಕುರಿತ ನಿಯಮ ರೂಪಿಸುವ ಕುರಿತು ಚರ್ಚೆ ನಡೆಯಲಿವೆ.

ಅಲ್ಲದೇ ಮುಂದಿನ ವರ್ಷ ವೆಸ್ಟ್ ಇಂಡೀಸ್ ಮತ್ತು ಅಮೆರಿಕ ಆತಿಥ್ಯದಲ್ಲಿ ಟಿ20 ವಿಶ್ವಕಪ್ ಟೂರ್ನಿ ಆಯೋಜನೆಯ ಕುರಿತು ನಿರ್ಧಾರ ಕೈಗೊಳ್ಳುವ ನಿರೀಕ್ಷೆ ಇದೆ.

ಈ ಸಭೆಯಲ್ಲಿ ಐಸಿಸಿಯ ವಾರ್ಷಿಕ ಆದಾಯ ಹಂಚಿಕೆಯ ವಿಷಯವು ಚರ್ಚೆ ಆಗಲಿದೆ. ಐಸಿಸಿಯು ಗಳಿಸುವ ವಾರ್ಷಿಕ ಗಳಿಕೆಯಲ್ಲಿ ಬಿಸಿಸಿಐ ತನ್ನ ಪಾಲಿನ 38.5ರಷ್ಟು ಆದಾಯ ಪಡೆಯಲು ಅನುಮೋದನೆ ಗಳಿಸುವ ವಿಶ್ವಾಸದಲ್ಲಿದೆ. ಇದು ಉಳಿದೆಲ್ಲ ಸದಸ್ಯ ರಾಷ್ಟ್ರಗಳಿಗಿಂತಲೂ ಹೆಚ್ಚಿನ ಮೊತ್ತವಾಗಿದೆ.

ಐಸಿಸಿಯ ಹಣಕಾಸು ಮತ್ತು ವಾಣಿಜ್ಯ ವ್ಯವಹಾರಗಳು ಸಮಿತಿಯು ಈ ಪ್ರಸ್ತಾವಕ್ಕೆ ಅನುಮೋದನೆ ನೀಡಬೇಕಿದೆ. ನಂತರ ಮಂಡಳಿಗಳ ನಿರ್ದೇಶಕರ ಸಭೆಯಲ್ಲಿ ಔಪಚಾರಿಕವಾಗಿ ಒಪ್ಪಿಗೆ ಸಿಗಲಿದೆ.

' ಆದಾಯದಲ್ಲಿ ಶೇಕಡಾವಾರು ಹಂಚಿಕೆಯ ನಿಯಮದಲ್ಲಿ ಭಾರತವು 38.5ರಷ್ಟು ಪಡೆಯುವುದು ಸಮಂಜಸವೆನಿಸುತ್ತಿಲ್ಲ. ಏಕೆಂದರೆ ಇಂಗ್ಲೆಂಡ್ ಕ್ರಿಕೆಟ್ ಮಂಡಳಿ 6.89 ಮತ್ತು ಕ್ರಿಕೆಟ್ ಆಸ್ಟ್ರೇಲಿಯಾ 6.25ರಷ್ಟು ಪಾಲು ಪಡೆಯಲಿವೆ. ಈ ಆಯಾಮವನ್ನೂ ನೋಡಬೇಕು. ಪ್ರತಿಯೊಂದು ಸದಸ್ಯ ರಾಷ್ಟ್ರವೂ ಕಳೆದ ಎಂಟು ವರ್ಷಗಳಿಂದ ಒಂದೇ ಬಗೆಯ ಪಾಲು ಪಡೆಯುತ್ತಿವೆ' ಎಂದು ಐಸಿಸಿ ಸದಸ್ಯರೊಬ್ಬರು ಹೇಳಿದ್ದಾರೆ.

ಟಿ20 ಭರಾಟೆಯಲ್ಲಿ ಕ್ಷೀಣಿಸುತ್ತಿರುವ ಏಕದಿನ ಮಾದರಿ ಕ್ರಿಕೆಟ್ ಆಯೋಜನೆಯ ಕುರಿತು ಚರ್ಚೆ ನಡೆಯಲಿದೆ. 2028ರ ರಿಂದ 32ರವರೆಗಿನ ವೇಳಾಪಟ್ಟಿಯಲ್ಲಿ ಈ ಮಾದರಿಯ ಪಂದ್ಯಗಳ ಆಯೋಜನೆ ಕುರಿತು ಚರ್ಚೆ ನಡೆಯಲಿದೆ.

ಪಾಕಿಸ್ತಾನ ತಂಡವು ಭಾರತದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್‌ಗೆ ತೆರಳುವ ಕುರಿತ ವಿಷಯವೂ ಪ್ರಸ್ತಾಪವಾಗಲಿದೆ. ಪಾಕ್ ಕ್ರಿಕೆಟ್ ಮಂಡಳಿಯ ಮುಖ್ಯಸ್ಥರೂ ಈ ಸಭೆಗೆ ಹಾಜರಾಗುವರು.

ಸೋಮವಾರ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳ ಸಭೆ, ಮಂಗಳವಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆ, ಬುಧವಾರ ಹಣಕಾಸು ಮತ್ತು ವಾಣಿಜ್ಯ ವ್ಯವಹಾರಗಳ ವಿಭಾಗದ ಸಭೆ ಮತ್ತು ಗುರುವಾರ ಆಡಳಿತ ಮಂಡಳಿ ನಿರ್ದೇಶಕ ಸಭೆ ಮತ್ತು ವಾರ್ಷಿಕ ಸರ್ವ ಸಾಮಾನ್ಯ ಸಭೆ ನಡೆಯಲಿದೆ.

ಏಷ್ಯನ್ ಗೇಮ್ಸ್‌ಗೆ ಭಾರತ ಚೆಸ್ ತಂಡ ಪ್ರಕಟ

ಕೊನೇರು ಹಂಪಿ, ಹಾರಿಕ ಭರವಸೆ

ನವದೆಹಲಿ (ಪಿಟಿಐ): ಎರಡು ಬಾರಿಯ ಚಿನ್ನದ ಪದಕ ವಿಜೇತೆ ಕೊನೇರು ಹಂಪಿ ಅವರು ಏಷ್ಯನ್ ಗೇಮ್ಸ್‌ನ ಚೆಸ್ ಸ್ಪರ್ಧೆಯಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.

ಚೀನಾದ ಹಾಂಗ್‌ಝೌನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ಗೆ ಭಾರತವು 10 ಸದಸ್ಯರ ತಂಡವನ್ನು ಕಳುಹಿಸಲಿದೆ. ಹಂಪಿ, ದ್ರೋಣವಲ್ಲಿ ಹಾರಿಕ ಅವರು ಮಹಿಳೆಯರ ಹಾಗೂ ವಿದಿತ್ ಗುಜರಾತಿ ಮತ್ತು ಅರ್ಜುನ್ ಎರಿಗೈಸಿ ಅವರು ಪುರುಷರ ವಿಭಾಗದಲ್ಲಿ ವೈಯಕ್ತಿಕ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ.

ಪುರುಷರ ತಂಡವು ಗ್ರ್ಯಾಂಡ್ ಮಾಸ್ಟರ್‌ಗಳಾದ ಡಿ.ಗುಕೇಶ್, ಗುಜರಾತಿ, ಎರಿಗೈಸಿ, ಪಿ.ಹರಿಕೃಷ್ಣ ಮತ್ತು ಆರ್.ಪ್ರಗ್ನಾನಂದ ಅವರನ್ನು ಒಳಗೊಂಡಿದೆ. ಮಹಿಳೆಯರ ತಂಡದಲ್ಲಿ ಹಂಪಿ ಮತ್ತು ಹಾರಿಕ ಜತೆಯಲ್ಲಿ ಆರ್. ವೈಶಾಲಿ, ವಂತಿಕಾ ಅಗರವಾಲ್ ಮತ್ತು ಸವಿತಾ ಶ್ರೀ ಸ್ಥಾನ ಪಡೆದಿದ್ದಾರೆ.

ಕಾನ್ಪುರದಲ್ಲಿ ಭಾನುವಾರ ನಡೆದ ಅಖಿಲ ಭಾರತ ಚೆಸ್ ಫೆಡರೇಷನ್ (ಎಐಸಿಎಫ್) ಸಾಮಾನ್ಯ ಸಭೆಯಲ್ಲಿ ತಂಡದ ಆಯ್ಕೆ ನಡೆಯಿತು. ಎಐಸಿಎಫ್ ಅಧ್ಯಕ್ಷ ಸಂಜಯ್ ಕಪೂರ್ ನೇತೃತ್ವದಲ್ಲಿ ಸಭೆ ನಡೆಯಿತು.

ಚೀನಾದಲ್ಲಿ ಕೋವಿಡ್ ಆತಂಕ ಇರುವುದರಿಂದ ಏಷ್ಯನ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಹಂಪಿ ಈ ವರ್ಷದ ಆರಂಭದಲ್ಲಿ ಹೇಳಿದ್ದರು. 36 ವರ್ಷದ ಅವರು ಭಾರತ ತಂಡದಲ್ಲಿರುವ ಹಿರಿಯ ಸ್ಪರ್ಧಿ ಎನಿಸಿದ್ದಾರೆ. 2006ರ ದೋಹಾ ಏಷ್ಯನ್ ಗೇಮ್ಸ್‌ನಲ್ಲಿ ಅವರು ಮಹಿಳೆಯರ ವೈಯಕ್ತಿಕ ಹಾಗೂ ತಂಡ ವಿಭಾಗದಲ್ಲಿ ಚಿನ್ನ ಗೆದ್ದಿದ್ದರು. ಹಾರಿಕ ಅವರು 2010ರ ಗುವಾಂಗ್‌ಝೌ ಕೂಟದಲ್ಲಿ ಕಂಚು ಜಯಿಸಿದ್ದರು. ತಂಡದಲ್ಲಿರುವ ಇತರರು ಚೊಚ್ಚಲ ಪದಕದ ನಿರೀಕ್ಷೆಯಲ್ಲಿದ್ದಾರೆ.

13 ವರ್ಷಗಳ ಬಿಡುವಿನ ಬಳಿಕ ಚೆಸ್ ಕ್ರೀಡೆ ಏಷ್ಯನ್ ಗೇಮ್ಸ್‌ಗೆ 'ಮರಳಿದೆ'. 2014ರ ಇಂಚೋನ್ ಮತ್ತು 2018ರ ಜಕಾರ್ತ ಏಷ್ಯನ್ ಗೇಮ್ಸ್‌ಗಳಲ್ಲಿ ಚೆಸ್ ಕ್ರೀಡೆಗೆ ಸ್ಥಾನ ಇರಲಿಲ್ಲ.



ಕೊನೇರು ಹಂಪಿ

ಡಿಸೆಂಬರ್‌ನಲ್ಲಿ ಚೆಸ್ ಲೀಗ್

ಇದೇ ಡಿಸೆಂಬರ್‌ನಲ್ಲಿ 'ಇಂಡಿಯನ್ ಚೆಸ್ ಲೀಗ್' ಆರಂಭಿಸಲು ಅಖಿಲ ಭಾರತ ಚೆಸ್ ಫೆಡರೇಷನ್ ನಿರ್ಧರಿಸಿದೆ. ಫ್ರಾಂಚೈಸ್ ಆಧರಿತ ಲೀಗ್‌ನ ಹರಾಜು ಪ್ರಕ್ರಿಯೆಯ ರೂಪುರೇಷೆಯನ್ನು 15 ದಿನಗಳಲ್ಲಿ ಅಂತಿಮಗೊಳಿಸಲಾಗುವುದು ಎಐಸಿಎಫ್ ಅಧ್ಯಕ್ಷ ಸಂಜಯ್ ಕಪೂರ್ ತಿಳಿಸಿದರು.

'ಐಪಿಎಲ್ ಮಾದರಿಯಲ್ಲಿ ಈ ಲೀಗ್ ನಡೆಯಲಿದ್ದು, 6 ರಿಂದ 8 ತಂಡಗಳು ಪಾಲ್ಗೊಳ್ಳಲಿವೆ. ಭಾರತದ ಚೆಸ್ ಕ್ರೀಡೆಯನ್ನು ಹೊಸ ದಿಕ್ಕಿನತ್ತ ಕೊಂಡೊಯ್ಯಬೇಕಿದೆ' ಎಂದು ಅವರು ಹೇಳಿದರು.

ಚೆಸ್: ಜಂಟಿ 6ನೇ ಸ್ಥಾನದಲ್ಲಿ ಆನಂದ್

ಜಗ್ರೆಬ್ (ಪಿಟಿಐ): ಭಾರತದ ವಿಶ್ವನಾಥನ್ ಆನಂದ್ ಮತ್ತು ಡಿ.ಗುಕೇಶ್ ಅವರು ಗ್ರ್ಯಾಂಡ್ ಚೆಸ್ ಟೂರ್‌ನಲ್ಲಿ ಬ್ಲಿಟ್ಜ್ ಸ್ಪರ್ಧೆಯ ಒಂಬತ್ತು ಪಂದ್ಯಗಳ ಬಳಿಕ ಜಂಟಿ ಆರನೇ ಸ್ಥಾನದಲ್ಲಿದ್ದಾರೆ.

ಆನಂದ್ ಅವರು ಬ್ಲಿಟ್ಜ್ ಮಾದರಿಯಲ್ಲಿ ಒಂಬತ್ತು ಪಂದ್ಯಗಳಲ್ಲಿ ಎರಡನ್ನು ಮಾತ್ರ ಗೆದ್ದರು. ಅದರಲ್ಲಿ ಒಂದು ಗೆಲುವು ಗುಕೇಶ್ ವಿರುದ್ಧ ಬಂದರೆ, ಇನ್ನೊಂದು ಗೆಲುವು ಫ್ಯಾಬಿಯಾನೊ ಕರುವಾನ ಎದುರು ದೊರೆಯಿತು.

ಗುಕೇಶ್, ಮೊದಲ ಪಂದ್ಯದಲ್ಲಿ ರೊಮೇನಿಯದ ರಿಚರ್ಡ್ ರ‍್ಯಾಪೋರ್ಟ್ ಅವರನ್ನು ಮಣಿಸಿದರೂ ಬಳಿಕ ಸತತ ನಾಲ್ಕು ಪಂದ್ಯಗಳಲ್ಲಿ ಸೋತರು. ಆ ಬಳಿಕ ಪುಟಿದೆದ್ದ ಅವರು ರೊಮೇನಿಯದ ಕಾನ್‌ಸ್ಟಾಟಿನ್ ಲುಪುಲೆಸ್ಕು ಮತ್ತು ಪೋಲೆಂಡ್‌ನ ಯಾನ್ ಕ್ರಿಸ್ಟೋಫ್ ದೂಡಾ ವಿರುದ್ಧ ಗೆದ್ದರು.

ಕೊನೆಯ ಎರಡು ಪಂದ್ಯಗಳಲ್ಲಿ ಕ್ರೊವೇಷ್ಯದ ಇವಾನ್ ಶಾರಿಕ್ ಮತ್ತು ಇಯಾನ್ ನೆಪೊಮ್‌ನಿಷಿ ಎದುರು ಪರಾಭವಗೊಂಡರು.

ಆನಂದ್ ಮತ್ತು ಗುಕೇಶ್ ತಲಾ 13 ಪಾಯಿಂಟ್ಸ್ ಕಲೆಹಾಕಿದ್ದಾರೆ.

ವಿಶ್ವದ ಅಗ್ರಮಾನ್ಯ ಆಟಗಾರ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಎಲ್ಲ ಒಂಬತ್ತು ಪಂದ್ಯಗಳನ್ನು ಗೆದ್ದರು. ಅವರು 20 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ.



ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಭಾನುವಾರ ನಡೆದ 'ಮಹಾರಾಜಾಸ್ ಗೋಲ್ಡ್ ಕಪ್' ರೇಸ್ ಗೆದ್ದ ಕಿಂಗ್ಸ್ ರ‍್ಯಾನ್ಸಮ್ (ಜಾಕಿ: ಪಿ.ಟ್ರೆವರ್) ಕುದುರೆ ಗುರಿ ತಲುಪಿದ ಕ್ಷಣ –ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್


MARUTI SUZUKI
NEXA
INTRODUCING
INVICTO
THE LEAGUE OF EXTRAORDINARY
INVICTO
INTELLIGENT ELECTRIC HYBRID
CREATE. INSPIRE.
INTELLIGENT ELECTRIC HYBRID*
PANORAMIC SUNROOF WITH AMBIENT LIGHTS
2ND ROW CAPTAIN SEATS
POWERED DRIVER SEAT WITH MEMORY FUNCTION
MULTI-ZONE CLIMATE CONTROL (FRONT AND REAR)
ONE-TOUCH POWERED TAIL GATE
SMARTPLAY MAGNUM+
SUZUKI CONNECT WITH eCALL
Contact us at
1800-200-[6392]
1800-102-[NEXA]
www.nexaexperience.com
NOW YOU CAN ALSO BOOK ONLINE
WEST BANGALORE: NEXA NAGARBHAVI (BIMAL AUTO AGENCY PH: 08030693069), NEXA RAJAJINAGAR (VARUN MOTORS PVT. LTD. PH: 8884000042), NEXA RR NAGAR (KALYANI MOTORS PH: 9590990011),
NORTH BANGALORE: NEXA HEBBAL ORR (VARUN MOTORS PVT. LTD. PH: 9513838777), NEXA YELAHANKA (MANDOVI MOTORS PVT. LTD. PH: 9916805500), EAST BANGALORE: NEXA ORR MARATHALLI (BIMAL AUTO AGENCY PH: 08030693069),
NEXA BANASWADI (KALYANI MOTORS PH: 9590990011), CENTRAL BANGALORE: NEXA MUSEUM ROAD (PRATHAM MOTORS PH: 9880006006), NEXA PALACE (MANDOVI MOTORS PH: 7022623068),
SOUTH BANGALORE: NEXA ELECTRONIC CITY (SURAKSHAA CAR CARE PVT. LTD. PH: 80-25732229, 8884442229), NEXA JP NAGAR (KALYANI MOTORS PH: 9590990011), NEXA SARJAPUR ROAD (PRATHAM MOTORS PH: 9008455550),
NEXA KORAMANGALA (KATARIA AUTOMOBILES PVT. LTD. PH: 8046837002), TUMKUR: NEXA SIRA ROAD (SAKETH AUTOMOBILES PH: 9900500051).
SMART FINANCE
AN ONLINE END-TO-END CAR FINANCE SOLUTION
Multiple financiers
Digital Document Upload
Live Loan status
Complete transparency (associated fees & charges)
Scan to know more.
For creative visualization and illustrative purposes only. | Accessories and features shown may not be part of standard equipment. | Car model and accessories shown may vary from the actual product and car colour may vary due to printing on paper. | For details on functioning of safety features, including air bag, kindly refer to the Owner's Manual. *For representational purpose only.